KA / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಜೂನ್ ೧೮, ೨೦೦೯ (ಜ್ಯೇಷ್ಠ ೨೮, ಶಕವರ್ಷ ೧೯೩೧) || ಸಂಚಿಕೆ ೨೫

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
381	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಬೆಂಗಳೂರು ಉತ್ತರ ಜಿಲ್ಲೆ.
382	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಬೆಂಗಳೂರು ದಕ್ಷಿಣ ಜಿಲ್ಲೆ.
383	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಬೆಂಗಳೂರು ಗ್ರಾಮಾಂತರ ಜಿಲ್ಲೆ.
384	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ರಾಮನಗರ ಜಿಲ್ಲೆ.
385	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಕೋಲಾರ ಜಿಲ್ಲೆ.
386	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ತುಮಕೂರು ಜಿಲ್ಲೆ.
387	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಮಧುಗಿರಿ ಜಿಲ್ಲೆ.
388	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಶಿವಮೊಗ್ಗ ಜಿಲ್ಲೆ.
389	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಚಿತ್ರದುರ್ಗ ಜಿಲ್ಲೆ.
390	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ದಾವಣಗೆರೆ ಜಿಲ್ಲೆ.
391	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಹಾಸನ ಜಿಲ್ಲೆ.
392	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಕೊಡಗು ಜಿಲ್ಲೆ.
393	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ದಕ್ಷಿಣ ಕನ್ನಡ ಜಿಲ್ಲೆ.
394	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಉಡುಪಿ ಜಿಲ್ಲೆ.
395	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಬೆಳಗಾವಿ ಜಿಲ್ಲೆ.
396	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009–10, ದಿ. 4.6.2009 – 2009–10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ – ಚಿಕ್ಕೋಡಿ ಜಿಲ್ಲೆ.

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
397	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಬಿಜಾಪುರ ಜಿಲ್ಲೆ.
398	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಬಾಗಲಕೋಟೆ ಜಿಲ್ಲೆ.
399	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಧಾರವಾಡ ಜಿಲ್ಲೆ.
400	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಗದಗ ಜಿಲ್ಲೆ.
401	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಹಾವೇರಿ ಜಿಲ್ಲೆ.
402	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಉತ್ತರ ಕನ್ನಡ ಜಿಲ್ಲೆ.
403	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಗುಲ್ಬರ್ಗಾ ಜಿಲ್ಲೆ.
404	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಯಾದಗಿರಿ ಜಿಲ್ಲೆ.
405	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಬಳ್ಳಾರಿ ಜಿಲ್ಲೆ.
406	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ರಾಯಚೂರು ಜಿಲ್ಲೆ.
407	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಕೊಪ್ಪಳ ಜಿಲ್ಲೆ.
408	4.6.2009	ಸಂ. ಸಿ3(1) ಪ್ರಾಶಾಶಿ:ನೇಮಕ:2009-10, ದಿ. 4.6.2009 - 2009-10ನೇ ಸಾಲಿಗಾಗಿ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿಯಿಂದ ಜಿಲ್ಲಾ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡುವ ಬಗ್ಗೆ - ಬೀದರ್ ಜಿಲ್ಲೆ.
409	4.6.2009	ಸಂ. ಜಿ12/ಪ್ರೌಶಾಶಿ/ನೇಮಕ01/2009-10, ದಿ. 3.6.2009 - ತಿದ್ದುಪಡಿ ಅಧಿಸೂಚನೆ - ಮೈಸೂರು ವಿಭಾಗ.
410	4.6.2009	ಸಂ. ಇ1(ಎ)ಆಡಳಿತ/ಪ್ರೌಶಾಶಿ/ಆಯ್ಕೆ/99/2009-10, ದಿ. 3.6.2009 -ತಿದ್ದುಪಡಿ ಅಧಿಸೂಚನೆ - ಗುಲಬರ್ಗಾ ವಿಭಾಗ.
411	4.6.2009	No. DPAL 21 SHASANA 2009, Dt. 4.6.2009 - The Karnataka Municipal Corporations (Amendment) Ordinance, 2009.
412	4.6.2009	No. DPAL 21 SHASANA 2009, Dt. 4.6.2009 - The Karnataka Stamp (Amendment) Ordinance, 2009.
413	4.6.2009	No. UDD 59 MLR 2009, Dt. 4.6.2009 - Delimitation of wards in Bruhat Bangalore Mahanagara Palike - Modification of guidelines - reg.
414	5.6.2009	No. HD 230 SST 2009, Dt. 24.4.2009 - Addendum - No. HD 837 SST 2006, Dt. 25.4.2008.
415	6.6.2009	ಸಂ. ಸಿಐ 735 ಎಸ್‌ಪಿಕ್ಯೂ 2007, ದಿ. 5.6.2009 - ಬೆಂಗಳೂರು ಜಿಲ್ಲೆಯ ಹೆಬ್ಬಾಳ ಗ್ರಾಮಕ್ಕೆ ಸಂಬಂಧಿಸಿದಂತೆ 1966ರ ಕೈಪ್ರ.ಕಾ. ವಿಧಿ 4ರ ಮೇರೆಗೆ ಅಧಿಸೂಚನೆ.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)................................	7-00	325-00
8.	ಭಾಗ - 6ಎ (ಮೈಸೂರು)................................	50-00	1111-00
9.	ಭಾಗ - 6ಬಿ (ಧಾರವಾಡ)................................	25-00	1637-00
10.	ಭಾಗ - 6ಸಿ (ಗುಲ್ಬರ್ಗ)................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :- 1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೧೮, ೨೦೦೯ (ಜ್ಯೇಷ್ಠ ೨೮, ಶಕ ವರ್ಷ ೧೯೩೧)	ಸಂಚಿಕೆ ೨೫

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರ ಬಳಕೆಗೆ ಒಂದು ಹೊಸ ಕಾರನ್ನು ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ಪ್ರಧಾನ ವ್ಯವಸ್ಥಾಪಕರು ಕೆಬಿಟ್ಸ್‌ರವರ ಪತ್ರ ಸಂಖ್ಯೆ ಕೆಬಿಟ್ಸ್ ಎಸಿಟಿ 03 2008-09, ದಿನಾಂಕ: 2.3.2009 ಮತ್ತು ದಿನಾಂಕ: 7.3.2009.

ಪ್ರಸ್ತಾವನೆ:

ಮೇಲೆ ಓದಲಾದ ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರ ಪತ್ರದಲ್ಲಿ ಪ್ರಧಾನ ವ್ಯವಸ್ಥಾಪಕರ ಬಳಕೆಗೆ ಒಂದು ಹೊಸ ಕಾರನ್ನು ಖರೀದಿಸಲು ಅದ್ವೈತ್ ಮೋಟಾರ್ ಪ್ರೈ.ಲಿ. ಸಂಸ್ಥೆಯಿಂದ ದಿನಾಂಕ: 3.3.2009 ರಂದು ಇನ್ವೈಸ್‌ನ್ನು ಪಡೆಯಲಾಗಿದೆ ಎಂದು ತಿಳಿಸುತ್ತಾ, ಅದರಂತೆ ಒಂದು ಹೊಸ ಹುಂಡೈ ಎಸೆಂಟ್ ಜಿಎಲ್ಇ ಕಾರನ್ನು ರೂ. 4,99,003/–ಗಳ ಬೆಲೆಯಲ್ಲಿ ಖರೀದಿಸಲು ಉದ್ದೇಶಿಸಲಾಗಿದೆ ಅದರ ಜೊತೆಗೆ ರೂ. 70,000/–ಗಳ ರಸ್ತೆ ತೆರಿಗೆ ಮತ್ತು ವಾಹನದ ವಿಮೆ ವೆಚ್ಚ ಭರಿಸಲು ಅವಶ್ಯವಿರುತ್ತದೆಂದು ಎಂದು ತಿಳಿಸುತ್ತಾ, ಒಟ್ಟು ರೂ. 6,00,000/– ಗಳ ವೆಚ್ಚದಲ್ಲಿ ಹೊಸ ಕಾರನ್ನು ಖರೀದಿಸಲು ಹಾಗೂ ಹಣ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ಕೋರಲಾಗಿದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಮಾತಂಇ 20 ಅಡವಿ 2009, ಬೆಂಗಳೂರು, ದಿನಾಂಕ: 11ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರ ಬಳಕೆಗೆ ರೂ. 6,00,000/–ಗಳ ವೆಚ್ಚದಲ್ಲಿ ಒಂದು ಹೊಸ ಹುಂಡೈ ಎಸೆಂಟ್ ಜಿಎಲ್ಇ ಕಾರನ್ನು ಖರೀದಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಸದರಿ ಉದ್ದೇಶಕ್ಕಾಗಿ 2008–09ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'3451–00–090–2–01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ–059–ಇತರೆ ಖರ್ಚುಗಳು (ಯೋಜನೆ)'** ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ರೂ. 6.00 ಲಕ್ಷಗಳನ್ನು [ರೂ. ಆರು ಲಕ್ಷಗಳು ಮಾತ್ರ] ಕೆಬಿಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ವಿತರಿಸಲು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರಿಗೆ ವಿತರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 29 ವೆಚ್ಚ-2/2009, ದಿನಾಂಕ: 17.02.2009 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 852

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಬೆಳಗಾಂನ ಕೇಂದ್ರಿಯ ವಿದ್ಯಾಲಯ ಇವರಿಗೆ ಭೂಮಿಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಅರೆ ಸರ್ಕಾರಿ ಪತ್ರ ಸಂಖ್ಯೆ:ಕ್ರ.ಆರ್‌ಬಿ:ಎಲ್‌ಬಿಪಿ:ವಿವ:274/2006-07, ದಿನಾಂಕ: 27.05.2008.
2. ಪತ್ರ ಸಂಖ್ಯೆ: ಕೆಂಪಸ: ಸಿಬ್ಬಂದಿ: ಸಿಆರ್-3: 2007-08 ದಿನಾಂಕ: 04.07.2008.

ಪ್ರಸ್ತಾವನೆ:

ಬೆಳಗಾವಿಯಲ್ಲಿ ಕೇಂದ್ರೀಯ ವಿದ್ಯಾಲಯ-3 ನ್ನು 2007-08ರಲ್ಲಿ ಪ್ರಾರಂಭವಾಗಿದ್ದರೂ, ಈ ಶಾಲೆಯನ್ನು ಮರಾಠ ಮಂಡಳ ಇವರಿಗೆ ಸೇರಿದ ಖಾಸಗಿ ಕಟ್ಟಡವೊಂದರಲ್ಲಿ ನಡೆಸುತ್ತಿರುವುದಾಗಿ ತಿಳಿಸುತ್ತಾ, ವಿದ್ಯಾರ್ಥಿಗಳ ಅನುಕೂಲತೆಗಾಗಿ ಶಾಲಾ ಕಟ್ಟಡ ಮತ್ತು ಆಟದ ಮೈದಾನ ನಿರ್ಮಿಸಲು ನಿರಾಶ್ರಿತರ ಪರಿಹಾರ ಕೇಂದ್ರ, ಮಚ್ಚೆ-ಬೆಳಗಾವಿ ಇವರಿಗೆ ಸೇರಿದ 10 ಎಕರೆ ವಿಸ್ತೀರ್ಣ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ಬಿಟ್ಟುಕೊಡುವಂತೆ ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ, ಬೆಳಗಾವಿ ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಪತ್ರ ಬರೆಯುತ್ತಾ, ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇವರು ದಿನಾಂಕ:02.06.2008ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಕೇಂದ್ರಿಯ ವಿದ್ಯಾಲಯ-3, ಬೆಳಗಾಂ ಇವರಿಗೆ 08.00 ಎಕರೆಗಳ ವಿಸ್ತೀರ್ಣದ ಭೂಮಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲು ನಿರ್ಣಯಿಸಿರುವುದಾಗಿ ತಿಳಿಸಿರುತ್ತಾರೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 12 ಎಸ್‌ಬಿಆರ್ 2008, ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2009

ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಬೆಳಗಾವಿ ತಾಲ್ಲೂಕಿನ ಮಚ್ಚೆ ಗ್ರಾಮದ ಸರ್ವೆ ನಂ:489/2ರ ಜಮೀನಿನಲ್ಲಿ ಕೇಂದ್ರಿಯ ವಿದ್ಯಾಲಯ-3 ಬೆಳಗಾವಿ-ಇವರಿಗೆ 08.00 ಎಕರೆ ವಿಸ್ತೀರ್ಣದ ಭೂಮಿಯನ್ನು ಪ್ರತಿ ಎಕರೆಗೆ, ಪ್ರತಿ ವರ್ಷಕ್ಕೆ ರೂ.100.00 ಪಾವತಿಸಿರುವ ಷರತ್ತಿಗೊಳಪಟ್ಟು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ಕಂದಾಯ ಇಲಾಖೆ ಹಾಗೂ ಆರ್ಥಿಕ ಇಲಾಖೆ ಸಹಮತಿಯನ್ನು ಅನುಕ್ರಮವಾಗಿ ಟಿಪ್ಪಣಿ ಸಂಖ್ಯೆ: ಆರ್‌ಡಿ 68 ಎಲ್‌ಕೆಎಲ್ 2007, ದಿನಾಂಕ: 20.01.2009 ಹಾಗೂ ಸಂಖ್ಯೆ:ಆಇ 178 ವೆಚ್ಚ-3/09, ದಿನಾಂಕ: 26.02.2009 ರಲ್ಲಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಸುಬ್ಬಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 853

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ: ಶ್ರೀ ಎಂ. ಶ್ರೀನಿವಾಸ್, ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ಇವರ ಪತ್ರ ದಿನಾಂಕ: 17.1.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮಾನ್ಯ ಮುಖ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ, ಇವರು **ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 209ರಿಂದ ರಾಜೀವಗಾಂಧಿ ನವನಗರ ಕಾಲೋನಿಯನ್ನು ಸಂಪರ್ಕಿಸುವ 1.50 ಕಿ.ಮೀ.ಉದ್ದದ** ಗ್ರಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿರುತ್ತಾರೆ.

ಮಾನ್ಯ ಶಾಸಕರ ಕೋರಿಕೆಯ ಮೇರೆಗೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 259 ಸಿಆರ್‌ಎಂ 2009, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2009

ಬೆಂಗಳೂರು ನಗರ ಜಿಲ್ಲೆ, ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 209ರಿಂದ ರಾಜೀವಗಾಂಧಿ ನವನಗರ ಕಾಲೋನಿಯನ್ನು ಸಂಪರ್ಕಿಸುವ 1.50 ಕಿ.ಮೀ. ಉದ್ದದ ಗಾಮೀಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. (ಸಂಪರ್ಕ)

ಪಿ.ಆರ್. 905

ತಿದ್ದುಪಡಿ ಆದೇಶ ಸಂಖ್ಯೆ.ಲೋಇ/01/ಇಎಪಿ/2009, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2009

ವಿಷಯ: ರಾಜ್ಯದಲ್ಲಿನ ರಸ್ತೆ ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ ನೀತಿ ರಚನೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ.ಲೋಇ/01/ಇಎಪಿ/2009 ದಿನಾಂಕ 07-03-2009

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿನ ಆದೇಶ ಭಾಗದ ಅಂಶ 6 ರನ್ನು ತಿದ್ದುಪಡಿ ಮಾಡಲಾಗಿದ್ದು ಕೆಳಕಂಡಂತೆ ಓದಿಕೊಳ್ಳುವುದು.

"ಯೋಜನೆಗಳ ಪ್ರಗತಿಯ ಕುರಿತು ಪ್ರತಿ ಮೂರು ತಿಂಗಳಿಗೆ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಕಾರ್ಯಪಡೆಯು (ಎಸ್‌ಎಲ್‌ಟಿಎಫ್) ಪರಿಶೀಲಿಸಿ ನಿಯಂತ್ರಿಸುವುದು. ಪ್ರತಿನಿತ್ಯದ ಪ್ರಗತಿ ಹಾಗೂ ಸಮಸ್ಯೆಗಳನ್ನು ನಿಯಂತ್ರಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಕಮಿಟಿಯನ್ನು ಸ್ಥಾಪಿಸುವುದು".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 906

ಸಹಕಾರ ಸಚಿವಾಲಯ

ವಿಷಯ: ಗುಲ್ಬರ್ಗಾ ಜಿಲ್ಲೆಯ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಗೆ ಮೂರನೇ ವರ್ಷದ ಕಂತಿನ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1) ಎನ್‌ಸಿಡಿಸಿ, ನವದೆಹಲಿ ಪತ್ರ ಸಂಖ್ಯೆ : ಎನ್‌ಸಿಡಿಸಿ/ 3-11(4)/2001(86) ದಿನಾಂಕ: 03.08.2005.
2) ಸರ್ಕಾರಿ ಆದೇಶ ಸಂಖ್ಯೆ : ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 19.09.2006.
3) ಸರ್ಕಾರಿ ಆದೇಶ ಸಂಖ್ಯೆ : ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 08.11.2006.
4) ಸರ್ಕಾರಿ ಆದೇಶ ಸಂಖ್ಯೆ : ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 26.12.2007.
5) ಸರ್ಕಾರಿ ಆದೇಶ ಸಂಖ್ಯೆ : ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 04.11.2008.
6) ಸರ್ಕಾರಿ ಆದೇಶ ಸಂಖ್ಯೆ : ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 13.01.2009.
7) ಸಹಕಾರ ಸಂಘಗಳ ಜಂಟಿ ನಿಬಂಧಕರು (ಐಸಿಡಿಪಿ)ಪತ್ರ ಸಂಖ್ಯೆ: ಐಸಿಡಿಪಿ/ಗುಲ್ಬರ್ಗ-1/21/05-06 ದಿನಾಂಕ : 02.02.2009.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆಯ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯನ್ನು ರೂ.1398.67 ಲಕ್ಷಗಳ (ರೂ.248.70 ಲಕ್ಷಗಳ ಸಾಲ, ಮತ್ತೆ ರೂ.917.85 ಲಕ್ಷಗಳ ಷೇರು ಬಂಡವಾಳ ಹಾಗೂ ರೂ.232.12 ಲಕ್ಷಗಳ ಸಹಾಯಧನ) ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಎನ್‌ಸಿಡಿಸಿ, ನವದೆಹಲಿ ಒಪ್ಪಿಗೆ ನೀಡಿರುತ್ತದೆ. ಮೇಲೆ ಓದಲಾದ (2)ರ ಆದೇಶದಲ್ಲಿ ಗುಲ್ಬರ್ಗಾ ಜಿಲ್ಲೆಗೆ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಗೆ ಮೊದಲನೇ ವರ್ಷದ ಕಂತು ರೂ.349.66 ಲಕ್ಷಗಳ ಪೈಕಿ ರೂ.336.62 ಲಕ್ಷಗಳನ್ನು (ರೂ 38.11 ಲಕ್ಷಗಳ ಸಾಲ, ರೂ.285.48 ಲಕ್ಷಗಳ ಷೇರು ಬಂಡವಾಳ ಹಾಗೂ ರೂ.13.03 ಲಕ್ಷಗಳ ಸಹಾಯಧನ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ(3)ರ ಆದೇಶದಲ್ಲಿ ಮೊದಲನೇ ವರ್ಷದ ಕಂತಿನಲ್ಲಿ ಬಾಕಿ ಉಳಿದಿರುವ ರೂ.13.04 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (4) ರ ಆದೇಶದಲ್ಲಿ 2ನೇ ವರ್ಷದ ಕಂತು ರೂ.345.095 ಲಕ್ಷಗಳನ್ನು (ರೂ.74.615 ಲಕ್ಷಗಳ ಸಾಲ, ರೂ.227.48 ಲಕ್ಷಗಳ ಷೇರು ಬಂಡವಾಳ ಹಾಗೂ ರೂ.43.00 ಲಕ್ಷಗಳ ಸಾಲ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ. ಮೂರನೇ ವರ್ಷದ ಕಂತಿನ ಷೇರು ಬಂಡವಾಳವನ್ನು ಬಿಡುಗಡೆ ಮಾಡಬೇಕಾದರೆ 2008-2009ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಷೇರು ಬಂಡವಾಳದ ಅನುದಾನಕ್ಕಿಂತ ರೂ.30.54 ಲಕ್ಷಗಳಷ್ಟು ಹೆಚ್ಚಿಗೆ ಅಗತ್ಯವಿರುತ್ತದೆ. ಮೇಲೆ ಓದಲಾದ (5) ರ ಆದೇಶದಲ್ಲಿ ಹೆಚ್ಚುವರಿಯಾಗಿ ಅಗತ್ಯವಿರುವ ಷೇರು ಬಂಡವಾಳ ರೂ.30.54

ಲಕ್ಷಗಳನ್ನು ಲೆಕ್ಕ ಶೀರ್ಷಿಕೆ "4425–00–108–0–53–ಎನ್‌ಸಿಡಿಸಿ ಸಹಾಯದ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯಡಿ ಷೇರು ಬಂಡವಾಳ ನೆರವು–211–ಬಂಡವಾಳ ಹೂಡಿಕೆ" ಇದಕ್ಕೆ ಲೆಕ್ಕ ಶೀರ್ಷಿಕೆ "6425–00–108–3–50–ಎನ್‌ಸಿಡಿಸಿ ಧನ ಸಹಾಯಕ್ಕಾಗಿ ಸಾಲ–ಪುರಸ್ಕೃತ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆ–394–ಸಾಲಗಳು" ಇದರಿಂದ ಮರುಹೊಂದಾಣಿಕೆ ಮಾಡಿಕೊಳ್ಳಲು ಮಂಜೂರಾತಿ ನೀಡಲಾಗಿರುತ್ತದೆ. ಮೇಲೆ ಓದಲಾದ (6) ರ ಆದೇಶದಲ್ಲಿ ಮರು ಹೋಂದಾಣಿಕೆ ಆದ ನಂತರ ಲೇಕ್ಕ ಶೀರ್ಷಿಕೆ "4425–00–108–0–53–ಎನ್‌ಸಿಡಿಸಿ ಸಹಾಯದ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆಯಡಿ ಷೇರು ಬಂಡವಾಳ ನೆರವು–211–ಬಂಡವಾಳ ಹೂಡಿಕೆ(ಯೋಜನೆ)" ಅಡಿ ಲಭ್ಯವಿರುವ ರೂ.227.54 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ (7) ರ ಪತ್ರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಐಸಿಡಿಪಿ) ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜನಾ ವರದಿಯಂತೆ ಇನ್ನೂ ಸಾಲ ರೂ.79.01 ಲಕ್ಷಗಳು ಹಾಗೂ ಸಹಾಯಧನ ರೂ.49.00 ಲಕ್ಷಗಳು ಮಂಜೂರಾಗಬೇಕಾಗಿದ್ದು ಸದರಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಸದರಿ ಪ್ರಸ್ತಾವವನ್ನು ಕೂಲಂಕುಷವಾಗಿ ಪರಿಶೀಲಿಸಿ ರೂ.79.00 ಲಕ್ಷಗಳ ಸಾಲವನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗುತ್ತದೆ.

ಆದುದರಿಂದ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 111 ಸಿಎಲ್‌ಎಸ್ 2006, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಐಸಿಡಿಪಿ ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ "6425–00–108–3–50–ಎನ್‌ಸಿಡಿಸಿ ಧನ ಸಹಾಯಕ್ಕಾಗಿ ಸಾಲ–ಪುರಸ್ಕೃತ ಸಮಗ್ರ ಸಹಕಾರ ಅಭಿವೃದ್ಧಿ ಯೋಜನೆ–394–ಸಾಲಗಳು" ಅಡಿ ಮೂರನೇ ವರ್ಷದ ಕಂತಿನಲ್ಲಿ ಸಾಲ ರೂ 79.00 ಲಕ್ಷಗಳನ್ನು (ರೂ.ಎಪ್ಪತ್ತೊಂಬತ್ತು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಹಣ ಬಿಡುಗಡೆಗೆ ಸಂಬಂಧಪಟ್ಟಂತೆ ಸರ್ಕಾರಿ ಆದೇಶ ಸಂಖ್ಯೆ: ಸಿ.ಒ.111 ಸಿಎಲ್‌ಎಸ್ 2006 ದಿನಾಂಕ 13.01.2009 ರಲ್ಲಿ ಹೊರಡಿಸಲಾದ ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತವೆ.

ಈ ಹಣವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಐಸಿಡಿಪಿ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಹಣ ಸಂದಾಯ ರಸೀದಿ ಮೂಲಕ ಸಹಕಾರ ಸಂಘಗಳ ಅಪರ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ ಬೆಂಗಳೂರು ಇವರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/49/ವೆಚ್ಚ–2/2009 ದಿನಾಂಕ 12.03.2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಹುಚ್ಚಾಚಾರಿ

ಪಿ.ಆರ್. 907

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಸಿಆಸುಇ 1 ಸಅಸೇ 2009, ಬೆಂಗಳೂರು, ದಿನಾಂಕ: 11ನೇ ಮಾರ್ಚ್ 2009

ಅಧಿಸೂಚನೆ ಸಂಖ್ಯೆ ಸಿಆಸುಇ 1 ಸಅಸೇ 2009, ದಿನಾಂಕ 13–9–2009 ರಲ್ಲಿನ ದಿನಾಂಕ 13–9–2009 ಎಂಬುದರ ಬದಲಾಗಿ ದಿನಾಂಕ 13–2–2009 ಎಂದು ದಿನಾಂಕ 13–2–2009 ರಿಂದಲೇ ಜಾರಿಗೆ ಬರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 908

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ವಿಷಯ: ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ ಹುದ್ದೆಗಳನ್ನು ಉನ್ನತೀಕರಿಸುವ/ನಿಮ್ನೀಕರಿಸುವ ಬಗ್ಗೆ

ಓದಲಾಗಿದೆ: 1) ಅಧಿಸೂಚನೆ ಸಂಖ್ಯೆ ಸಿಆಸುಇ 548 ಎಸ್‌ಎಎಸ್ 2008, ದಿನಾಂಕ 31–01–2009.

2) ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 548 ಎಸ್‌ಎಎಸ್ 2008, ದಿನಾಂಕ 26–02–2009.

ಪ್ರಸ್ತಾವನೆ:

ಮೇಲೆ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಹಲವಾರು ಇಲಾಖೆಗಳ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಹುದ್ದೆಗಳಿಗೆ ಅಧಿಕಾರಿಗಳನ್ನು ವರ್ಗಾಯಿಸಿ ನೇಮಿಸಲಾಗಿದ್ದು ಮೇಲೆ (2) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಅಧಿಕಾರಿಗಳು ವರ್ಗಾವಣೆಗೊಂಡ ಹಿನ್ನಲೆಯಲ್ಲಿ ಕೆಲವು ಸರ್ಕಾರದ ಪ್ರಧಾನ ಕಾರ್ಯದರ್ಶಿ/

ಕಾರ್ಯದರ್ಶಿ ಹೊಸ ಹುದ್ದೆಗಳನ್ನು ಉನ್ನತೀಕರಿಸಿ/ನಿಮ್ನೀಕರಿಸಿ ಆದೇಶ ಹೊರಡಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 133 ಸಅಸೇ 2009, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2009

ಕರ್ನಾಟಕ ಸರ್ಕಾರ ಸಚಿವಾಲಯದ ಈ ಕೆಳಕಂಡ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಹುದ್ದೆಗಳನ್ನು ಕಾರ್ಯದರ್ಶಿ ಹುದ್ದೆ ಎಂದು ನಿಮ್ನೀಕರಿಸಲಾಗಿದೆ:

1) ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
2) ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ

ವೇತನ ಶ್ರೇಣಿ/ Band 4 ; ರೂ.37400-67000 + Grade pay ರೂ. 10000

ಕರ್ನಾಟಕ ಸರ್ಕಾರ ಸಚಿವಾಲಯದ ಈ ಕೆಳಕಂಡ ಇಲಾಖೆಗಳ ಕಾರ್ಯದರ್ಶಿಗಳ ಹುದ್ದೆಗಳನ್ನು ಪ್ರಧಾನ ಕಾರ್ಯದರ್ಶಿ ಹುದ್ದೆ ಎಂದು ಉನ್ನತೀಕರಿಸಲಾಗಿದೆ.

1) ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
2) ಸರ್ಕಾರದ ಪ್ರಧಾನ ಕಾರ್ಯದರ್ಶಿ(ವೈದ್ಯಕೀಯ ಶಿಕ್ಷಣ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ವೇತನ ಶ್ರೇಣಿ/ Band 4 ; ರೂ.37400-67000 + Grade pay ರೂ. 12000

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10.07.1996 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಪಿ.ಆರ್. 909 ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಂಗ ಅಧಿಕಾರಿಗಳಿಗೆ "Robe Allowance" ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ ಲಾ 124 ಎಲ್‌ಎಸಿ 1997, ದಿನಾಂಕ 17.11.2004.
2. ಶ್ರೀ ಕೆ.ಎಸ್. ಪುಂಡಲೀಕ (24-9-2008), ಶ್ರೀ ಎಸ್. ಎಲ್. ಪಾಟೀಲ್ (19-12-2008), ಶ್ರಿ ಆರ್. ಎಸ್. ಪಾಟೀಲ್ (22-4-2008) ಹಾಗೂ ಶ್ರೀ ಜಗದೀಶ್ ಎಸ್. ಚಿಕ್ಕಣ್ಣನವರ್ (11-2-2008) ಅವರುಗಳ ಮನವಿ.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ನ್ಯಾಯಾಂಗ ಇಲಾಖೆಗೆ ಸೇರಿದ ಅಧಿಕಾರಿಗಳಿಗೆ (ಜ್ಯುಡಿಷಿಯಲ್ ಆಫೀಸರ್ಸ್) ಐದು (5) ವರ್ಷಗಳಿಗೊಮ್ಮೆ ರೂ.5,000.00 ರಂತೆ "Robe Allowance" ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರಿ ಸಚಿವಾಲಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯಲ್ಲಿ ನ್ಯಾಯಾಂಗ ಸೇವೆಯಿಂದ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮೇಲೆ (2) ರಲ್ಲಿ ಓದಲಾದ ಮನವಿಗಳನ್ನು ಸಲ್ಲಿಸಿ, ಸರ್ವೋಚ್ಚ ನ್ಯಾಯಲಯವು ದಿನಾಂಕ 5.2.2008 ರಂದು ನೀಡಿದ ಆದೇಶದಂತೆ ನಿಯೋಜನೆ ಮೇಲಿರುವ ತಮಗೂ ಸಹ 5 ವರ್ಷಕ್ಕೊಮ್ಮೆ ರೋಬ್ ಅಲೋಯನ್ಸ್ ಮಂಜೂರು ಮಾಡುವಂತೆ ಕೋರಿದ್ದಾರೆ. ಅಧಿಕಾರಿಗಳ ಕೋರಿಕೆಯನ್ನು ಸರ್ವೋಚ್ಚ ನ್ಯಾಯಾಲಯದ ಆದೇಶದೊಂದಿಗೆ ಪರಿಶೀಲಿಸಲಾಗಿದೆ. ಅಖಿಲ ಭಾರತ ನ್ಯಾಯಾಧೀಶರ ಸಂಘವು ಸಲ್ಲಿಸಿದ ರಿಟ್ ಅರ್ಜಿ (ಸಿ) ಸಂಖ್ಯೆ 1022/1989 ರಲ್ಲಿ ಸಲ್ಲಿಸಲಾದ ವಾದಕಾಲೀನ ಅರ್ಜಿ ಸಂಖ್ಯೆ 213 ರಲ್ಲಿ ಸರ್ವೋಚ್ಚ ನ್ಯಾಯಲಯವು ದಿನಾಂಕ 5.2.2008 ರಂದು ಈ ಕೆಳಕಂಡಂತೆ ಆದೇಶ ನೀಡಿದೆ:

This application is filed by 6 officers working in the cadre of district judges in the Kerala state higher judicial service. It is contended that judicial officers while on deputation as law secretary, Registrar General, Registrars, Additional Registrar are denied the benefit of shetty commission recommendations, merely because they are working on deputation. The stand taken by the State Government is not correct. The officers continue to be judicial officers even though they are on deputation. The state government is, therefore, directed to pas appropriate orders within a period of 8 weeks extending the benefits to those Judicial officers who are working on deputation.

I.A is disposed of accordingly.

ಸರ್ವೋಚ್ಚ ನ್ಯಾಯಾಲಯದ ಮೇಲಿನ ಆದೇಶದನ್ವಯ ಸೇವೆಯ ಅಧಿಕಾರಿಗಳು ನಿಯೋಜನೆ ಮೇಲೆ ಬೇರೆಡೆ ಕಾರ್ಯ ನಿರ್ವಹಿಸುವಾಗಲೂ ಸಹ ನ್ಯಾಯಾಂಗ ಅಧಿಕಾರಿಗಳಾಗಿಯೇ ಮುಂದುವರೆಯುತ್ತಾರೆ. ಇದನ್ನು ಪರಿಗಣಿಸಿದ ಸರ್ಕಾರವು ನ್ಯಾಯಾಂಗ ಸೇವೆಯಿಂದ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಉಲ್ಲೇಖಿತ ಅಧಿಕಾರಿಗಳ ಮನವಿಯನ್ನು ಪರಿಗಣಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 154 ಸಅಸೇ 2008, ಬೆಂಗಳೂರು, ದಿನಾಂಕ: 9ನೇ ಮಾರ್ಚ್ 2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 5.2.2008 ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಧೀಶರುಗಳಿಗೆ ಐದು ವರ್ಷಗಳಿಗೊಮ್ಮೆ ನೀಡಬೇಕಾದ ರೂ.5,000/-ರಂತೆ (ರೂಪಾಯಿ ಐದು ಸಾವಿರಗಳು ಮಾತ್ರ) "Robe Allowance"ನ್ನು ಮಂಜೂರು ಮಾಡಲಾಗಿದೆ.

ಈ ವೆಚ್ಚವನ್ನು ಸಚಿವಾಲಯಕ್ಕೆ ಸಂಬಂಧಿಸಿದ "Salary Head Other Allowances" ನಿಂದ ಭರಿಸತಕ್ಕದ್ದು.

ಈ ಆದೇಶವನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 573 ವೆಚ್ಚ – 5/2008, ದಿನಾಂಕ 11-6-2008 ರ ಅನ್ವಯ ಆರ್ಥಿಕ ಇಲಾಖೆಯೊಡನೆ ಸಮಾಲೋಚಿಸಿದ ನಂತರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 910

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಮುವಿ 2008, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009

ವಿಷಯ: ಶ್ರೀ ಹೆಚ್.ಎಂ. ಖಯ್ಯೂಂ ಅಲಿ, ಅಪರ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅವರ ಅಮಾನತ್ತನ್ನು ರದ್ದುಪಡಿಸಿ ಮತ್ತೆ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಹೆಚ್.ಎಂ. ಖಯ್ಯೂಂ ಅಲಿ, ಅಪರ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅವರನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 20 ಈಮುವಿ 2008 ದಿನಾಂಕ 18.10.2008ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಟಿರುವುದರಿಂದಲೂ,

ಶ್ರೀ ಹೆಚ್.ಎಂ. ಖಯ್ಯೂಂ ಅಲಿ, ಅಪರ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅವರ ಅಮಾನತ್ತನ್ನು ರದ್ದುಪಡಿಸಿ ಅವರನ್ನು ಮತ್ತೆ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ತೀರ್ಮಾನಿಸಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 10 (5) (ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಹೆಚ್.ಎಂ. ಖಯ್ಯೂಂ ಅಲಿ, ಅಪರ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅವರ ವಿರುದ್ಧ ಶಿಸ್ತಿನ ಕ್ರಮ / ಲೋಕಾಯುಕ್ತ ತನಿಖೆಯನ್ನು ಬಾಕಿ ಇಟ್ಟು ಅವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡೆಸಿ ಅವರನ್ನು ಈ ಮೂಲಕ ಸೇವೆಗೆ ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಎಂ. ಖಯ್ಯೂಂ ಅಲಿ, ಅಪರ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅವರನ್ನು ಸೂಕ್ತ ಹುದ್ದೆಗೆ ನಿಯುಕ್ತಿಗೊಳಿಸಲು ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 911

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2008, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009

ವಿಷಯ: ಶ್ರೀ. ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರ ಅಮಾನತ್ತನ್ನು ರದ್ದುಪಡಿಸಿ ಮತ್ತೆ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 6 ಸೇಇವಿ 2008 ದಿನಾಂಕ 29-04-2008 ರಲ್ಲಿ ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ,

ಶ್ರೀ ಟಿ. ಅಶೋಕ್; ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರ ಅಮಾನತ್ತನ್ನು ರದ್ದುಪಡಿಸಿ ಅವರನ್ನು ಮತ್ತೇ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ತೀರ್ಮಾನಿಸಿರುವುದರಿಂದಲೂ,

ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 10 (5) (ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರ ವಿರುದ್ಧ ಶಿಸ್ತಿನ ಕ್ರಮವನ್ನು ಬಾಕಿ ಇಟ್ಟು ಅವರ ಅಮಾನತ್ತನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಅವರನ್ನು ಈ ಮೂಲಕ ಸೇವೆಗೆ ತೆಗೆದುಕೊಳ್ಳುತ್ತದೆ.

ಶ್ರೀ ಟಿ. ಅಶೋಕ್, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ ಅವರನ್ನು ಸೂಕ್ತ ಹುದ್ದೆಗೆ ನಿಯುಕ್ತಿಗೊಳಿಸಲು ಪ್ರತ್ಯೇಕವಾಗಿ ಕ್ರಮ ಕೈಗೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್. 912

ವಿಷಯ: ಶ್ರೀ. ಬಿ.ವಿ. ರಮೇಶ್; ಸರ್ಕಾರದ ಅಧೀನ ಕಾರ್ಯದರ್ಶಿ (ಅಮಾನತ್ತಿನಲ್ಲಿ), ಕರ್ನಾಟಕ ಸರ್ಕಾರ ಸಚಿವಾಲಯ ಇವರ ವಿರುದ್ಧ ಇಲಾಖಾ ವಿಚಾರಣೆ – ವಿಚಾರಣಾಧಿಕಾರಿಯವರನ್ನು ನೇಮಕ ಮಾಡುವ ಬಗ್ಗೆ ಮರು ಆದೇಶ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 195 ಎಸ್ಇಎನ್ 2007, ದಿನಾಂಕ 02.01.2009.
2) ಶ್ರೀ ಕೆ. ರಾಜಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರ ಮನವಿ ದಿನಾಂಕ: 13/15/01/2009

ಪ್ರಸ್ತಾವನೆ:

ಶ್ರೀ ಬಿ.ವಿ. ರಮೇಶ್, ಅಧೀನ ಕಾರ್ಯದರ್ಶಿ (ಪ್ರಸ್ತುತ ಅಮಾನತ್ತಿನಲ್ಲಿ), ಕರ್ನಾಟಕ ಸರ್ಕಾರ ಸಚಿವಾಲಯ ಇವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11(2) ರಂತೆ ಶ್ರೀ ಕೆ. ರಾಜಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿಯೂ ಹಾಗೂ ನಿಯಮ 11(5)(ಸಿ)ರ ಅನ್ವಯ, ಶಾಖಾಧಿಕಾರಿ, ಸಿಆಸುಇ (ಸೇವೆಗಳು–ಇ) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 02.01.2009 ರ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಕೆ. ರಾಜಶೇಖರ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು, ಇವರು ಅನಾರೋಗ್ಯದ ಕಾರಣದಿಂದಾಗಿ, ತಾವು ಈ ಪ್ರಕರಣದ ವಿಚಾರಣಾಧಿಕಾರಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ, ಈ ಪ್ರಕರಣದ ನಿಚಾರಣೆಯನ್ನು ಬೇರೊಬ್ಬರಿಗೆ ವಹಿಸುವಂತೆ ಕೋರಿರುತ್ತಾರೆ. ಬೇರೆ ವಿಚಾರಣಾಧಿಕಾರಿ ನೇಮಿಸುವ ಕುರಿತು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 195 ಎಸ್ಇಎನ್ 2007, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣದಿಂದಾಗಿ, ಶ್ರೀ ಬಿ.ವಿ. ರಮೇಶ್, ಅಧೀನ ಕಾರ್ಯದರ್ಶಿ (ಪ್ರಸ್ತುತ ಅಮಾನತ್ತಿನಲ್ಲಿ), ಕರ್ನಾಟಕ ಸರ್ಕಾರ ಸಚಿವಾಲಯ ಇವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(2)ರ ಅನ್ವಯ ವಿಚಾರಣಾಧಿಕಾರಿಯವರನ್ನು ನೇಮಿಸಿ ಹೊರಡಿಸಿರುವ ದಿನಾಂಕ: 02.01.2009ರ ಆದೇಶವನ್ನು ಭಾಗಶಃ ಮಾರ್ಪಡಿಸಿ, **ಶ್ರೀ ಎಂ.ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು, ಬೆಂಗಳೂರು** ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ವಿಚಾರಣಾಧಿಕಾರಿಗಳು ಈ ವಿಚಾರಣೆಗಾಗಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 07, ದಿನಾಂಕ 11.04.2008ರಲ್ಲಿ ನಿಗಧಿಪಡಿಸಿರುವ ಗೌರವಧನ ಹಾಗೂ ವಾಹನ ಭತ್ಯೆಗಳನ್ನು ಪಡೆಯುತ್ತಾರೆ. ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ, ಸ್ಟೇಷನರಿ, ಶೀಘ್ರಲಿಪಿಗಾರರ ಸೇವೆಯನ್ನು ಒದಗಿಸಲು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಸೇವೆಗಳು–3) ಅವರು ಕ್ರಮ ಕೈಗೊಳ್ಳುತ್ತಾರೆ.

ಇನ್ನುಳಿದಂತೆ, ಶಾಖಾಧಿಕಾರಿ, ಸಿಆಸುಇ (ಸೇವೆಗಳು–ಇ) ಇವರನ್ನು ಮಂಡನಾಧಿಕಾರಿಯಾಗಿ ಮುಂದುವರಿಸಲಾಗಿದೆ.

ವಿಚಾರಣಾಧಿಕಾರಿಗಳು, ಅಪಾದಿತರ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ, ಆರೋಪ ಸಾಬೀತಾಗಿರುವ ಅಥವಾ ಸಾಬೀತಾಗದೇ ಇರುವ ಅಭಿಪ್ರಾಯಗಳನ್ನು ಒಳಗೊಂಡ ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಯಾದ ಸರ್ಕಾರಕ್ಕೆ 3 ತಿಂಗಳುಗಳ ಒಳಗಾಗಿ ಸಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್. 913

ಕಂದಾಯ ಸಚಿವಾಲಯ

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧೀನ ಕಛೇರಿಗಳಿಗೆ ಕಂಪ್ಯೂಟರ್ ಹಾಗೂ ತತ್ಸಂಬಂಧಿತ ಸಾಮಗ್ರಿಗಳನ್ನು ಖರೀದಿಸಲು ಅನುಮತಿ ನೀಡಲು ಕುರಿತು.

ಓದಲಾಗಿದೆ:
1. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ:Comp: 14:2007–08, ದಿನಾಂಕ: 02/04.08.2008.

2. ಇ–ಆಡಳಿತ ಸಚಿವಾಲಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 19.11.2008 ರಂದು ನಡೆದ ಸಭೆಯ ನಡವಳಿ.
3. ದಿನಾಂಕ: 12.01.2009 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿ.
4. ದಿನಾಂಕ: 21.02.2009 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆ ನಡವಳಿ ಸಂಖ್ಯೆ: ಡಿಪಿಎಆರ್ 15 ಇಜಿವಿ 2009, ದಿನಾಂಕ: 05.03.2009.
5. ದಿನಾಂಕ: 26.02.2009 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಓದಲಾದ (1) ದಿನಾಂಕ: 02/04.08.2008ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ರಾಜ್ಯದಲ್ಲಿನ ಇಲಾಖೆಯ ಅಧೀನ ಕಛೇರಿಗಳ ದೈನಂದಿನ ಕೆಲಸ ಕಾರ್ಯಗಳನ್ನು ತ್ವರಿತಗತಿಯಲ್ಲಿ ನಿರ್ವಹಿಸಲು ಹಾಗೂ ಇ–ಸ್ಟಾಂಪಿಂಗ್. ಹೆಚ್.ಆರ್.ಎಂ.ಎಸ್. ಸೇರಿದಂತೆ ಇತರೇ ಉದ್ದೇಶಗಳಿಗಾಗಿ ಕಂಪ್ಯೂಟರ್ ಹಾಗೂ ಇತರ ಸಾಮಗ್ರಿಗಳ ಖರೀದಿಯ ತುರ್ತು ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಈ ಕುರಿತು ಕನ್ಸಲ್‌ಟೆಂಟ್‌ರಾದ ಮೆ: Price Water House Coopers Pvt. Ltd., ಬೆಂಗಳೂರು ಇವರ ಮೂಲಕ ಕಂಪ್ಯೂಟರ್ ಇತ್ಯಾದಿ ಸಾಮಗ್ರಿಗಳ ಖರೀದಿ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಿ ದ್ವಿಪ್ರತಿಯಲ್ಲಿ ಕಳುಹಿಸಿ ಸದರಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ. ತಾಂತ್ರಿಕ ಅನುಮೋದನೆಗಾಗಿ ಇ–ಆಡಳಿತ ಇಲಾಖೆಗೆ ಕಳುಹಿಸಿ ಕೊಡಲು ಹಾಗೂ ತಾಂತ್ರಿಕ ಅನುಮೋದನೆಯ ನಂತರ ಸದರಿ ಸಾಮಗ್ರಿಗಳನ್ನು ಖರೀದಿಸಲು ಆಡಳಿತಾತ್ಮಕ ಹಾಗೂ ಆರ್ಥಿಕ ಮಂಜೂರಾತಿ ನೀಡಲು ಕೋರಿರುತ್ತಾರೆ. ಕಂಪ್ಯೂಟರ್ ಇತ್ಯಾದಿ ಸಾಮಗ್ರಿಗಳ ಖರೀದಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2030–03–001–2–04 Charges of Supply of Registered Documents, 051 General Expenses ಅಡಿಯಲ್ಲಿ 2008–09ನೇ ಸಾಲಿಗಾಗಿ ನೀಡಲಾಗಿರುವ ರೂ. 38 ಕೋಟಿ ಅನುದಾನದಡಿಯಲ್ಲಿ ಭರಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (2)ರ ದಿನಾಂಕ: 19.11.2008ರ ನಡವಳಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸಂಬಂಧಿಸಿದಂತೆ ಕಂಪ್ಯೂಟರ್ ಹಾಗೂ ಇತರೆ ಸಾಮಗ್ರಿಗಳನ್ನು ಖರೀದಿಸುವ ಕ್ರಿಯಾ ಯೋಜನೆಗೆ ಇ–ಆಡಳಿತ ಸಚಿವಾಲಯ ಈ ಕೆಳಗೆ ವಿವರಿಸಿರುವಂತೆ ಅನುಮೋದನೆ ನೀಡಿರುತ್ತದೆ.

Decision:

xxxx

1) Department of Stamps and Registration may take further action keeping in mind the relevant Government orders issued by e-Governance Secretariat from time to time.
2) As far as the above proposal is concerned the Department keeping in view of the Budget flow shall place the matter before the Departmental Technical Advisory Panel for its approval.

ಮೇಲೆ ಓದಲಾದ (3)ರ ದಿನಾಂಕ: 12.01.2009 ರಂದು ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ಕಂಪ್ಯೂಟರ್ ಹಾಗೂ ತತ್ಸಂಬಂಧಿತ ಸಾಮಗ್ರಿಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.

Sl. No.	Name of the equipment	Nos. required
1	Desktop Computers	300
2	Laptops	7
3	Laser Printers	7
4	Dot Matrix Printers	276
5	1 KVA UPS with 1 and 2 hours back up	300
6	Multimedia Projectors with Screen	1
7	Computer Tables	300
8	Computer Chairs	300
9	Antivirus Software-1+307 paper license	307
10	MS-Office Standard-1+307 paper license	307

ಮೇಲ್ಕಂಡ ಸಾಮಗ್ರಿಗಳ ಪೈಕಿ ಕೇಂದ್ರ ಕಛೇರಿಗೆ ಬೇಕಾಗುವ ಕಂಪ್ಯೂಟರ್ ಟೇಬಲ್ ಮತ್ತು ಕುರ್ಚಿಗಳನ್ನು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ಹಾಗೂ ಉಪ ನೋಂದಣಿ ಮತ್ತು ಜಿಲ್ಲಾ ನೋಂದಣಿ ಕಛೇರಿಗಳಿಗೆ ಬೇಕಾಗುವ ಕಂಪ್ಯೂಟರ್ ಟೇಬಲ್ ಮತ್ತು ಕುರ್ಚಿಗಳನ್ನು ಆಯಾ ಜಿಲ್ಲಾ ನೋಂದಣಾಧಿಕಾರಿಗಳು ಸದರಿ ಸಾಮಗ್ರಿಗಳ ಪೂರೈಕೆದಾರರಿಂದ ದರ ಪಟ್ಟಿ ಪಡೆದು ಅತ್ಯಂತ ಕಡಿಮೆ ದರ ಪಟ್ಟಿಯನ್ನು ನೀಡುವ ಪೂರೈಕೆದಾರರಿಂದ ಖರೀದಿಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (4)ರ ದಿನಾಂಕ: 21.02.2009 ರಂದು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗಾಗಿ ಪಡೆಯಲು ಉದ್ದೇಶಿಸಿದ ಇ-ಆಡಳಿತ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕುರಿತಂತೆ ಮೇಲೆ ಓದಲಾದ (5) ರ ದಿನಾಂಕ: 26.02.2009 ರಂದು ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಮೇಲ್ಕಂಡ ಸಾಮಗ್ರಿಗಳನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವಿವಿಧ ಕಛೇರಿಗಳ ಉಪಯೋಗಕ್ಕಾಗಿ ಡಿಜಿಎಸ್&ಡಿ ದರಗಳನ್ವಯ ಖರೀದಿಸಲು ಅನುಮತಿ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 322 ಮುನೋಮು 2008, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2009

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ 26.02.2009 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಈ ಕೆಳಗೆ ಕಾಣಿಸಿದ ಕಂಪ್ಯೂಟರ್ ಹಾಗೂ ತತ್ಸಂಬಧದ ಸಾಮಗ್ರಿಗಳನ್ನು ಡಿಜಿಎಸ್&ಡಿ ದರಗಳನ್ವಯ ಖರೀದಿಸಲು ಸರ್ಕಾರದ ಅನುಮೋದನೆ ನೀಡಿದೆ.

Sl. No.	Name of the equipment	Numbers required
1	Desktop Computers	300
2	Laptops	7
3	Laser Printers	7
4	Dot Matrix Printers	276
5	1 KVA UPS with 1 and 2 hours back up	300
6	Multimedia Projectors with Screen	1
7	Computer Tables	300
8	Computer Chairs	300
9	Antivirus Software-1+307 paper license	307
10	MS-Office Standard-1+307 paper license	307

ಕಂಪ್ಯೂಟರ್ ಟೇಬಲ್ ಮತ್ತು ಕುರ್ಚಿಗಳನ್ನು ಸದರಿ ಸಾಮಗ್ರಿಗಳ ಪೂರ್ಶೆಕೆದಾರರಿಂದ ದರಪಟ್ಟಿ ಪಡೆದು ಅತ್ಯಂತ ಕಡಿಮೆ ದರ ಸೂಚಿಸುವ ಪೂರೈಕೆದಾರರಿಂದ ಖರೀದಿಸಲು ಅನುಮತಿ ನೀಡಲಾಗಿದೆ.

ಮೇಲ್ಕಂಡ ಸಾಮಗ್ರಿಗಳನ್ನು ಖರೀದಿಸಲು ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2030-03-001-2-04 Charges of Supply of Registered Documents 051 General Expenses ಅಡಿಯಲ್ಲಿ 2008-2009 ನೇ ಸಾಲಿಗಾಗಿ ನೀಡಲಾಗಿರುವ ರೂ. 38 ಕೋಟಿ ಅನುದಾನದಡಿಯಲ್ಲಿ ಭರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ

ಪಿ.ಆರ್. 914

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ, (ನೋಂದಣಿ ಮತ್ತು ಮುದ್ರಾಂಕ)

KARNATAKA GOVERNMENT SECRETARIAT

CORRIGENDUM No: ID 103 ITS 2008, Bangalore, Dated: 20th January 2009

In the preamble & order portion of the Government Order No:ID 103 ITS 2008, Bangalore Dated 6-11-08, the nomenclature of the proposal 'Development of malpe Port in Uttar Kannada District…' may be read & corrected as "Development of Malpe Port in Udupi District.."

By Order and in the name of the Governor of Karnataka,

P.R. 915

N. Ramesh

Director, PPP Cell, IDD

COMMERCE AND INDUSTRIES SECRETARIAT

Sub: Project proposal of M/s. Hindustan Aeronautics Ltd., to establish unit for manufacture of "TPE 331 engine and Engine components, Ring Rolling, Fan Cases, Welded Structural Assemblies, Maintenance, Repair and Overhaul of Civil aircraft / engines and manufacture of Helicopters" at Aerospace SEZ, Devanahalli, Bangalore Rural District – Approval for – Orders reg.

Read: Proceedings of the 16th State High Level Clearance Committee (SHLCC) meeting held on 19.11.2008.

Preamble:

M/s. Hindustan Aeronautics Ltd., is a new company promoted by Fomento Group has proposed to establish unit for manufacture of "TPE 331 engine and Engine components, Ring Rolling, Fan Cases, Welded Structural Assemblies, Maintenance, Repair and Overhaul of Civil aircraft / engines and manufacture of helicopters" at Aerospace SEZ, Devanahalli, Bangalore Rural District with an investment of Rs. 2,095.00 Crores. Upon development, this Project is expected to provide employment to 1631 persons.

In the proposal submitted before the 16th State High Level Clearance Committee meeting (SHLCC) held on 19.11.2008, the Company had requested for various Infrastructure facilities as well as incentives and concessions as envisaged in the New Industrial Policy 2006-11 from the Government. The State High Level Clearance Committee, after detailed discussion of the project proposal of the said Company, vide the proceedings read above, has recommended for approval of the project, to provide infrastructural facilities and to extend incentives & concessions as envisaged in the Industrial Policy of the State Government 2006-11.

Government has examined the recommendations made by the State High Level Clearance Committee in its 16th Meeting held on 19.11.2008 in all aspects. Hence the following order.

Government Order No. CI 7 SPI 2009, Bangalore, Dated: 10th February 2009

In the circumstances explained above, Government is pleased to accord approval to M/s. Hindustan Aeronautics Ltd., to establish unit for manufacture of "TPE 331 engine and Engine components. Ring Rolling, Fan Cases, Welded Structural Assemblies, Maintenance, Repair and Overhaul of Civil aircraft / engines and manufacture of helicopters" at Aerospace SEZ, Devanahalli, Bangalore Rural District with an investment of Rs. 2,095.00 Crores and to provide employment to 1631 persons, with the following infrastructural facilities, incentives and concessions :

INFRASTRUCTRE FACILITIES:

LAND:

KIADB to acquire and allot 100 acres of land at Devanahalli, Bangalore Rural District.

WATER:

50,000 lpd to be supplied by KIADB and 50,000 lpd from recycling plant of BWSSB. Unit to minimize the usage of water an shall establish structure/facility for rainwater harvesting and groundwater recharge and also conduct an annual 'Water Audit '.

POWER:

5000 KVA to be serviced by BESCOM.

INCENTIVES & CONCESSIONS:

As per New Industrial Policy 2006-2011.

ENVIRONMENT:

KSPCB to issue CFE as per their norms. The company shall obtain environmental clearance from State. No works shall commence prior to obtaining ECC.

EMPLOYMENT:

Project proponents shall play a proactive role in enhancing the employability of the local job seekers, including the land losers. Further, the Company shall prepare a plan for development of human resources required for the project, train local people and provide employment to these trained local youth and comply with Government policy of Employment to local people i.e. Dr. Sarojini Mahishi report. A copy of human resources development plan shall be sent to the Commissioner for I.D. & Director of Industries and Commerce for monitoring.

VENDOR DEVELOPMENT:

Where ever there is scope for vendor development for the project, the company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

SOCIAL INFRASTRUCTURE DEVELOPMENT:

The Company is advised to take up social infrastructure development projects in the vicinity of proposed location of the unit as per R&R policy 2007 (GoI). A copy of such projects shall be sent to the Government.

OTHERS:

The promoter shall take all statutory and other necessary clearances and shall submit milestones / progress in implementation of the project regularly, which will be monitored by the Departments concerned.

This approval is valid for a period of two years from the date of issue.

By Order and in the name of the Governor of Karnataka

APARNA PAVATE

P.R. 916

Desk Officer (Technical Cell)

Commerce & Industries Department

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಶ್ರೀ ಹೆಚ್.ಪಿ.ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರನ್ನು ಅಮಾನತ್ತುಗೊಳಿಸುವ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಅ.ಸ.ಪತ್ರ ಸಂಖ್ಯೆ : ಗಭೂಇ/ಆ.ಶಾ./ 2008–09, ದಿನಾಂಕ: 16.03.2009.

ಪ್ರಸ್ತಾವನೆ:

ಶ್ರೀ ಹೆಚ್.ಪಿ.ಮಲ್ಲೇಶ್, ಹಿರಿಯ ಭೂವಿಜ್ಞಾನಿ (ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರು, ಹಗರಿ ನದಿಯಿಂದ ಅನಧಿಕೃತವಾಗಿ ಮರಳನ್ನು ತೆಗೆದು ಸಾಗಾಣಿಕೆ ಮಾಡುತ್ತಿದ್ದರೂ ಸಹ ಅದನ್ನು ತಡೆಗಟ್ಟಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವುದರಿಂದ ಇವರನ್ನು ಅಮಾನತ್ತಿನಲ್ಲಿಡಲು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ (1) ರ ಅ.ಸ. ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಯರ್ರಿಸ್ವಾಮಿ ಯಲ್ಲಿ ಕಗ್ಗಲ್, ಬಳ್ಳಾರಿ ತಾಲ್ಲೂಕು, ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ W.P.No.5429/2009 ರ ಕುರಿತು ಪ್ರಸ್ತಾವಿಸುತ್ತಾ, ಹಗರಿ ನದಿ ಪ್ರದೇಶದಲ್ಲಿ ಎಷ್ಟು ಜನರಿಗೆ ಮರಳು ಸಾಗಾಣಿಕೆಗೆ ಪರವಾನಗಿ ನೀಡಲಾಗಿದೆ ಮತ್ತು ನೀಡಿರುವ ಪರವಾನಗಿ ಕಾನೂನಿನ ರೀತ್ಯ ಸರಿಯಾಗಿದೆಯೇ? ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ಕ್ಕೆ ಅನುಗುಣವಾಗಿ ಮಂಜೂರಾತಿ ನೀಡಲಾಗಿದೆಯೇ, ಗುತ್ತಿಗೆ ನೀಡುವಲ್ಲಿ ವಿಧಿಸಲ್ಪಟ್ಟಿರುವ ಷರತ್ತು ಮತ್ತು ನಿಬಂಧನೆಗಳ ಉಲ್ಲಂಘನೆಯಾಗಿರುತ್ತದೆಯೇ, ಉಲ್ಲಂಘನೆಯಾಗುವ ರೀತಿಯಲ್ಲಿ ಯಂತ್ರೋಪಕರಣಗಳನ್ನು ಬಳಸಿ ಮರಳು ಗಣಿಗಾರಿಕೆಯನ್ನು ಮಾಡಲಾಗಿದೆಯೇ, ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಯಾವ ತುರ್ತು ಕ್ರಮ ಕೈಗೊಳ್ಳಲಾಗಿದೆ ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂಬ ವಿಷಯಗಳ ಕುರಿತು ವರದಿಯನ್ನು ಕಳುಹಿಸುವಂತೆ ಸೂಚಿಸಿದ್ದರೂ ಸಹ ಶ್ರೀ ಹೆಚ್.ಪಿ.ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಅಲ್ಲದೇ, ಯಂತ್ರೋಪಕರಣಗಳನ್ನು ಬಳಸಿ ಮರಳು ಗಣಿಗಾರಿಕೆಯನ್ನು ಮಾಡುತ್ತಿದ್ದರೂ ಸಹ ಅಂತಹವರ ಮೇಲೆ ನಿಯಮಾನುಸಾರ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ(1)ರ ಅ.ಸ. ಪತ್ರದಲ್ಲಿ ತಿಳಿಸಿರುತ್ತಾರೆ.

ಹಗರಿ ನದಿ ಪ್ರದೇಶದಿಂದ ಮರಳು ಸಾಗಾಣಿಕೆಗಾಗಿ ಸರ್ಕಾರದಿಂದ ಯಾವುದೇ ಅಧಿಕೃತ ಪರವಾನಗಿ ನೀಡಿರುವುದಿಲ್ಲವೆಂದೂ ಮತ್ತು ಹಗರಿ ಸೇತುವೆಯಿಂದ 1 ಕಿ.ಮೀ. ಸುತ್ತಳತೆಯಲ್ಲಿ ಮರಳು ತೆಗೆಯುವುದು, ಕುಂಶಿ ಮಾಡುವುದು ನಿಷೇಧಿಸಿದ್ದರೂ ಸಹ ಕಾನೂನು ಬಾಹಿರವಾಗಿ ಮರಳನ್ನು ತುಂಬಿ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿದ್ದು, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರು, ನಿಯಮಾನುಸಾರ ಕ್ರಮಕೈಗೊಂಡಿರುವುದಿಲ್ಲವೆಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ(1)ರ ಅ.ಸ.ಪತ್ರದಲ್ಲಿ ತಿಳಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಿ:13-03.09 ರಂದು W.P.No.5429/2009 ರ ವಿಚಾರಣೆಯ ಸಂದರ್ಭದಲ್ಲಿ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರು, ಹಗರಿ ನದಿಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಮರಳು ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ತಪ್ಪು ಮಾಹಿತಿಯನ್ನು ನೀಡಿವಾಗ, ದಿನಾಂಕ 11.03.09 ರಂದು ಸದರಿ ಪ್ರದೇಶದಲ್ಲಿ ನಿಯಮಬಾಹಿರವಾಗಿ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿ, 1 ಮೀ. ಗಿಂತ ಹೆಚ್ಚಿನ ಆಳದವರೆಗೆ ಮರಳನ್ನು ತೆಗೆಯಲು ಬೃಹತ್ ಯಂತ್ರೋಪಕರಣಗಳನ್ನು ಬಳಸಿ, ಅಕ್ರಮವಾಗಿ ಮರಳನ್ನು ತೆಗೆಯುತ್ತಿರುವ ದೃಶ್ಯಗಳುಳ್ಳ D.V.D. ಯನ್ನು ಫಿರ್ಯಾದುದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಇದನ್ನು ವೀಕ್ಷಿಸಿರುವ ಮಾನ್ಯ ನ್ಯಾಯಾಲಯವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕೂಡಲೇ ಕ್ರಮವಹಿಸಿ ಒಂದು ವಾರದ ಅವಧಿಯೊಳಗೆ ಅನುಸರಣಾ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಿರುತ್ತದೆ.

ಅಂತೆಯೇ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರು, ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸಿ, ಮಾನ್ಯ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ಒದಗಿಸಿ, ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಇವರ ವಿರುದ್ಧ ಶಿಸ್ತಿನ ಕ್ರಮವನ್ನು ಬಾಕಿಯಿರಿಸಿ, ಇವರನ್ನು ಅಮಾನತ್ತಿನಲ್ಲಿಡಲು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರು ಮೇಲೆ ಓದಲಾದ (1)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಐ.25.ಎಂಜಿಎಸ್.2009, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ, ಶ್ರೀ ಹೆಚ್.ಪಿ. ಮಲ್ಲೇಶ್, ಹಿರಿಯ ಭೂವಿಜ್ಞಾನಿ(ಖನಿಜ)(ಪ್ರ), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ, ಇವರ ವಿರುದ್ಧದ ಆರೋಪಗಳ ಕುರಿತು ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10(1)(ಡಿ) ರ ಪ್ರಕಾರ, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರವು ಅಮಾನತ್ತುಗೊಳಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಹೆಚ್.ಪಿ. ಮಲ್ಲೇಶ್, ಇವರು ನಿಯಮಗಳ ಪ್ರಕಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತಾರೆ.

ಅಮಾನತ್ತಿನ ಅವಧೆಯಲ್ಲಿ ಶ್ರೀ ಹೆಚ್.ಪಿ. ಮಲ್ಲೇಶ್, ಇವರು ನಿಯಮಗಳ ಪ್ರಕಾರ ಸಕ್ಷಮ ಪ್ರಾಧಿಕಾರಿಯವರ ಲಿಖಿತ ಅನುಮತಿ ಪಡೆಯದೆ, ಕೇಂದ್ರ ಕಾರ್ಯಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 917

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ (ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕಳದರ್ಜೆಗಿಳಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್.548 ಎಸ್.ಎ.ಎಸ್ 08 ದಿನಾಂಕ 31.01.09

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 31.01.09ರ ಸಿ.ಆ.ಸು.ಇ. ಅಧಿಸೂಚನೆಯಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಕೆಳದರ್ಜೆಗಿಳಿಸಿ ಶ್ರೀ ಎ.ಕೆ. ಮೊನ್ನಪ್ಪ, ಭಾ.ಆ.ಸೇ.ರವರನ್ನು ನೇಮಿಸಲಾಗಿದ್ದು, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯನ್ನು ಐ.ಎ.ಎಸ್. ವೇತನ ಶ್ರೇಣಿ 15600-39100+pay grade 7600ಕ್ಕೆ ಕೆಳದರ್ಜೆಗಿಳಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 50 ಎಸ್‌ಜಿಎಫ್ 2009, ಬೆಂಗಳೂರು, ದಿನಾಂಕ: 18ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಮೇರೆಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಈ ಹುದ್ದೆಯನ್ನು ತಾತ್ಕಾಲಿಕವಾಗಿ ಶ್ರೀ ಎ.ಕೆ. ಮೊನ್ನಪ್ಪ ಭಾ.ಆ.ಸೇ. ಇವರು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುವವರೆಗೆ ಸದರಿ ಹುದ್ದೆಯನ್ನು ಐ.ಎ.ಎಸ್. ವೇತನ ಶ್ರೇಣಿ 15600 – 39100 +pay grade 7600ರ ಕೆಳದರ್ಜೆಗಿಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 918

ಪಿ. ಆನಂದ್ ಕುಮಾರ್

ಪೀಠಾಧಿಕಾರಿ (ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು ಇವರ ಮೇಲ್ಮನವಿ ಬಗ್ಗೆ.

ಓದಲಾಗಿದೆ:
1. ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು ರೇಷ್ಮೆ ಗೂಡು ಮಾರುಕಟ್ಟೆ, ಮಾಗಡಿ ತಾಲ್ಲೂಕು, ಇವರ ಪತ್ರ ದಿನಾಂಕ 05.01.2007
2. ರೇಷ್ಮೆ ಆಯುಕ್ತರ ಪತ್ರ ಸಂ: ಸಿಬ್ಬಂದಿ(7ಎ): ಕಾನಿವ: ಪ್ರಸರಾ:37:05-06 ದಿನಾಂಕ 07.11.2008

ಪ್ರಸ್ತಾವನೆ:

ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು ಇವರು ತಮ್ಮ 2004-05ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿನ ಪ್ರತಿಕೂಲ ಷರಾದ ವಿರುದ್ಧ ಸರ್ಕಾರಕ್ಕೆ ರೇಷ್ಮೆ ಆಯುಕ್ತರ ಮೂಲಕ ಮೇಲೆ ಓದಲಾದ ಉಲ್ಲೇಖ (1) ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವರದಿ ಪ್ರಾಧಿಕಾರದ ಎಲ್ಲಾ ಷರಾಗಳು ಸತ್ಯಕ್ಕೆ ದೂರವಾಗಿದ್ದು, ಆಧಾರ ರಹಿತವಾಗಿರುತ್ತವೆಂದು, ಈ ಎಲ್ಲಾ ಷರಾಗಳನ್ನು ಕೈಬಿಡಬೇಕೆಂದು, ವರದಿ ಪ್ರಾಧಿಕಾರ ದಾಖಲಿಸಿರುವ ದೋಷಪೂರಿತ ಹಾಗೂ ಕಾನೂನಿಗೆ ಸಮ್ಮತವಲ್ಲದ ವರದಿಯನ್ನು ತಿರಸ್ಕರಿಸುವಂತೆ ಕೋರಿರುತ್ತಾರೆ. ಸದರಿ ಮೇಲ್ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಮನವಿಯಲ್ಲಿ ಹೇಳಿರುವ ಅಂಶಗಳ ಕುರಿತಂತೆ ರೇಷ್ಮೆ ಆಯುಕ್ತರ ಅಭಿಪ್ರಾಯವನ್ನು ಕೋರಲಾಗಿ ರೇಷ್ಮೆ ಆಯುಕ್ತರು ಮೇಲೆ ಓದಲಾದ ಉಲ್ಲೇಖ (2)ರ ಪತ್ರದಲ್ಲಿ, ಶ್ರೀ ರಾಮಚಂದ್ರ ಇವರು ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ರೇಷ್ಮೆ ಉಪ ನಿರ್ದೇಶಕರು, ರಾಮನಗರ ಇವರಿಂದ ವರದಿ ಪಡೆದಿರುವ ಬಗ್ಗೆ ತಿಳಿಸಿ ಸದರಿ ವರದಿಯಲ್ಲಿ ರೈತರಿಗಾಗಲೀ, ರೀಲರುಗಳಿಗಾಗಲೀ ಯಾವುದೇ ಬಾಕಿ ಕೊಡಬೇಕಾಗಿಲ್ಲವೆಂದು ತಿಳಿಸಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಈ ಪ್ರಕರಣದಲ್ಲಿ ಯಾವುದೇ ಸರ್ಕಾರದ ಹಣ ದುರುಪಯೋಗವಾಗಿರುವುದಿಲ್ಲವಾದ್ದರಿಂದ ಪ್ರತಿಕೂಲ ಷರಾವನ್ನು ಸಲಹಾತ್ಮಕ ಷರಾ ಎಂದು ಪರಿಗಣಿಸಬಹುದೆಂದು ರೇಷ್ಮೆ ಆಯುಕ್ತರು ಶಿಫಾರಸ್ಸು ಮಾಡಿರುತ್ತಾರೆ. ಆದರೆ ಸದರಿ ವಾರ್ಷಿಕ ವರದಿಯನ್ನು ಅವಗಾಹಿಸಿದಾಗ ವರದಿಯ ಭಾಗ-3ರ ಕಾಲಂ 2, 3-ಎ, ಬಿ, ಎಫ್, ಜಿ, ಹೆಚ್, ಜೆ, ಕಾಲಂ-4, 9 ಮತ್ತು 10ರಲ್ಲಿ ಸಂಪೂರ್ಣವಾಗಿ ಪ್ರತಿಕೂಲ ಷರಾವನ್ನು ವರದಿ ಪ್ರಾಧಿಕಾರವು ನಮೂದಿಸಿದ್ದು ವಿವರಗಳು ಕೆಳಗಿನಂತಿವೆ :

	ಅಂಶ	ವರದಿ ಪ್ರಾಧಿಕಾರದ ಷರಾ
3	(ಎ) ಕೆಲಸದ ಬಗ್ಗೆ ಮನೋಭಾವ	ಸಾಧಾರಣಕ್ಕಿಂತ ಕಡಿಮೆ, ಅಸಡ್ಡೆ, ಪ್ರತಿಕೂಲ ಷರಾ
	(ಬಿ) ಜವಾಬ್ದಾರಿ ವಹಿಸಿಕೊಳ್ಳುವ ಇಚ್ಛೆ	ಸಾಧಾರಣಕ್ಕಿಂತ ಕಡಿಮೆ, ಪ್ರತಿಕೂಲ ಷರಾ
	(ಎಫ್) ತೀರ್ಮಾನ ತೆಗೆದುಕೊಳ್ಳುವ ಸಾಮರ್ಥ್ಯ	ಇಲ್ಲ. ಪ್ರತಿಕೂಲ ಷರಾ
	(ಜಿ) ನಿರೂಪಣಾ ನೈಪುಣ್ಯತೆ	ಸಾಧಾರಣಕ್ಕಿಂತ ಕಡಿಮೆ. ಪ್ರತಿಕೂಲ ಷರಾ
	(ಹೆಚ್) ಪರಸ್ಪರ ವೈಯುಕ್ತಿಕ ಸಂಬಂಭಗಳು, ಪ್ರೇರೇಪಣಾ ಸಾಮರ್ಥ್ಯ ಮತ್ತು ತಂಡದ ಕೆಲಸ	ಸಾಧಾರಣಕ್ಕಿಂತ ಕಡಿಮೆ. ಪ್ರತಿಕೂಲ ಷರಾ
	(ಜೆ) ಸಾರ್ವಜನಿಕರೊಂದಿಗೆ ಸಂಬಂಧ	ಉತ್ತಮ ಇಲ್ಲ. ಪ್ರತಿಕೂಲ ಷರಾ
4	ನಿಷ್ಠೆ	ಇಲ್ಲ ನಂಬಿಕೆದ್ರೋಹ ಬಗೆಯುವವರು. ನಗದು ಶಾಯಲ್ಲಿ ರೂ. ಅಂದಾಜು 5,10,486 ಪ್ರಭಾರ ಹಸ್ತಾಂತರಿಸಿರುವುದಿಲ್ಲ
9	ಸಾಮಾನ್ಯ ಮೌಲ್ಯಮಾಪನ	ಉತ್ತಮಕ್ಕಿಂತ ಕಡಿಮೆ. ಪ್ರತಿಕೂಲ ಷರಾ

ಶ್ರೀ ರಾಮಚಂದ್ರ ಇವರ 2004-05ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿ ವರದಿ ಮಾಡುವ ಪ್ರಾಧಿಕಾರವು ಮೇಲಿನ 8 ಅಂಶಗಳಲ್ಲಿ ಪ್ರತಿಕೂಲ ಷರಾವನ್ನು ದಾಖಲಿಸಿದ್ದು ವರದಿಯ ಕೊನೆಯಲ್ಲಿ ಶ್ರೇಣಿಯನ್ನು ನೀಡುವಾಗ "ಸಾಧಾರಣಕ್ಕಿಂತ ಕಡಿಮೆ, ವಿಚಾರಣೆ ಆಧಾರದ ಮೇಲೆ ಇದು ಪ್ರತಿಕೂಲ ಷರಾ ಎಂದು ಪರಿಗಣಿಸಿದೆ" ಎಂಬುದಾಗಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ವರದಿ ಪ್ರಾಧಿಕಾರದ ಈ ಷರಾಗಳನ್ನು ಪುನರಾವಲೋಕನ ಪ್ರಾಧಿಕಾರವು ಒಪ್ಪಿರುವುದಲ್ಲದೆ ಅಂಗೀಕಾರ ಪ್ರಾಧಿಕಾರವಾದ ಆಗಿನ ರೇಷ್ಮೆ ಆಯುಕ್ತರು ಅಂಗೀಕರಿಸಿರುತ್ತಾರೆ. ಇದಲ್ಲದೆ, ಶ್ರೀ ರಾಮಚಂದ್ರ ಇವರು ದಿನಾಂಕ 4.04.2006 ರಂದು ರೇಷ್ಮೆ ಆಯುಕ್ತರಿಗೆ ಮನವಿ ಸಲ್ಲಿಸಿ ಪ್ರತಿಕೂಲ ಷರಾಗಳನ್ನು ಕೈಬಿಡುವಂತೆ ಕೋರಿರುವ ಮನವಿಯ ಮೇಲೆ ವರದಿ ಪ್ರಾಧಿಕಾರದಿಂದ ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿ ವರದಿ ಪ್ರಾಧಿಕಾರಿಯಾದ ಶ್ರೀ ಧನಂಜಯ ನಾಯ್ಕ, ಅಂದಿನ ರೇಷ್ಮೆ ಕೃಷಿ ಉಪ ನಿರ್ದೇಶಕರು, ಬಿಳಿ ದೇವಾಲಯ ಇವರು ಶ್ರೀ ರಾಮಚಂದ್ರ ಇವರ ಮನವಿಯ ಮೇಲೆ ಕಂಡಿಕೆವಾರು ಉತ್ತರಗಳನ್ನು ನೀಡಿ ಸದರಿ ನೌಕರರ ಮೇಲ್ಮನವಿಯ ಹೇಳಿಕೆಗಳು ಸತ್ಯಕ್ಕೆ ದೂರವಾಗಿದ್ದು ಆಧಾರರಹಿತವಾಗಿರುತ್ತವೆಂದು, ಕರ್ತವ್ಯದಲ್ಲಿ ಲೋಪವೆಸಗಿದ್ದಾರೆಂದು, ರೇಷ್ಮೆ ಬೆಳೆಗಾರರ ಹಾಗೂ ನೂಲು ಬಿಚ್ಚುವವರ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಮೇಲಾಧಿಕಾರಿಗಳ ಸೂಚನೆಗಳನ್ನು ಪಾಲಿಸದೆ ಉದಾಸೀನತೆ ತೋರಿದ್ದಾರೆಂದು ತಿಳಿಸಿ ವರದಿಯಲ್ಲಿನ ಷರಾಗಳನ್ನು ಪ್ರತಿಕೂಲ ಷರಾಗಳೆಂದೇ ಪರಿಗಣಿಸಬೇಕೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ವಾಕೈ 21 ರೇಇವಿ 2007, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು, ಇವರ 2004-05ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿನ ಪ್ರತಿಕೂಲ ಷರಾಗಳು ಗಂಭೀರ ಸ್ವರೂಪದವುಗಳಾಗಿದ್ದು ಇವುಗಳನ್ನು ವರದಿ ಮಾಡುವ ಪ್ರಾಧಿಕಾರವು ಪುನಃ ಸಮರ್ಥಿಸಿಕೊಂಡಿದ್ದು ಇದರಿಂದ ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು, ಸರ್ಕಾರಿ ಸೇವೆಯಲ್ಲಿ ಸರ್ಕಾರಿ ನೌಕರರ ಕರ್ತವ್ಯಕ್ಕೆ ಸಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ದೃಢಪಟ್ಟಿರುವುದರಲ್ಲಿ ಸಂದೇಹವೇ ಇಲ್ಲದಿರುವುದರಿಂದ ಸದರಿ ಪ್ರತಿಕೂಲ ಷರಾಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಸಲಹಾತ್ಮಕ ಷರಾ ಎಂದು ಪರಿಗಣಿಸುವಂತೆ ರೇಷ್ಮೆ ಆಯುಕ್ತರು ಮಾಡಿರುವ ಶಿಫಾರಸ್ಸನ್ನು ಒಪ್ಪದೇ ಶ್ರೀ ರಾಮಚಂದ್ರ, ರೇಷ್ಮೆ ಪ್ರದರ್ಶಕರು, ಇವರ

2004–05ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣಾ ವರದಿಯಲ್ಲಿನ ಪ್ರತಿಕೂಲ ಷರಾಗಳನ್ನು 'ಪ್ರತಿಕೂಲ ಷರಾ' ಎಂದೇ ಸರ್ಕಾರವು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 919 **ಭಾರತಿ ಆರ್ ನಾಯಕ್**

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

ವಿಷಯ: ಮೆ. ನಿರಾಣಿ ಶುಗರ್ಸ್ (ಲಿ), ಮುಧೋಳ, ಬಾಗಲಕೋಟೆ ಜಿಲ್ಲೆ ಈ ಕಾರ್ಖಾನೆಯ ಸಾಮರ್ಥ್ಯವನ್ನು ಈಗಿರುವ 5000 ಟಿಸಿಡಿ ಯಿಂದ 10000 ಟಿಸಿಡಿ ಸಾಮರ್ಥ್ಯಕ್ಕೆ ವಿಸ್ತರಿಸಿಕೊಳ್ಳಲು ಸರ್ಕಾರ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ ಸಿಐ 187 ಎಎಸ್‌ಜಿಎಫ್ 07 ದಿನಾಂಕ 11.9.2007.

2. ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪತ್ರ ಸಂಖ್ಯೆ ಡಿಎಸ್‌ಕೆ/ಡಿಇವಿ/64/2006–07 ದಿನಾಂಕ: 27.08.2007 ಮತ್ತು 01.12.2008.

ಪ್ರಸ್ತಾವನೆ:

ಮೇಲೆ ಓದಲಾದ (2) ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪತ್ರದಲ್ಲಿ ಮೆ. ನಿರಾಣಿ ಶುಗರ್ಸ್ (ಲಿ), ಮುಧೋಳ, ಬಾಗಲಕೋಟೆ ಜಿಲ್ಲೆ, ಈ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು ಈಗಿರುವ 5000 ಟಿಸಿಡಿ ಇಂದ 10000 ಟಿಸಿಡಿ ಸಾಮರ್ಥ್ಯಕ್ಕೆ ವಿಸ್ತರಿಸಲು ಉದ್ದೇಶಿಸಿದ್ದಾರೆಂದು ತಿಳಿಸಿ ಈ ಕಾರ್ಖಾನೆಯ ಸಾಮರ್ಥ್ಯ ವಿಸ್ತರಣೆಗೆ ಸರ್ಕಾರದ ಅನುಮತಿಯನ್ನು ನೀಡಲು ಶಿಫಾರಸ್ಸು ಮಾಡಿದ್ದಾರೆ.

ಆಯುಕ್ತರ ಪ್ರಸ್ತಾವನೆಯನ್ನು ಮೇಲೆ ಓದಲಾದ (1) ರಲ್ಲಿನ ಆದೇಶದಲ್ಲಿ ಅಳವಡಿಸಿಕೊಳ್ಳಲಾಗಿರುವ ನೀತಿ ಅನ್ವಯ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 270 ಎಸ್‌ಜಿಎಫ್ 07, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

ಮೆ. ನಿರಾಣಿ ಶುಗರ್ಸ್ (ಲಿ), ಮುಧೋಳ, ಬಾಗಲಕೋಟೆ ಜಿಲ್ಲೆ, ಈ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು ಈಗಿರುವ 5000 ಟಿಸಿಡಿ ಇಂದ 10000 ಟಿಸಿಡಿ ಸಾಮರ್ಥ್ಯಕ್ಕೆ ವಿಸ್ತರಿಸಿಕೊಳ್ಳಲು ಸರ್ಕಾರದ ಅನುಮೋದನೆಯನ್ನು ಕಾರ್ಖಾನೆಗೆ ಹೆಚ್ಚುವರಿಯಗಿ ಬೇಕಾಗುವ ಕಬ್ಬನ್ನು ಕಾರ್ಖಾನೆಗೆ ಹಂಚಿಕೆಯಾಗಿರುವ ಕಬ್ಬಿನ ಮೀಸಲು ಪ್ರದೇಶಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಮೂಲಕ ಪಡೆದುಕೊಳ್ಳಬೇಕೆಂದು, ಹೆಚ್ಚುವರಿ ಕಬ್ಬಿನ ಮೀಸಲು ಕ್ಷೇತ್ರಗಳನ್ನು ಹಂಚಿಕೆ ಮಾಡಲು ಬೇಡಿಕೆ ಸಲ್ಲಿಸಬಾರದೆಂಬ ಷರತ್ತನ್ನು ಹಾಗೂ ಗೌ.ಉಚ್ಚನ್ಯಾಯಾಲಯದಲ್ಲಿ ಬಾಕಿಯಿರುವ ರಿಟ್ ಅರ್ಜಿ ಸಂಖ್ಯೆ 8492/2008ರಲ್ಲಿ ಹೊರ ಬರುವ ತೀರ್ಪಿಗೆ ಒಳಪಟ್ಟ ಷರತ್ತನ್ನು ವಿಧಿಸಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 920 **ಪಿ. ಆನಂದಕುಮಾರ್**

ಪೀಠಾಧಿಕಾರಿ (ಸಕ್ಕರೆ), ವಾಣಿಜ್ಯ ಮತ್ತ ಕೈಗಾರಿಕೆ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: 2008–09 ಸಾಲಿನ ಆರ್ಥಿಕ ಸಾಲಿಗೆ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ ಇವರಿಗೆ ನಿಗಧಿಪಡಿಸಿರುವ ಅನುದಾನ ರೂ.7.63 ಲಕ್ಷವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಸಂಕಇ 144 ಕೆಎಂಯು 2003 ದಿನಾಂಕ 23–8–2005.

2. ಸರ್ಕಾರಿ ಆದೇಶ ಸಂಖ್ಯೆ: ಸಂಕಇ 239 ಕೆಎಂಯು 2005 ದಿನಾಂಕ 27–6–2006.

3. ಹಣಕಾಸು ಅಧಿಕಾರಿ ಕುವೆಂಪು ವಿಶ್ವವಿದ್ಯಾನಿಲಯ ಇವರ ಪತ್ರದ ಸಂಖ್ಯೆ ಕು.ವಿ.:ಆರ್ಥಿಕ/14/1307/2008–09 ದಿನಾಂಕ 04–12–2008.

4. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ. ಅವರ ಪತ್ರ ಸಂಖ್ಯೆ: ಡಿಎಎಂ:ಎಸಿಟಿ:1:53:2008–09 ದಿನಾಂಕ: 07–1–2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ ಸಾಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇದನ್ನು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ವಿಲೀನಗೊಳಿಸಿದೆ ಮತ್ತು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಮುಂದಿನ ಹತ್ತು ವರ್ಷಗಳಿಗೆ ಪ್ರತಿ ವರ್ಷ ರೂ. 7.63 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿರುತ್ತದೆ. ಕುವೆಂಪು ವಿಶ್ವವಿದ್ಯಾಲಯವು ಕೆಳದಿ ವಸ್ತು ಸಂಗ್ರಹಾಲಯವನ್ನು ಸಿಬ್ಬಂದಿ ಸಹಿತ ದಿನಾಂಕ 23–8–2005ರಿಂದ ಜಾರಿಗೆ ಬರುವಂತೆ ಅದರ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿದ್ದು ವಸ್ತು ಸಂಗ್ರಹಾಲಯದ ವಾರ್ಷಿಕ ನಿರ್ವಹಣೆ ಮತ್ತು ಸಿಬ್ಬಂದಿ ವೇತನಗಳಿಗಾಗಿ 2008–09ನೇ ಸಾಲಿನಲ್ಲಿ ಹಣ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ 04.12.2008 ರ ಪತ್ರದಲ್ಲಿ ಹಣಕಾಸು ಅಧಿಕಾರಿ ಕುವೆಂಪು ವಿಶ್ವವಿದ್ಯಾನಿಲಯ ಅವರು, ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರನ್ನು ಕೋರಿರುತ್ತಾರೆ. ಮೇಲಿನ

ಹಿನ್ನಲೆಯಲ್ಲಿ ಕೆಳದಿ ವಸ್ತು ಸಂಗ್ರಹಾಲಯಕ್ಕೆ 2008–09ನೇ ಸಾಲಿನಲ್ಲಿ ಒಂದೇ ಕಂತಿನಲ್ಲಿ ರೂ.7.63 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರು ಉಲ್ಲೇಖ (4)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 17 ಕೆಎಂಯು 2009, ಬೆಂಗಳೂರು, ದಿನಾಂಕ: 4ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಸಂಸ್ಥೆ, ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇದರ ವಾರ್ಷಿಕ ನಿರ್ವಹಣೆ ಹಾಗೂ ಸಿಬ್ಬಂದಿ ವೇತನಗಳಿಗಾಗಿ 2008–2009ನೇ ಸಾಲಿಗೆ ಒಟ್ಟು ರೂ.7.63 ಲಕ್ಷ (ಏಳು ಲಕ್ಷ ಅರವತ್ತೂರು ಸಾವಿರ ಮಾತ್ರ)ಗಳನ್ನು ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ ಮಾಡಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು, ಇವರಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1) ಸರ್ಕಾರ ಯಾವ ಉದ್ದೇಶಕ್ಕಾಗಿ ಹಣ ಮಂಜೂರು ಮಾಡಿದೆಯೋ ಅದೇ ಉದ್ದೇಶಕ್ಕೆ ಬಳಸುವುದು.
2) ಸರ್ಕಾರ ಮಂಜೂರು ಮಾಡಿದ ಹಣ ಸಮರ್ಪಕವಾಗಿ ಬಳಕೆಯಾದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.
3) ಕಾರ್ಯ ಚಟುವಟಿಕೆಗಳ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವುದು.

ಈ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205–00–103–0–01 (ಯೋಜನೇತರ)–101–ಸಹಾಯಾನುದಾನ ಇದರ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಅಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಅವರ ಸಹಮತಿಯನ್ನು ಟಿಪ್ಪಣಿ ಸಂಖ್ಯೆ : ಇಡಿ 369 ಐಎಫ್ (ಬಿಎ)2009 ದಿನಾಂಕ: 10–2009ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುಕ್ಮಿಣಿ ದಿವಾಕರ್
ಪಿ.ಆರ್ 928 ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ) (ಪ್ರ)

ವಿಷಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಛೇರಿಗಳಿಗೆ ಕಂಪ್ಯೂಟರ್ ಮತ್ತು ಕಂಪ್ಯೂಟರ್ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರ ಪತ್ರ ಸಂಖ್ಯೆ: ಕಸನಿ 34 ಕಅ 2008–09 ದಿನಾಂಕ 23.07.2008.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 194 ಕಸನಿ 2007 ದಿನಾಂಕ 19.03.2008.
3. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 05.02.2009 ರಂದು ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ 19.03.2008 ರ ಅದೇಶದಲ್ಲಿ ಇಲಾಖೆಯ 20 ಜಿಲ್ಲೆಗಳ ಅಧೀನ ಕಛೇರಿಗಳಿಗೆ ತಲಾ 50,000 ದಂತೆ ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಇತರೆ ಪರಿಕರಗಳನ್ನು ಖರೀದಿಸಲು ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆಯೆಂದು, ಸದರಿ ಮೊತ್ತವನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ್, ರಾಯಚೂರು, ಗುಲಬರ್ಗಾ, ಕೊಪ್ಪಳ, ಬಾಗಲಕೋಟೆ, ಬಳ್ಳಾರಿ, ಮಡಿಕೇರಿ, ಹಾವೇರಿ, ತುಮಕೂರು, ಕೋಲಾರ, ದಾವಣಗೆರೆ, ಮಂಗಳೂರು, ಚಾಮರಾಜನಗರ, ಬಿಜಾಪುರ, ಗದಗ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಕಾರವಾರ, ಬೆಳಗಾಂ ಜಿಲ್ಲೆಗಳಿಗೆ ಸರಬರಾಜು ಮಾಡಿ ಅಳವಡಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ (2008–09) ಉಳಿದ 9 ಜಿಲ್ಲೆಗಳ ಜಿಲ್ಲಾ ಸಹಾಯಕ ನಿರ್ದೇಶಕರು – ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಮೈಸೂರು, ಚಿತ್ರದುರ್ಗ, ಉಡುಪಿ, ಮಂಡ್ಯ, ಧಾರವಾಡ– ಕಚೇರಿಗಳಿಗೆ ಹಾಗೂ ಕೇಂದ್ರ ಕಛೇರಿಗೆ 1 ಗಣಕಯಂತ್ರ ಮತ್ತು ಇತರೆ ಪರಿಕರಗಳನ್ನು ತಲಾ ರೂ. 50,000/– ಗಳಂತೆ ಖರೀದಿಸಲು ಒಟ್ಟು ರೂ.5.00 ಲಕ್ಷಗಳ ಹಣವನ್ನು ಬಿಡುಗಡೆ ಮಾಡಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 5.02.2009 ರಂದು ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ (TAP) ಯಲ್ಲಿ ಸೂಕ್ತವಾದ ಕ್ರಿಯಾಯೋಜನೆಯನ್ನು ಇ–ಆಡಳಿತದವರಿಂದ ಅನುಮೋದಿಸಿಕೊಂಡು ಹಾಗೂ ಇ–ಆಡಳಿತ ಇಲಾಖೆ ಶಾರ್ಟ್‌ಲಿಸ್ಟ್ ಮಾಡಿರುವ ಪಟ್ಟಿಯಲ್ಲಿ ಕನಿಷ್ಟ 3

ಸಂಸ್ಥೆಗಳಿಂದ/ಕಂಪನಿಗಳಿಂದ ದರಗಳನ್ನು ತರಿಸಿ ತುಲನೆ ಮಾಡಿ ಅತ್ಯಂತ ಕಡಿಮೆ ದರ ಸೂಚಿಸಿರುವ ಕಂಪನಿಗಳಿಂದ ಖರೀದಿಸಲು ಅನುಮತಿ ನೀಡಲಾಯಿತು.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಆದೇಶ ಸಂಖ್ಯೆ: ಕಸಂವಾಪ್ರ 130 ಕಸನಿ 2008, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2009

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಬಾಕಿ ಇರುವ 9 ಜಿಲ್ಲೆಗಳ ಅಧೀನ ಕಛೇರಿಗಳಿಗೆ 9 ಕಂಪ್ಯೂಟರ್ ಹಾಗೂ ಕೇಂದ್ರ ಕಛೇರಿಗೆ 1 ಕಂಪ್ಯೂಟರ್ ಮತ್ತು ಅವುಗಳಿಗೆ ಸಂಬಂಧಪಟ್ಟಂತೆ ಪ್ರಿಂಟರ್, ಯು.ಪಿ.ಎಸ್. ಸಾಫ್ಟ್‌ವೇರ್ ಮತ್ತು ಕಂಪ್ಯೂಟರ್ ಪೀಠೋಪಕರಣಗಳನ್ನು ಖರೀದಿಸಲು ರೂ 5.00 ಲಕ್ಷಗಳನ್ನು (ರೂಪಾಯಿ ಐದು ಲಕ್ಷಗಳು ಮಾತ್ರ) ಇ–ಆಡಳಿತ ಇಲಾಖೆಯಿಂದ ಕ್ರಿಯಾಯೋಜನೆಗೆ ಸಹಮತಿಯನ್ನು ಪಡೆಯಬೇಕೆಂಬ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ನಿಯಮ 1999 ಮತ್ತು ನಿಯಮಗಳು 2000 ನ್ನು ಅನುಸರಿಸಬೇಕೆಂಬ ಷರತ್ತಿಗೆ ಒಳಪಟ್ಟು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 05.02.2009 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ (TAP) ತೀರ್ಮಾನದಂತೆ ನಿಗದಿಪಡಿಸಿದ Configuration ಇರುವ ಕಂಪ್ಯೂಟರ್ ಹಾಗೂ ಇತರೆ ಪರಿಕರಗಳನ್ನು ಖರೀದಿಸತಕ್ಕದ್ದು ಹಾಗೂ ಈ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205–00–001–0–01–059 (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 07.03.2009ರಲ್ಲಿ ಟಿಪ್ಪಣಿ ಸಂಖ್ಯೆ ಇಡಿ 706 ಐಎಫ್‌ಎ (ಬಿ&ಎ) 2009 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಪಡೆದು ಮತ್ತು ಹಾಗೂ ಇಲಾಖಾ ಕಾರ್ಯದರ್ಶಿಗಳಿಗೆ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 1996 ದಿನಾಂಕ 10.07.1996 ರಲ್ಲಿ ಪ್ರತ್ಯಾಯೋಜಿಸಲಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 929 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪರಿಷ್ಕೃತ–1)ಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 92 ಬೆಂರೂಪ್ರಾ 2007 ದಿನಾಂಕ 11.03.2008.

2) ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ಚಿತ್ರದುರ್ಗ ಇವರ ಪತ್ರ ಸಂಖ್ಯೆ: ನಯೋಬಿ/ಸನಿ/ಚಿತ್ರದುರ್ಗ/ಚ.ಕೆರೆ/ಮ.ಯೋಪ/08–09 ದಿನಾಂಕ: 18.09.08.

3) ನಗರ ಯೋಜನಾ ನಿರ್ದೇಶಕರ ಕಾರ್ಯಾಲಯದ ಏಕ ಕಡತ ಸಂಖ್ಯೆ:ನಯೋ(13): ಜಂನಿ(ಬೆಂವಿ) ಮಯೋ(ಪ್ರ–1)/ಅಂತಿಮ/474/2008–09 ದಿನಾಂಕ: 19.01.2009 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಚಳ್ಳಕೆರೆ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–1) ಕ್ಕೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನಗರ ಯೋಜನಾ ಸಹಾಯಕ ನಿರ್ದೇಶಕರು, ಚಿತ್ರದುರ್ಗ ಇವರು ಚಳ್ಳಕೆರೆ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–1) ರ ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3) ರ ಏಕ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು, ಚಳ್ಳಕೆರೆ ಪಟ್ಟಣದ ಜನಸಂಖ್ಯೆಯು 2021ರಲ್ಲಿ 1,25,000 ಗಳಿಗೆ ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆ (ಪರಿಷ್ಕೃತ–1) ಯನ್ನು ರೂಪಿಲಾಗಿದೆ. ಚಳ್ಳಕೆರೆ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ 3216 ಹೆಕ್ಟೇರ್ ಪ್ರದೇಶದಲ್ಲಿ 1348.65 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾಯೋಜನೆಗೆ (ಪರಿಷ್ಕೃತ–1) ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ(9) ರಿಂದ (12)ರಲ್ಲಿನ ಅಂಶಗಳನ್ನು ಪರಿಗಣಿಸಿ, ಚಳ್ಳಕೆರೆ ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಾಗಿ ಪ್ರಸ್ತಾಪಿಸಿರುವ 1348.65 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 667.82 ಹೆಕ್ಟೇರ್ (ಶೇಕಡ 49.74), ವಾಣಿಜ್ಯಕ್ಕಾಗಿ 52.19 ಹೆಕ್ಟೇರ್ (ಶೇಕಡ 3.86), ಕೈಗಾರಿಕೆಗಾಗಿ 174.54 ಹೆಕ್ಟೇರ್ (ಶೇಕಡ 13.00), ಸಾರ್ವಜನಿಕ : ಅರೆ ಸಾರ್ವಜನಿಕ ವಲಯಕ್ಕೆ 81.47 ಹೆಕ್ಟೇರ್ (ಶೇಕಡ 6.07), ಉದ್ಯಾನವನ : ಬಯಲು ಜಾಗೆಗಳಿಗೆ 128.89 ಹೆಕ್ಟೇರ್ (ಶೇಕಡ 9.60), ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ 237.78 ಹೆಕ್ಟೇರ್ (ಶೇಕಡ 17.70) ಮತ್ತು ಜಲಾವೃತ್ತ ಪ್ರದೇಶಕ್ಕಾಗಿ 5.96 ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿರುತ್ತದೆ. ಮಹಾಯೋಜನೆಗೆ (ಪರಿಷ್ಕೃತ–1) ಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ. ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು

ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಸರ್ಕಾರದ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 45 ಬೆಂಮಪ್ರಾ 2009, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ 2009

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಳ್ಳಕೆರೆ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ–1) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 13(3) ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆ (ಪರಿಷ್ಕೃತ–1) ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 930

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಸಿ.ಹನುಮೇಗೌಡ, ಪಿ.ಸಿ., ಅಶೋಕನಗರ, ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಡೈರಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(5)14/2007–08 ದಿ:02–05–2008.
2) ಅರ್ಜಿದಾರರ ಮೇಲ್ಮನವಿ ಅರ್ಜಿ ದಿನಾಂಕ:27–08–2008.
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(5)14/2007–08 ದಿನಾಂಕ:17–12–2008.

ಪ್ರಸ್ತಾವನೆ:

ಶ್ರೀ ಸಿ.ಹನುಮೇಗೌಡ, ಪಿ.ಸಿ., ಅಶೋಕನಗರ, ಪೊಲೀಸ್ ಠಾಣೆ, ಬೆಂಗಳೂರು, ಇವರು ಈ ಹಿಂದೆ ಮಡಿವಾಳ ಪೊಲೀಸ್ ಠಾಣೆಯಲ್ಲಿ ರೈಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ತೀವ್ರ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದರು ಎಂಬ ಕಾರಣಕ್ಕಾಗಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸಲಾಗಿದೆ.

ದೋಷರೋಪಣೆ:–

"ಶ್ರೀ ಸಿ.ಹನುಮೇಗೌಡ, ಪಿ.ಸಿ.–7536, ಹಾಲಿ ಅಶೋಕ ನಗರ ಪೊಲೀಸ್ ಠಾಣೆ, ಬೆಂಗಳೂರು ನಗರ ಆದ ನೀವು ಹಿಂದೆ 1977 ರಿಂದ ಜೂನ್ 2003ರ ವರೆಗೆ ಮಡಿವಾಳ ಪೊಲೀಸ್ ಠಾಣೆಯಲ್ಲಿ ಠಾಣೆಯ ಸಹಾಯಕ ಬರಹಗಾರನಾಗಿ ಕರ್ತವ್ಯ ನಿರ್ವಹಿಸಿದ್ದು, ನಿಮಗೆ ಪೊಲೀಸ್ ಕಮೀಷನರ್ ರವರ ಕಛೇರಿಯಿಂದ ಬಂದ ಪಾಸ್‌ಪೋರ್ಟ್ ವೆರಿಫಿಕೇಷನ್ ಅರ್ಜಿ ಸಂಖ್ಯೆ:ಎಂವಿ 5664/02 ಎ–27405/02ನ್ನು ದಿ:20–10–2002ರ ನಂತರ ವೆರಿಫಿಕೇಷನ್ ಬಗ್ಗೆ ನೀಡಿದ್ದು, ನೀವು ಸದರಿ ಪಾಸ್‌ಪೋರ್ಟ್ ಅರ್ಜಿದಾರರ ವಾಸದ ಬಗ್ಗೆ ಹಾಗೂ ಪಾಸ್‌ಪೋರ್ಟ್ ಅರ್ಜಿಯಲ್ಲಿ ನಮೂದಿಸಿರುವ ನೆರೆಹೊರೆಯವರನ್ನು ವಿಚಾರಣೆ ನಡೆಸಿ ಅವರುಗಳ ಹೇಳಿಕೆ ಪಡೆಯಬೇಕಾಗಿದ್ದರೂ ಸಹ ಯಾವುದೋ ಆಮಿಷಕ್ಕೊಳಗಾಗಿ ಅರ್ಜಿದಾರರನ್ನು ಸ್ವತ: ನೋಡದೇ ಠಾಣೆಗೆ ಬರುವಂತೆ ತಿಳಿಸಿ ಬಂದಿರುತ್ತೀರಿ. ಹಾಗೂ ಠಾಣೆಯ ಪಿ.ಐ. ರವರು ಪಾಸ್‌ಪೋರ್ಟ್ ವೆರಿಫಿಕೇಷನ್ ಅರ್ಜಿಗೆ ಸಹಿ ಮಾಡುವ ಮುಂಚೆ ಅರ್ಜಿದಾರರು ನೀಡಿರುವ ವಿಳಾಸದಲ್ಲಿ ಸಿಗದ ಬಗ್ಗೆ ಹಾಗೂ ನೆರೆಹೊರೆಯವರ ವಿಚಾರಣೆ ನಡೆಸದ ಬಗ್ಗೆ ತಿಳಿಸದೇ ನಿಮ್ಮ ಮೇಲಾಧಿಕಾರಿಗೆ ಸರಿಯಾದ ಮಾಹಿತಿ ನೀಡದೇ ಅರ್ಜಿದಾರರ ನಕಲು ದಾಖಲಾತಿಗಳ ಮೇರೆಗೆ ಅಕ್ರಮವಾಗಿ ಪಾಸ್‌ಪೋರ್ಟ್ ಪಡೆಯಲು ಅವಕಾಶ ಮಾಡಿಕೊಟ್ಟು ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಅಧಿಕಾರ ದುರುಪಯೋಗ ಹಾಗೂ ಬೇಜವಾಬ್ದಾರಿತನವನ್ನು ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:02–05–2008ರ ಆದೇಶದಲ್ಲಿ "ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡಿ, ದಿ:11–07–07 ರಿಂದ 23–11–07ರ ವರೆಗೆ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸುವ ದಂಡನೆಯನ್ನು ವಿಧಿಸಿರುತ್ತಾರೆ."

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 344 ಪೊಸಿಆ 2008, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿ.ಹನುಮೇಗೌಡ, ಪಿ.ಸಿ., ಅಶೋಕನಗರ, ಪೊಲೀಸ್ ಠಾಣೆ, ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಪಿ.ಆರ್. 951

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಶಿಕ್ಷಣ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಇಡಿ 193 ಯೋಯೋಕ 2008, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009.

ವಿಷಯ: ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣ ಇಲಾಖೆಯಡಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಹೊರಡಿಸಿದ ತಿದ್ದುಪಡಿ ಆದೇಶಕ್ಕೆ ತಡೆ ಹಿಡಿಯುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 193 ಯೋಸಕ 2008, ದಿನಾಂಕ: 02–03–2009 (ಎರಡು ಆದೇಶಗಳು)

2. ಮುಖ್ಯ ಚುನಾವಣಾಧಿಕಾರಿಯವರ ಪತ್ರ ಸಂಖ್ಯೆ: ಸಿಆಸುಇ 25 ಜಮುಚುಅ 2009, ದಿನಾಂಕ: 16.03.2009.

ಮೇಲೆ (1)ರಲ್ಲಿ ಓದಲಾಗಿರುವ ಎರಡು ತಿದ್ದುಪಡಿ ಆದೇಶಗಳಲ್ಲಿ ಒಟ್ಟು ಏಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಳಾಂತರಗೊಳಿಸಿ ಆದೇಶ ಹೊರಡಿಸಲಾಗಿತ್ತು. ಮೇಲೆ (2)ರಲ್ಲಿ ಓದಲಾಗಿರುವ ಅನಧಿಕೃತ ಟಿಪ್ಪಣಿಯಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿಯವರು ಸದರಿ ಎರಡು ಆದೇಶಗಳನ್ನು ಲೋಕಸಭಾ ಚುನಾವಣೆಗಳು ಮುಗಿಯುವವರೆಗೆ ತಡೆ ಹಿಡಿಯಲು ಸೂಚಿಸಿರುತ್ತಾರೆ.

ಆದ್ದರಿಂದ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಏಳು ಸರ್ಕಾರಿ ಪ್ರಥಮ, ದರ್ಜೆ ಕಾಲೇಜುಗಳನ್ನು ಆರಂಭಿಸುವ ಬಗ್ಗೆ ಹೊರಡಿಸಲಾಗಿದ್ದ ಎರಡು ತಿದ್ದುಪಡಿ ಆದೇಶಗಳನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ತಡೆಹಿಡಿಯಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಾಲೇಜು ಶಿಕ್ಷಣ ಆಯುಕ್ತರಿಗೆ ಸೂಚಿಸಲಾಗಿದೆ.

ಐ.ಎಫ್. ಮಾಗಿ

ಪಿ.ಆರ್. 952

ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಯೋಜನೆ).

ವಿಷಯ: ಸರ್ಕಾರಿ ಶಾಲೆಗಳ ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ: ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಟಿಪ್ಪಣಿ ಪತ್ರ ಸಂಖ್ಯೆ: ಪ್ರಾ.ಪ್ರೌ.ಶಿ.ಸ./3253/09, ದಿನಾಂಕ: 24.02.2009.

ಪ್ರಸ್ತಾವನೆ:

1. ಮೇಲೆ ಓದಲಾದ ಪತ್ರದಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸರ್ಕಾರಿ ಶಾಲೆಗಳ ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನು ಖರೀದಿಸುವ ಬಗ್ಗೆ 2008–09ನೇ ಸಾಲಿನ ಆಯವ್ಯಯದಲ್ಲಿ 50,000/– ರೂ.ಗಳನ್ನು ಒದಗಿಸಲಾಗಿದ್ದು, ರಾಜ್ಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಸುಮಾರು 25,000ಕ್ಕೂ ಹೆಚ್ಚಿದ್ದು, ಸರಾಸರಿ ಒಂದು ಶಾಲೆಗೆ ರೂ. 20/– ಅನುದಾನ ಒದಗಿಸಿದಂತಾಗುತ್ತದೆ. ಇದು ಅತ್ಯಂತ ಕಡಿಮೆ ಆಗುವುದರಿಂದ ಶಿಕ್ಷಣ ಇಲಾಖೆಯಲ್ಲಿ ಖರ್ಚಾಗದೇ ಉಳಿದಿರುವ ಇನ್ನಿತರೇ ಯಾವುದೇ ಅನುದಾನದಲ್ಲಿ ಹೆಚ್ಚುವರಿಯಾಗಿ ರೂ. 50.00 ಲಕ್ಷಗಳನ್ನು ಪುಸ್ತಕ ಖರೀದಿಗಾಗಿ ಬಿಡುಗಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆದೇಶಿಸಿರುತ್ತಾರೆ.

2. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 206 ಯೋಯೋಕ 2008, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

[ಇಡಿ 42 ಸ್ಕೀಮರ(ಯುನಿಕ್)2009, ದಿನಾಂಕ: 16ನೇ ಮಾರ್ಚ್ 2009]

3. ಸರ್ಕಾರಿ ಶಾಲೆಗಳ ಗ್ರಂಥಾಲಯಕ್ಕಾಗಿ ಪುಸ್ತಕಗಳನ್ನು ಖರೀದಿಸಲು, 2008–09ನೇ ಸಾಲಿನ ಲೆಕ್ಕ ಶೀರ್ಷಿಕೆ 2202–01–800–1–13–059 (ಯೋಜನೆ)ಯಡಿ ಹೆಚ್ಚುವರಿಯಾಗಿ 10.00 ಲಕ್ಷ ರೂಗಳನ್ನು (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ 2202–01–800–1–35–059(ಯೋಜನೆ)ಯಡಿ ಉಳಿತಾಯವಾಗುವ ಮೊತ್ತದಿಂದ ಮರುಹೊಂದಾಣಿಕೆ ಮಾಡಿ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಬಳಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಿಗೆ ಸರ್ಕಾರವು ಅನುಮತಿಸಿದೆ.

4. ಈ ಆದೇಶವನ್ನು ದಿನಾಂಕ : 16.03.2009, ಸಂಖ್ಯೆ: ಶಿಇ 855 ಐಎಫ್ (ಬಿಎ) 2009ರ ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).

I -F2 -★

FORM 22A
(Article 309)

Re-appropriation Statement to accompany all applications for sanction to expenditure not provided for the budget, or for additional allotment

(Rs. in lakhs)

Major. Minr, Sub-and Detailed Heads of Budget (The same details must be given as in the printed Budget Estimate)	Heads of estimate proposed to be increased				Heads of estimate proposed to be reduced				Remarks: (Here state fully the reasons for allotment and for anticipating savings.
	Amount as in the sanctioned Budget estimate 2008-09	Actual expenditure up-to-date viz.	Probable expenditure during remainder of the year 2008-09	Amount of Additional allotment required 2008-09	Amount as in the sanctioned estimate 2008-09	Actual expenditure up-to-date viz.	Probable expenditure during remainder of the year 2008-09	Amount available for re-appropriation 2008-09	
1	2	3	4	5	6	7	8	9	10
2202-01-800-1-13-059 (P)	600.00	550.00	60.00	10.00					ಸರ್ಕಾರಿ ಶಾಲೆಗಳಲ್ಲಿ ಸಗಟಿನಲ್ಲಿ ಅವಶ್ಯಕ ಪುಸ್ತಕಗಳನ್ನು ಖರೀದಿಸಿ ಸರಬರಾಜು ಮಾಡಲು ಆಯವ್ಯಯದ ಕೊರತೆ ಇರುವುದರಿಂದ ಹೆಚ್ಚುವರಿ ಪ್ರಸ್ತಾಪಿಸಲಾಗಿದೆ.
2202-01-800-1-35-059 (P)	-	-	-	-	9090.59 -4811.05* ------------ 4279.54 -39.62** ------------ 4239.92	367.54	3862.38	10.00	ನಲಿ ಕಲಿ ಕಾರ್ಯಕ್ರಮದ ಅನುಷ್ಠಾನದ ಸಂಬಂಧ ಆದೇಶ ಹೊರಡಿಸುವಲ್ಲಿ ವಿಳಂಬವಾಗಿರುವುದರಿಂದ ಉಳಿತಾಯ ಸಂಭವಿಸಲಿದೆ.

*reappropriated to ZPS vide Order No : ED 340 BRS 2008 dt: 27.08.2008.

**Rs.39.62 lakhs has already been proposed for reappropriation under this head of account.

ಪಿ.ಆರ್. 953

ಐ.ಎಫ್. ಮಾಗಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ, ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

ವಿಷಯ: ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ, ಈ ಕಛೇರಿಗೆ 2008–09ನೇ ಸಾಲಿನಲ್ಲಿ ಮುಂದುವರೆದ ಕಾರ್ಯಕ್ರಮದಡಿ ನೀಡಿರುವ ಯೋಜನಾ ಆಯವ್ಯಯದಲ್ಲಿ ಮರುಹೊಂದಾಣಿಕೆ ಮಾಡುವ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಇಡಿ 78 ಯೋಯೋಕ 2008, ಬೆಂಗಳೂರು, ದಿನಾಂಕ 24-04-2008.

2. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ ಇವರ ಪತ್ರ ಸಂಖ್ಯೆ: 2: ಯೋಜನಾ ಆಯವ್ಯಯ 15 2008–09, ದಿನಾಂಕ 05–02–2009.

ಪ್ರಸ್ತಾವನೆ:

1. ಮೇಲೆ ಓದಲಾದ (1)ರ ಪತ್ರದಲ್ಲಿ 2008–09ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202–02–001–0–05–049 (ಯೋಜನೆ) ಅಡಿ ಪ್ರಯಾಣ ವೆಚ್ಚಕ್ಕಾಗಿ 5.00ಲಕ್ಷ ರೂಗಳನ್ನು ಒದಗಿಸಲಾಗಿತ್ತು.

2. ಮೇಲೆ ಓದಲಾದ (2)ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗರವರು ಸಿಬ್ಬಂದಿ ವರ್ಗದವರ ಡಿಸೆಂಬರ್ 2008 ರಿಂದ ಫೆಬ್ರುವರಿ 2009ರವರೆಗಿನ ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪಾವತಿಸಲು ಅನುದಾನದ ಕೊರತೆ ಇರುವುದರಿಂದ ಸದರಿ ಬಾಬ್ತಿಗೆ ಹೆಚ್ಚುವರಿಯಾಗಿ 2.00ಲಕ್ಷ ರೂಗಳನ್ನು ಅದೇ ಲೆಕ್ಕ ಶೀರ್ಷಿಕೆಯ 2202–02–001–0–05–051(ಯೋಜನೆ) ಅಡಿಯಲ್ಲಿ ಉಳಿತಾಯವಾಗುವ ಮೊತ್ತದಿಂದ ಭರಿಸಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 41 ಯೋಯೋಕ 2009, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

[ಇಡಿ 41 ಸ್ಕೀಮರ(ಯುನಿಕ್)2009, ದಿನಾಂಕ: 16ನೇ ಮಾರ್ಚ್ 2009]

3. 2008–09ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202–02–001–0–05–051(ಯೋಜನೆ) ಅಡಿ ಉಳಿತಾಯವಾಗುವ ಅನುದಾನದಿಂದ 2.00 ಲಕ್ಷ ರೂ (ಎರಡು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಪ್ರಯಾಣ ವೆಚ್ಚಗಳಿಗಾಗಿ ಲೆಕ್ಕ ಶೀರ್ಷಿಕೆ 2202–02–001–0–05–041(ಯೋಜನೆ) ಅಡಿಯಲ್ಲಿ ಮರುಹೂಂದಾಣಿಕೆ ಮಾಡಿ ಬಿಡುಗಡೆ ಮಾಡಲಾಗಿದೆ. ಸದರಿ ವೆಚ್ಚ ಭರಿಸಲು ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ ಇವರಿಗೆ ಅನುಮತಿ ನೀಡಲಾಗಿದೆ.

4. ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಶಿಇ 561 ಐಎಫ್(ಬಿ&ಎ) 2009, ದಿನಾಂಕ 28–02–2009ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಐ.ಎಫ್. ಮಾಗಿ

ಪಿ.ಆರ್. 954

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ ಸಾಲ – ಅಸಲು ಮತ್ತು ಬಡ್ಡಿಯ ಮರುಪಾವತಿಗಾಗಿ 2009ರ ಮಾರ್ಚ್ ಅಂತ್ಯದ 17ನೇ ಕಂತಿನ ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ: (1) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 22 ಪಿಆರ್‌ಎಂ 2002 ದಿನಾಂಕ 6–3–03,

(2) ಪ್ರಧಾನ ವ್ಯವಸ್ಥಾಪಕರು, ಕೆಬಿಟ್ಸ್‌ರವರ ಪತ್ರ ಸಂ:KBITS/ACT/97/2002-03, ದಿನಾಂಕ: 20.1.2009 ಮತ್ತು 12–02–2009.

(3) ನಿರ್ದೇಶಕರು, ಮಾತಂ ಜೈತಂ ನಿರ್ದೇಶನಾಲಯರವರ ಪತ್ರ ಸಂಖ್ಯೆ ಮಾತಂ & ಜೈತಂನಿ/ಲೆಕ್ಕ–1/58 ಹುಡ್ಕೋ ಸಾಲ/768/2004–05, ದಿ:23–1–2009 ಮತ್ತು 12–02–2009.

ಪ್ರಸ್ತಾವನೆ:

ಮೇಲೆ [1]ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 6–3–2003ರಲ್ಲಿ ಬೆಂಗಳೂರು ವಿದ್ಯುನ್ಮಾನ ನಗರದ ಜೈವಿಕ ತಂತ್ರಜ್ಞಾನ ಪಾರ್ಕ್‌ನ ಅಭಿವೃದ್ಧಿಗಾಗಿ ಹುಡ್ಕೋ [Housing and Urban Development Corporation] ಸಂಸ್ಥೆಯಿಂದ ರೂ. 20.00 ಕೋಟಿ ಸಾಲವನ್ನು ಎತ್ತುವಳಿ ಮಾಡಲು ಮಂಜೂರಾತಿ ನೀಡಲಾಗಿತ್ತು.

2005ನೇ ವರ್ಷದಿಂದ ಹುಡ್ಕೋ ಸಂಸ್ಥೆಯ ಅಸಲು, ಬಡ್ಡಿಯ ಮರುಪಾವತಿಯ ಬಾಬ್ತು ಅವರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ ಇವರಿಗೆ ತ್ರೈಮಾಸಿಕ ಅನುದಾನಗಳನ್ನು ಸರ್ಕಾರವು ಆಗಿಂದಾಗ್ಗೆ ಬಿಡುಗಡೆ ಮಾಡುತ್ತಲಿದೆ.

2008–09ನೇ ಸಾಲಿನ ಆಯವ್ಯಯದ ಪರಿಷ್ಕೃತ ಅಂದಾಜಿನಲ್ಲಿ ಸದರಿ ಸಾಲವನ್ನು ಮರುಪಾವತಿಸಲು ಲೆಕ್ಕಶೀರ್ಷಿಕೆ **'5465–01–190–1–08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ'** ಇದರ ಅಡಿಯಲ್ಲಿ ರೂ. 837.14 ಲಕ್ಷಗಳನ್ನು ಒದಗಿಸಲಾಗಿದ್ದು, ಇದರಲ್ಲಿ ಇಲ್ಲಿಯವರೆಗೆ ರೂ.271,72,139/–ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ [3]ರಲ್ಲಿ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರಗಳು ಮತ್ತು [2]ರಲ್ಲಿ ಓದಲಾದ ಕೆಬಿಟ್ಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರ ಪತ್ರಗಳಲ್ಲಿ 2008-09ನೇ ಆಯವ್ಯಯದ ಪರಿಷ್ಕೃತ ಪೂರ್ವ ಅಂದಾಜಿನಲ್ಲಿ ಲೆಕ್ಕಶೀರ್ಷಿಕೆ **'5465-01-190-1-08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ'** ಇದರ ಅಡಿಯಲ್ಲಿ ಒದಗಣೆ ಮಾಡಲಾದ ರೂ. 1137.14 ಲಕ್ಷಗಳ ಅನುದಾನವನ್ನು ಉಲ್ಲೇಖಿಸಿ ಉಳಿದಿರುವ ಶಿಲ್ಕು ರೂ. 8,65,41,861/- ಎಂದು, ಗ್ಯಾರಂಟಿ ಕಮಿಷನ್ ಸೇರಿ ಹೆಚ್ಚುವರಿಯಾಗಿ ಬೇಕಾಗುವ ಅನುದಾನ ರೂ. 2,69,19,143/- ಎಂದು ಹಾಗೂ ಹುಡ್ಕೋ ಸಾಲದ ಅಂತಿಮ ತೀರುವಳಿಗಾಗಿ ಬೇಕಾಗುವ ಮೊತ್ತ ರೂ. 11,34,61,004/- ಎಂದು ತಿಳಿಸುತ್ತಾ ರೂ. 2,69,19,143/- ಹೆಚ್ಚಿನ ಅನುದಾನದೊಂದಿಗೆ ಉಳಿದಿರುವ ಶಿಲ್ಕು ರೂ. 8,65,41,861/- ಗಳನ್ನು ಉಪಯೋಗಿಸಿಕೊಂಡು ಹುಡ್ಕೋ ಸಾಲದ ಅಂತಿಮ ತೀರುವಳಿ ಮಾಡಲು ಕೆಬಿಟ್ಸ್ ಸಂಸ್ಥೆಗೆ ಅನುಮತಿ ನೀಡಲು ಪ್ರಸ್ತಾವಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಬಿಟ್ಸ್ ಸಂಸ್ಥೆಯು ಹುಡ್ಕೋದಿಂದ ಪಡೆದ ಸಾಲದಲ್ಲಿ ಪಾವತಿಸಲು ಬಾಕಿ ಇರುವ 2008-09ನೇ ಸಾಲಿನ 4ನೇ ಕಂತಿನ ಸಾಲದ ಬಾಬ್ತು ಅಸಲು ಮತ್ತು ಬಡ್ಡಿ ಸೇರಿ ರೂ. 86,47,698/- ಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 03 ಪಿಆರ್‌ಎಂ 2008, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಹುಡ್ಕೋ ಸಾಲದ ಬಾಬ್ತು ಹುಡ್ಕೋ ಸಂಸ್ಥೆಗೆ ಅಸಲು ಮತ್ತು ಬಡ್ಡಿಯ ಬಾಬ್ತು ಪಾವತಿಸಲು ದಿನಾಂಕ 31-3-2009ರ ಅಂತ್ಯದ 17ನೇ ತ್ರೈಮಾಸಿಕ ಕಂತಿನ ಹಣ ರೂ. 86,47,698/-ಗಳ [ಎಂಬತ್ತಾರು ಲಕ್ಷದ ನಲವತ್ತೇಳು ಸಾವಿರದ ಆರನೂರಾ ತೊಂಬತ್ತೆಂಟು ರೂಪಾಯಿಗಳು ಮಾತ್ರ] ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಅಪರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2008-09ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **'5465-01-190-1-08 (ಯೋಜನೇತರ) ಮಾಹಿತಿ ಬಾಂಡುಗಳು 240 ಸಾಲ ಮೇಲುಸ್ತುವಾರಿ'** ಇದರ ಅಡಿಯಲ್ಲಿ ಒದಗಣೆ ಮಾಡಲಾದ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಸದರಿ ಅನುದಾನದ ಬಳಕೆಯ ಬಗ್ಗೆ ಕೆಬಿಟ್ಸ್ ಸಂಸ್ಥೆಯ ಅಪರ ವ್ಯವಸ್ಥಾಪಕ ನಿರ್ದೇಶಕರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ಪಡೆದು ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 66 ವೆಚ್ಚ 2/2009, ದಿನಾಂಕ 17-3-2009ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 957

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಹುಡ್ಕೋದಿಂದ ಪಡೆದ ಸಾಲಕ್ಕೆ 2009ನೇ ಮಾರ್ಚ್‌ಗೆ ತ್ರೈಮಾಸಿಕ ಅಸಲು ಮತ್ತು ಬಡ್ಡಿ ಬಿಡುಗಡೆ ಬಗ್ಗೆ.

ಓದಲಾಗಿದೆ: ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಪತ್ರ ಸಂಖ್ಯೆ. ಕೆಆರ್‌ಡಿಸಿಎಲ್/ಎಫ್‌ಡಿ/ಎಂ.ಡಿ./2008-09/330 ದಿನಾಂಕ 07-02-2009.

ಪ್ರಸ್ತಾವನೆ:

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಕೈಗೊಳ್ಳುತ್ತಿರುವ ಯೋಜನೆಗಳಿಗಾಗಿ ವಿವಿಧ ಸ್ಕೀಂಗಳ ಅಡಿಯಲ್ಲಿ ಹುಡ್ಕೋದಿಂದ ಪಡೆದ ಸಾಲವು ಈವರೆಗೆ ಒಟ್ಟು 5090672000.00ರೂ.ಗಳು ದಿನಾಂಕ 31-03-2009ರ ಅಂತ್ಯಕ್ಕೆ ಬಾಕಿ ಇರುತ್ತದೆ. ಓದಲಾದ ದಿನಾಂಕ 07-02-2009ರ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ, 2009ನೇ ಮಾರ್ಚ್‌ಗೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ಮೇಲಿನ ಸಾಲದ ಮರುಪಾವತಿಗೆ ಅಸಲು ಹಾಗೂ ಬಡ್ಡಿ ಸೇರಿ ಅನುಕ್ರಮವಾಗಿ 14,14,99,000.00/-ರೂ.ಗಳು ಮತ್ತು 8,32,63,688.00ರೂ.ಗಳು ಒಟ್ಟು ರೂ.22,47,62,688.00/-ಗಳನ್ನು ಹುಡ್ಕೋಗೆ ಪಾವತಿಸಬೇಕಾಗಿದೆಯೆಂದು ವರದಿ ಮಾಡಲಾಗಿದೆ. ದಿನಾಂಕ 24-02-2009ರ ಸರ್ಕಾರಿ ಆದೇಶದಲ್ಲಿ ಅಸಲು

ಹಾಗೂ ಬಡ್ಡಿ ಮೊತ್ತವಾದ 10,14,05,260.00/-ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈಗ ಬಾಕಿ ಇರುವ ಮೊತ್ತ ರೂ.22,47,62,688.00/-ಗಳನ್ನು ಬಿಡುಗಡೆ ಮಾಡಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ. ಲೋಇ 11 ಇಎಪಿ 2009 ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009.

ಹುಡ್ಕೋದಿಂದ ಪಡೆದುಕೊಂಡಿರುವ ಸಾಲದ ಬಾಬತ್ತಿಗೆ 2009ನೇ ಮಾರ್ಚ್‌ಗೆ ಕೊನೆಗೊಳ್ಳುವ ತ್ರೈಮಾಸಿಕ ಅವಧಿಗೆ ಅಸಲು ಹಾಗೂ ಬಡ್ಡಿ ಸೇರಿ ಒಟ್ಟು ರೂ.22,47,62,688.00/-ಗಳನ್ನು (ಇಪ್ಪತ್ತೆರಡು ಕೋಟಿ ನಲವತ್ತೇಳು ಲಕ್ಷದ ಅರವತ್ತೆರಡು ಸಾವಿರದ ಆರುನೂರ ಎಂಬತ್ತೆಂಟು ರೂಪಾಯಿಗಳು ಮಾತ್ರ) ಲೆಕ್ಕಶೀರ್ಷಿಕೆ "5054-80-190-0-01-240 (ಯೋಜನೇತರ) ಸಾಲ ಮೇಲುಸ್ತುವಾರಿ" ರ ಅಡಿಯಲ್ಲಿ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಸದರಿ ಬಿಲ್ಲಿನ ಮೊತ್ತಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಎ) ಇವರ ಮೇಲುರುಜು ಮಾಡಿಸುವುದು ಹಾಗೂ ಈ ಬಿಲ್ಲನ್ನು (ಸ್ವೀಕೃತದ ರಶೀದಿ) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಲೋಇ 238 ಆಕೋ-1/09 ದಿನಾಂಕ 12-03-2009ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 958

ವಿಷಯ: ಹಾವೇರಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-4ರ ಉಳಿಕೆ ಭಾಗ (Abandoned Road) ತೋಟದ ಯಲ್ಲಾಪೂರ ಬೈಪಾಸ್‌ದಿಂದ ದೇವಗಿರಿ-ಯಲ್ಲಾಪೂರ ಬೈಪಾಸ್ ಕೂಡು ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಕೆಳದರ್ಜೆಗೊಳಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ಉತ್ತರ), ಧಾರವಾಡ, ಇವರ ಪತ್ರ ಸಂಖ್ಯೆ: ಸಿಬಿಎನ್/ಹೈಕ್ಯಸೆ/ಕ.ಸಂ.7/ಎನ್‌ಹೆಚ್-4/ಉಭಾಅ/08-09/12342, ದಿನಾಂಕ: 24-1-2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ ಇವರು ರಾಷ್ಟ್ರೀಯ ಹೆದ್ದಾರಿ-4ರ ಉಳಿಕೆ ಭಾಗ (Abandoned Road) ತೋಟದ ಯಲ್ಲಾಪೂರ ಬೈಪಾಸ್‌ದಿಂದ ದೇವಗಿರಿ-ಯಲ್ಲಾಪೂರ ಬೈಪಾಸ್ ರಸ್ತೆಗೆ ಕೂಡು ರಸ್ತೆಯನ್ನು ಅಭಿವೃದ್ಧಿಪಡಿಸಲು 2008-09ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್-ಇ ಭಾಗ-2ರ ಹಾವೇರಿ ಮತಕ್ಷೇತ್ರದ ಅ.ಸಂ.2ರಲ್ಲಿ ರೂ.500.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸೇರ್ಪಡೆಗೊಂಡಿರುತ್ತದೆ. ಆದ್ದರಿಂದ, **ಹಾವೇರಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-4ರ ಉಳಿಕೆ ಭಾಗ (Abandoned Road) ತೋಟದ ಯಲ್ಲಾಪೂರ ಬೈಪಾಸ್‌ದಿಂದ ದೇವಗಿರಿ-ಯಲ್ಲಾಪೂರ ಬೈಪಾಸ್ ರಸ್ತೆ ಕಿ.ಮೀ. 0.00 ರಿಂದ 8.69 ವರೆಗಿನ** ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಕೆಳದರ್ಜೆಗೊಳಿಸುವುದು ಅವಶ್ಯವಾಗಿದೆ ಎಂದು ವರದಿ ಮಾಡಿರುತ್ತಾರೆ.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ, ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 221 ಸಿಆರ್‌ಎಂ 2009, ಬೆಂಗಳೂರು, ದಿನಾಂಕ: 18ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಪರಿಸ್ಥಿತಿಯ ಹಿನ್ನಲೆಯಲ್ಲಿ, **ಹಾವೇರಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-4ರ ಉಳಿಕೆ ಭಾಗ (Abandoned Road) ತೋಟದ ಯಲ್ಲಾಪೂರ ಬೈಪಾಸ್‌ದಿಂದ ದೇವಗಿರಿ-ಯಲ್ಲಾಪೂರ ಬೈಪಾಸ್ ರಸ್ತೆ ಕಿ.ಮೀ. 0.00 ರಿಂದ 8.69ವರೆಗಿನ** ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಕೆಳದರ್ಜೆಗೊಳಿಸಿ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಆರ್. ರೇವಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಪಿ.ಆರ್. 959

ವಿಷಯ: ಕಾಮಗಾರಿಯ ಗುಣಮಟ್ಟ ನಿಯಂತ್ರಣ ಕಾರ್ಯಪಡೆಯ ವೆಚ್ಚವನ್ನು ಭರಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ.ಲೋಇ/64/ಇಎಪಿ/2008 ಬೆಂಗಳೂರು ದಿನಾಂಕ 3.11.2008 ಮತ್ತು 26.11.2008.

ಮೇಲೆ ಓದಲಾದ ಆದೇಶ (1) ರಲ್ಲಿ ಕಾಮಗಾರಿಗಳ ಗುಣಮಟ್ಟ ನಿಯಂತ್ರಣ ಕಾರ್ಯಪಡೆಯನ್ನು ರಚಿಸಿ, ಸದರಿ ಕಾರ್ಯಪಡೆಗೆ ಉಲ್ಲೇಖ ನಿಬಂಧನೆಗಳನ್ನು ನಿಗಧಿಪಡಿಸಲಾಗಿದೆ.

ಸದರಿ ಕಾರ್ಯಪಡೆಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಸಭೆಗಳಿಗೆ ಹಾಜರಾಗಲು / ಸ್ಥಳತನಿಖೆಗೆ ಹೋಗಿ ಬರಲು ಅವಶ್ಯವಾದ ಭತ್ಯಗಳನ್ನು ಒದಗಿಸಬೇಕಾಗಿರುತ್ತದೆ. ಈ ವೆಚ್ಚಗಳಿಗಾಗಿ ಪೂರಕ ಅಂದಾಜಿನಲ್ಲಿ ರೂ.25.00 ಲಕ್ಷಗಳನ್ನು ಒದಗಿಸಲಾಗಿದ್ದು ಸದರಿ ಮೊತ್ತವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಕಾರ್ಯಪಡೆಯ ವೆಚ್ಚಕ್ಕಾಗಿ ಭರಿಸಲು ತಿರ್ಮಾನಿಸಲಾಗಿದೆ. ಆದ್ದರಿಂದ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 64 ಇಎಪಿ 2008, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

ಕರ್ನಾಟಕ ರಾಜ್ಯದ ಕಾಮಗಾರಿಯ ಗುಣಮಟ್ಟ ನಿಯಂತ್ರಣ ಕಾರ್ಯಪಡೆಯ ವೆಚ್ಚಕ್ಕಾಗಿ ಪೂರಕ ಅಂದಾಜಿನಲ್ಲಿ (ಡಿಮ್ಯಾಂಡ್–20) ಲೆಕ್ಕ ಶೀರ್ಷಿಕೆ 2059–80–001–0–04–051– ಸಾಮಾನ್ಯ ವೆಚ್ಚ (ಯೋಜನೇತರ) ಅಡಿಯಲ್ಲಿ ರೂ.25.00 ಲಕ್ಷಗಳನ್ನು (ರೂ.ಇಪ್ಪತ್ತೈದು ಲಕ್ಷಗಳು ಮಾತ್ರ) ಒದಗಿಸಲಾಗಿದ್ದು, ಈ ಮೊತ್ತವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಭರಿಸುವಂತೆ ಸರ್ಕಾರವು ಆದೇಶಿಸಿ, ಸದರಿ ಮೊತ್ತವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಮುಂದುವರೆದು ನಿಗಮವು ರೂ.25.00 ಲಕ್ಷಗಳ (ರೂ.ಇಪ್ಪತ್ತೈದು ಲಕ್ಷಗಳು ಮಾತ್ರ) ಬಿಲ್ಲನ್ನು ಕೆ.ಎಫ್.ಸಿ 17(ಸಿ)4 ರಲ್ಲಿನಂತೆ ಮಹಾಲೇಖಪಾಲರು (ಎ ಅಂಡ್ ಇ) ಇವರಿಂದ ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲ ಸಾರಿಗೆ ಇಲಾಖೆ (ಸೇವೆಗಳು–ಎ) ಇವರ ಮೇಲುರುಜು ಮಾಡಿಸುವುದು ಅಲ್ಲದೆ ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಆ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಲೋಇ 87 ಅಕೋ–2/2009. ದಿನಾಂಕ 2.2.2009ರಲ್ಲಿನ ಸಹಮತಿಯುನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 960

ವಿಷಯ: 2008–09ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ನಿಗದಿಪಡಿಸಲಾಗಿರುವ ಬಂಡವಾಳ ವೆಚ್ಚದಡಿಯಲ್ಲಿ ಬಾಕಿ ಇರುವ ಅನುದಾನವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ. ಲೋಇ/28/ಇಎಪಿ/2008 ದಿನಾಂಕ 13–02–2009.
2. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ. ಕ.ರ.ಅ.ನಿ.ನಿ./ವ್ಯ.ನಿ./2008–09/3355 ದಿನಾಂಕ 20–02–2009

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿನ ಸರ್ಕಾರದ ಆದೇಶದಲ್ಲಿ, 2008–09ನೇ ಸಾಲಿಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸರ್ಕಾರದಿಂದ ಬಂಡವಾಳ ವೆಚ್ಚದಡಿಯಲ್ಲಿ ನಿಗದಿಪಡಿಸಲಾಗಿದ್ದ ರೂ.325.00 ಕೋಟಿ ರೂ.ಗಳಲ್ಲಿ ಇದುವರೆಗೆ 290.20 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ದಿನಾಂಕ 13–02–2009ರ ಆದೇಶದಲ್ಲಿ ರೂ.30.00 ಕೋಟಿ ರೂ.ಗಳನ್ನು ಲೆಕ್ಕಶೀರ್ಷಿಕೆ "5054–80–190–0–01–132 ಬಡವಾಳ ವೆಚ್ಚ (ಯೋಜನೆ)" ಅಡಿಯಲ್ಲಿ ಪಾವತಿಸಲು ಸರ್ಕಾರಿ ಅದೇಶವನ್ನು ಹೊರಡಿಸಲಾಗಿದೆ.

ಓದಲಾದ (2) ರಲ್ಲಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ, ಈಗಾಗಲೇ ನಿಗಮದಿಂದ ಕೈಗೊಳ್ಳಲಾಗಿದ್ದು ಪ್ರಗತಿಯಲ್ಲಿರುವ ಕಾಮಗಾರಿಗಳ ಬಿಲ್ಲುಗಳ ಪಾವತಿಗಾಗಿ ಮೇಲಿನ ಲೆಕ್ಕಶೀರ್ಷಿಕೆಯಡಿಯಲ್ಲಿ ಬಾಕಿ ಉಳಿದಿರುವ ರೂ.34.80 ಕೋಟಿಗಳ ಮೊತ್ತವನ್ನು ನಿಗಮಕ್ಕೆ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 28 ಇಎಪಿ 2008, ಬೆಂಗಳೂರು, ದಿನಾಂಕ: 20ನೇ ಮಾರ್ಚ್ 2009

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಕೈಗೊಂಡು ಪ್ರಗತಿಯಲ್ಲಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಪಾವತಿಗಾಗಿ 34.80 ಕೋಟಿ ರೂ.ಗಳನ್ನು(ಮೂವತ್ತು ನಾಲ್ಕು ಕೋಟಿ ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕಶೀರ್ಷಿಕೆ "5054–80–190–0–01–132 (ಯೋಜನೆ)" ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಮುಂದುವರೆದು, ನಿಗಮವು 34.80 ಕೋಟಿ ರೂ.ಗಳು (ಮೂವತ್ತ ನಾಲ್ಕು ಕೋಟಿ ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಬಿಲ್ಲನ್ನು ಕೆ.ಎಫ್.ಸಿ.17/(ಸಿ)4 ರಲ್ಲಿನಂತೆ ಮಹಾಲೇಖಪಾಲರಿಂದ (ಎ ಅಂಡ್ ಇ) ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು–ಎ) ಇವರ ಮೇಲುರುಜು ಮಾಡಿಸಿ ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕಕದ್ದು.

ಆ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ. ಲೋಇ/23/ ಅಕೋ–1/2009. ದಿನಾಂಕ: 16.03.2009 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 961

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಡಾ: ಎಸ್.ಸುನಂದ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಪಾಂಡವಪುರ, ಮಂಡ್ಯ ಜಿಲ್ಲೆ ಇವರನ್ನು ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂ: ಡಿಪಿಜಿ/ಮೈವಿ/41/2004–05 ದಿನಾಂಕ: 29–04–2005 ಮತ್ತು 11/02/2009.

ಪ್ರಸ್ತಾವನೆ:

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ:ಎಸ್.ಸುನಂದ, ಇವರು ದಿನಾಂಕ 23–02–2002 ರಂದು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ಸೇವೆಗೆ ಸೇರಿದ್ದು ದಿನಾಂಕ: 16/08/2004 ರಿಂದ 25/11/2004ರ ವರೆಗೆ ಸಂಯುಕ್ತ ರಜೆಗಾಗಿ ಅರ್ಜಿ ಸಲ್ಲಿಸಿ ಅನಧಿಕೃತ ಗೈರುಹಾಜರಾಗಿರುವ ಕಾರಣ, ಇಲಾಖಾ ವಿಚಾರಣೆಯನ್ನು ಆಯುಕ್ತರ ಮಟ್ಟದಲ್ಲಿ ನಡೆಸಿ, ದಿನಾಂಕ 18/02/2005 ರಂದು ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿದೆ. ತದನಂತರ ದಿನಾಂಕ 17/03/2005 ರಂದು ಸದರಿ ವೈದ್ಯಾಧಿಕಾರಿಯು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿ ಅಂಗೀಕರಿಸಲು ಕೋರಿರುವುದಾಗಿ ತಿಳಿಸಿ, ಸರ್ಕಾರದ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ. ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 689 ಹೆಚ್‌ಎಸ್‌ಹೆಚ್ 2008, ಬೆಂಗಳೂರು, ದಿನಾಂಕ: 23ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಾ:ಎಸ್.ಸುನಂದ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ ಪಾಂಡವಪುರ, ಮಂಡ್ಯ ಜಿಲ್ಲೆ, ಇವರು ದಿನಾಂಕ 16–08–2004 ರಿಂದ ಖಾಯಂ ಪೂರ್ವ ಸೇವಾವಧಿಯಲ್ಲಿ ಅನಧಿಕೃತ ಗೈರುಹಾಜರಾಗಿ ಕರ್ತವ್ಯಚ್ಯುತಿ ಎಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಖಾಯಂ ಪೂರ್ವ) ನಿಯಮಾವಳಿ 1977 ರ ನಿಯಮ 6ರ ಅಡಿಯಲ್ಲಿ ದಿನಾಂಕ 16–08–2004 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಸೇವೆಗಳು–1)

ಪಿ.ಆರ್. 962

ಕಂದಾಯ ಸಚಿವಾಲಯ

ವಿಷಯ: ಗದಗ ಜಿಲ್ಲಾ ನೂತನ ಆಡಳಿತ ಭವನದಲ್ಲಿ ಜಿಲ್ಲಾ ನೊಂದಣಿ ಕಛೇರಿಗೆ ಹಂಚಿಕೆ ಮಾಡಲಾಗಿದ್ದು, ಪೀಠೋಪಕರಣ ಮತ್ತು ಮುಂತಾದ ಅಗತ್ಯ ಕಾಮಗಾರಿಗಳನ್ನು ಮಾಡಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ: ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: ಬಿಎಲ್‌ಡಿ 23/96–67, ದಿನಾಂಕ: 27.12.2008 / 01.01.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:27.12.2008 / 01.01.2009 ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಗದಗ ಜಿಲ್ಲೆಯಲ್ಲಿ ತಮ್ಮ ನೂತನ ಆಡಳಿತ ಭವನದಲ್ಲಿ ಜಿಲ್ಲಾ ನೋಂದಣಿ ಕಛೇರಿಗೆ ಜಿಲ್ಲಾಧಿಕಾರಿಯವರು ತಮ್ಮ ಪತ್ರ ದಿನಾಂಕ: 28.08.2008 ರಲ್ಲಿ ಒಂದು ಕೊಠಡಿಯನ್ನು ಹಂಚಿಕೆ ಮಾಡಿದ್ದು, ಸದರಿ ಕೊಠಡಿಗೆ ವಿದ್ಯುತ್ತೀಕರಣ, ಕಂಪೂಟರ್ ಕೊಠಡಿ ಜಿಲ್ಲಾ ನೋಂದಣಾಧಿಕಾರಿಯವರಿಗೆ, ಸಿಬ್ಬಂದಿಯವರಿಗೆ, ಪ್ರತ್ಯೇಕ ಕೊಠಡಿ, ಕೆಲವು ಪೀಠೋಪಕರಣ, ಮತ್ತು ಇತ್ಯಾದಿ ಕಾಮಗಾರಿಗಳ ಅಗತ್ಯತೆ ಇದ್ದು, ಜಿಲ್ಲಾಧಿಕಾರಿಗಳ ಕಛೇರಿಯ ಕಾಮಗಾರಿ ವಹಿಸುತ್ತಿರುವ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ನಿರ್ಮಿತಿ ಕೇಂದ್ರ ಗದಗ್ ಜಿಲ್ಲೆ ಇವರು ಜಿಲ್ಲಾ ನೋಂದಣಾಧಿಕಾರಿ ಕಛೇರಿಗೆ ಅಗತ್ಯವಿರುವ ಪೀಠೋಪಕರಣ ಇತ್ಯಾದಿಗಳ ಕಾಮಗಾರಿಯ ಬಗ್ಗೆ ರೂ.2,18,000/- ಗಳ ಅಂದಾಜು ಪತ್ರಿಕೆ ಸಲ್ಲಿಸಿದ್ದು, ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2001, ದಿನಾಂಕ 02.02.2001 ರಂತೆ ಇಲಾಖಾ ಮುಖ್ಯಸ್ಥರಿಗೆ ಅಧಿಕಾರವಿಲ್ಲದಿರುವುದರಿಂದ, ಸದರಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಹಾಗೂ ಸದರಿ ವೆಚ್ಚವನ್ನು 2008-09ನೇ ಸಾಲಿನ ಆಯುವ್ಯಯದ ಲೆಕ್ಕಶೀರ್ಷಿಕೆ 2030-03-001-051 ರಡಿ ಭರಿಸಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ39 ಮುನೋಮು 2009, ಬೆಂಗಳೂರು, ದಿನಾಂಕ: 16ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಗದಗ ಜಿಲ್ಲೆಯಲ್ಲಿ ನಿರ್ಮಿಸಲಾದ ನೂತನ ಆಡಳಿತ ಭವನದಲ್ಲಿ ಜಿಲ್ಲಾ ನೋಂದಣಿ ಕಛೇರಿಗೆ ಜಿಲ್ಲಾಧಿಕಾರಿಯವರು ಹಂಚಿಕೆ ಮಾಡಲಾದ ಕೊಠಡಿಗೆ ಜಿಲ್ಲಾಧಿಕಾರಿ, ಗದಗ ಜಿಲ್ಲೆ, ಗದಗ ಇವರು ಅಧ್ಯಕ್ಷರಾಗಿರುವ ನಿರ್ಮಿತಿ ಕೇಂದ್ರ ಇವರು ವಿದ್ಯುತ್ತೀಕರಣ, ಕಂಪ್ಯೂಟರ್ ಕೊಠಡಿಯನ್ನು ಜಿಲ್ಲಾ ನೋಂದಣಾಧಿಕಾರಿಯವರಿಗೆ, ಸಿಬ್ಬಂದಿಯವರಿಗೆ, ಪ್ರತ್ಯೇಕ ಕೊಠಡಿ, ಕೆಲವು ಪೀಠೋಪಕರಣ, ಮತ್ತು ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ವೆಚ್ಚ ರೂ.2,18,000/- ಗಳಿಗೆ (ಎರಡು ಲಕ್ಷದ ಹದಿನೆಂಟು ಸಾವಿರಗಳು ಮಾತ್ರ) ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2030-03-001-051ರಡಿ ಭರಿಸಬಹುದಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2001, ದಿನಾಂಕ 02.02.2001 ರಂತೆ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಕೆ. ರಾಮಚಂದ್ರ

ಪಿ.ಆರ್. 963

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ನೋಂದಣಿ ಮತು ಮುದ್ರಾಂಕ),

ವಿಷಯ: ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸುವ ಉದ್ದೇಶದ ವೆಚ್ಚಕ್ಕಾಗಿ ಲೆಕ್ಕ ಶೀರ್ಷಿಕೆ 2053-00-800-0-04-059 ಇತರೆ ವೆಚ್ಚಗಳ ಅಡಿಯಲ್ಲಿ ಒದಗಿಸಿರುವ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕಂಇ 550 ಎಲ್‌ಜಿಬಿ 2008, ದಿ.08.08.2008.
2) ಸರ್ಕಾರದ ಆದೇಶ ಸಂಖ್ಯೆ: ಕಂಇ 550 ಎಲ್‌ಜಿಬಿ 2008 ದಿ.20.10.2008.
3) ಸರ್ಕಾರದ ಆದೇಶ ಸಂಖ್ಯೆ: ಕಂಇ 550 ಎಲ್‌ಜಿಬಿ 2008, ದಿ.21.01.2009.

ಪ್ರಸ್ತಾವನೆ:

ಸರ್ಕಾರದ ಜಮೀನನ್ನು ಗುರುತಿಸಲು ಹಾಗೂ ಅದನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಲು ರಚಿಸಲಾಗಿರುವ / ರಚಿಸಲಾಗುವ ಕಾರ್ಯಪಡೆ ಉದ್ದೇಶಕ್ಕೆ 2008-09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2053-00-800-0-04-059 ಇತರೆ ವೆಚ್ಚಗಳ ಅಡಿಯಲ್ಲಿ ಒಟ್ಟು ರೂ.104 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ. (1)ರಲ್ಲಿ ಸರ್ಕಾರದ ಆದೇಶ ದಿ.08.08.2008ರಲ್ಲಿ ವಿಶೇಷ ಜಿಲ್ಲಾಧಿಕಾರಿಗಳು (ಜಾರಿದಳ), ಅನಧಿಕೃತ ನಿರ್ಮಾಣಗಳ ತಡೆ, ಬೆಂಗಳೂರು ನಗರ ಜಿಲ್ಲೆ ಇವರಿಗೆ ರೂ.50 ಲಕ್ಷಗಳನ್ನು ಬಿಡುಗಡೆ ಮಾಲಾಗಿರುತ್ತದೆ. ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಸರ್ಕಾರದ ಆದೇಶ ದಿ.20.10.2008ರಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರಿಗೆ ಹೊಸ ವಾಹನ ಖರೀದಿಸಲು ರೂ.5,63,905/- ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಅಲ್ಲದೇ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಸರ್ಕಾರಿ ಆದೇಶ ದಿ.21.01.2009ರಲ್ಲಿ ವಿಶೇಷ

ಜಿಲ್ಲಾಧಿಕಾರಿಗಳು (ಜಾರಿದಳ), ಅನಧಿಕೃತ ನಿರ್ಮಾಣಗಳ ತಡೆ, ಬೆಂಗಳೂರು ನಗರ ಜಿಲ್ಲೆ ಇವರಿಗೆ ರೂ.25 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮೇಲ್ಕಂಡ ಲೆಕ್ಕ ಶೀರ್ಷಿಕೆಯಲ್ಲಿ ಇನ್ನು ಬಾಕಿಯಿರುವ ಮೊತ್ತ ರೂ. 23,36,095/–ಗಳನ್ನು ವಿಶೇಷ ಜಿಲ್ಲಾಧಿಕಾರಿಗಳು (ಜಾರಿದಳ) ಇವರಿಗೆ ಒತ್ತುವರಿ ತೆರವುಗೊಳಿಸುವ ಕಾರ್ಯಕ್ಕಾಗಿ ಬಿಡುಗಡೆ ಮಾಡಲು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 550 ಎಲ್‌ಜಿಬಿ 2008, ಬೆಂಗಳೂರು, ದಿನಾಂಕ: 13ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ 2008–09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2053–00–800–0–04–059 ಇತರೆ ವೆಚ್ಚಗಳ ಅಡಿಯಲ್ಲಿ ರೂ. 23,36,095/– ಗಳನ್ನು (ಇಪ್ಪತ್ತ ಮೂರು ಲಕ್ಷ ಮುವತ್ತಾರು ಸಾವಿರದ ತೊಂಬತ್ತೈದು ರೂಪಾಯಿಗಳು ಮಾತ್ರ) ಮೊತ್ತವನ್ನು ವಿಶೇಷ ಜಿಲ್ಲಾಧಿಕಾರಿಗಳು (ಜಾರಿದಳ), ಅನಧಿಕೃತ ನಿರ್ಮಾಣಗಳ ತಡೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ.

ಈಗ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಕಛೇರಿಯ ಹಣ ಸೆಳೆಯುವ ಅಧಿಕಾರಿಗಳ ಲೆಕ್ಕ ಶೀರ್ಷಿಕೆಗೆ ಬಿಡುಗಡೆ ಮಾಡುವಂತೆಯೂ ಸಹ ಸರ್ಕಾರವು ಈ ಮೂಲಕ ಆದೇಶಿಸಿದೆ.

ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16–05–2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.964 **ಇ.ಈಶ್ವರ ನಾಯಕ್**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ಹಳೇ ಮೈಸೂರು ರಾಜ್ಯ ಮತ್ತು ರಾಜ್ಯದ ಇತರೆ ಸಂಸ್ಥಾನ ಆಡಳಿತಗಳಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಹಾಗೂ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ.

ಓದಲಾಗಿದೆ:
1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಪತ್ರ ಸಂಖ್ಯೆ: ಎಆರ್‌ಎಸ್ 51 ಎನ್‌ಎಐ 2008 ದಿನಾಂಕ 12.12.2008.
2. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಪತ್ರ ಸಂಖ್ಯೆ: ಎಆರ್‌ಎಸ್ 20 ಎಡಿಎಂ 2008 ದಿನಾಂಕ 13.01.2009.
3. ಸರ್ಕಾರದ ಆದೇಶ ಸಂಖ್ಯೆ. ಕ.ಸಂವಾಪ್ರ 10 ರಾಪಸ 2008 ದಿನಾಂಕ 08.12.2008.
4. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಪತ್ರ ಸಂಖ್ಯೆ: ಎಆರ್‌ಎಸ್ 20 ಎಡಿಎಂ 2008 ದಿನಾಂಕ 13.02.2009.
5. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 593 ಬಿಆರ್‌ಎಸ್ 2008, ದಿನಾಂಕ 10.02.2009.

ಪ್ರಸ್ತಾವನೆ:

ಮೇಲೆ (1), (2) ಮತ್ತು (4)ರಲ್ಲಿ ಓದಲಾದ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ ಅವರ ಪತ್ರಗಳಲ್ಲಿ 2008–09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿರುವಂತೆ ಹಳೇ ಮೈಸೂರು ರಾಜ್ಯ ಮತ್ತು ರಾಜ್ಯದ ಇತರೆ ಸಂಸ್ಥಾನ ಆಡಳಿತಗಳಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಹಾಗೂ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ ಕ್ರಿಯಾಯೋಜನೆಯನ್ನು ಸಲ್ಲಿಸಿರುತ್ತಾರೆ. ಸದರಿ ಕ್ರಿಯಾಯೋಜನೆಯು ಈ ಕೆಳಕಂಡಂತಿದೆ.

1	ಯುರೋಪಿಯನ್ ರಾಷ್ಟ್ರಗಳಾದ ಯುನೈಟೆಡ್ ಕಿಂಗ್‌ಡಮ್ (ಯು.ಕೆ) ಫ್ರಾನ್ ಹಾಗೂ ಇತರೆ ದೇಶಗಳಿಗೆ ಭೇಟಿ ನೀಡಿ ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದ ಟಿಪ್ಪು ಹೈದರಾಲಿ ಕಿತ್ತೂರು ರಾಣಿ ಚೆನ್ನಮ್ಮ, ಬ್ರಿಟಿಷ್ ಕಮಿಷನರ್ ಆಡಳಿತ (1881–1947) ಐತಿಹಾಸಿಕ ಮಹತ್ವವುಳ್ಳ ದಾಖಲೆಗಳು, ಕರ್ನಾಟಕದ ರಾಜ್ಯದಲ್ಲಿ ಲಭ್ಯವಿಲ್ಲದಿರುವುದರಿಂದ ಸದರಿ ದಾಖಲೆಗಳ ಪ್ರತಿಗಳು (ಮೈಕ್ರೊಫಿಲಂ ಸಿಡಿ) ಪಡೆಯಲು ತಗಲಬಹುದಾದ ವೆಚ್ಚ ಹಾಗೂ ಪ್ರಯಾಣ ಭತ್ಯೆ	ರೂ 25.00 ಲಕ್ಷಗಳು
2	ಅಮೂಲ್ಯ ಅಪ್ರಕಟಿತ ದಾಖಲೆಗಳ ಪ್ರಕಟಣೆ, ಭಾರತೀಯ ಹಾಗೂ ಕರ್ನಾಟಕ ಇತಿಹಾಸ ಪರಂಪರೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪುಸ್ತಕಗಳು, ಐತಿಹಾಸಿಕ ಮಹತ್ವದ ಮಠಗಳಲ್ಲಿರುವ ಪುಸ್ತಕಗಳು, ದಾಖಲೆಗಳು, ಹಸ್ತಪ್ರತಿ, ಅಮೂಲ್ಯ ತಾಳೇಗರಿಗಳ ಹಾಗೂ ಮೋಡಿ ಕನ್ನಡ ದಾಖಲೆಗಳ ಪ್ರಕಟಣೆ ಕಾರ್ಯ	ರೂ 25.00 ಲಕ್ಷಗಳು
	ಒಟ್ಟು	**ರೂ 50.00 ಲಕ್ಷಗಳು**

ಮೇಲೆ(3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಯವ್ಯಯದಲ್ಲಿ ಒದಗಿಸಲಾದ ರೂ. 1.00 ಕೋಟಿಗಳಲ್ಲಿ ರೂ. 50.00 ಲಕ್ಷಗಳನ್ನು ಗ್ಯಾಸೆಟಿಯಾರ್ ಇಲಾಖೆಗೆ ಪುನರ್ ಹಂಚಿಕೆ ಮಾಡಿ ಉಳಿದ ರೂ. 50.00 ಲಕ್ಷಗಳನ್ನು ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಗೆ ಬೇರ್ಪಡಿಸಿ ಹಂಚಲಾಗಿರುತ್ತದೆ. ಅದರಂತೆ ಮೇಲೆ (5) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಆರ್ಥಿಕ ಇಲಾಖೆಯು ಸದರಿ ರೂ.50.00 ಲಕ್ಷಗಳನ್ನು ಮರು ಹೊಂದಾಣಿಕೆ ಮೂಲಕ ಮಂಜೂರಾತಿ ನೀಡಿರುತ್ತದೆ. ಈ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 1 ರಾಪಸ 2009, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009

ಮೇಲೆ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ 2008-09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿದ ಕಾರ್ಯಕ್ರಮದಂತೆ ಹಳೇ ಮೈಸೂರು ರಾಜ್ಯ ಮತ್ತು ರಾಜ್ಯದ ಇತರೆ ಸಂಸ್ಥಾನ ಆಡಳಿತಗಳಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಹಾಗೂ ಗ್ರಂಥಗಳನ್ನು ಪ್ರಕಟಿಸುವ ಬಗ್ಗೆ ಈ ಕೆಳಕಂಡ ಕ್ರಿಯಾಯೋಜನೆಯನ್ನು ಸರ್ಕಾರವು ಅನುಮೋದಿಸಿದೆ.

1	ಯುರೋಪಿಯನ್ ರಾಷ್ಟ್ರಗಳಾದ ಯುನೈಟೆಡ್ ಕಿಂಗ್‌ಡಮ್ (ಯು.ಕೆ) ಫ್ರಾನ್ ಹಾಗೂ ಇತರೆ ದೇಶಗಳಿಗೆ ಭೇಟಿ ನೀಡಿ ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದ ಟಿಪ್ಪು ಹೈದರಾಲಿ ಕಿತ್ತೂರು ರಾಣಿ ಚೆನ್ನಮ್ಮ, ಬ್ರಿಟಿಷ್ ಕಮಿಷನರ್ ಆಡಳಿತ (1881-1947) ಐತಿಹಾಸಿಕ ಮಹತ್ವವುಳ್ಳ ದಾಖಲೆಗಳು, ಕರ್ನಾಟಕದ ರಾಜ್ಯದಲ್ಲಿ ಲಭ್ಯವಿಲ್ಲದಿರುವುದರಿಂದ ಸದರಿ ದಾಖಲೆಗಳ ಪ್ರತಿಗಳು (ಮೈಕ್ರೊಫಿಲಂ ಸಿಡಿ) ಪಡೆಯಲು ತಗಲಬಹುದಾದ ವೆಚ್ಚ ಹಾಗೂ ಪ್ರಯಾಣ ಭತ್ಯೆ	ರೂ 25.00 ಲಕ್ಷಗಳು
2	ಅಮೂಲ್ಯ ಅಪ್ರಕಟಿತ ದಾಖಲೆಗಳ ಪ್ರಕಟಣೆ, ಭಾರತೀಯ ಹಾಗೂ ಕರ್ನಾಟಕ ಇತಿಹಾಸ ಪರಂಪರೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪುಸ್ತಕಗಳು, ಐತಿಹಾಸಿಕ ಮಹತ್ವದ ಮಠಗಳಲ್ಲಿರುವ ಪುಸ್ತಕಗಳು, ದಾಖಲೆಗಳು, ಹಸ್ತಪ್ರತಿ, ಅಮೂಲ್ಯ ತಾಳೇಗರಿಗಳ ಹಾಗೂ ಮೋಡಿ ಕನ್ನಡ ದಾಖಲೆಗಳ ಪ್ರಕಟಣೆ ಕಾರ್ಯ	ರೂ 25.00 ಲಕ್ಷಗಳು
	ಒಟ್ಟು	**ರೂ 50.00 ಲಕ್ಷಗಳು**

ಈ ಮೇಲ್ಕಂಡ ಕ್ರಿಯಾಯೋಜನೆಯ ಕ್ರಮ ಸಂಖ್ಯೆ (1) ರಲ್ಲಿ ತಿಳಿಸಿರುವಂತೆ ವಿದೇಶಗಳಿಗೆ ಭೇಟಿ ನೀಡುವ ವಿಷಯದಲ್ಲಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು. ಮೈಕ್ರೊಫಿಲಂ ಸಿಡಿ ದಾಖಲೆಗಳ ಬಗ್ಗೆ ಹಾಗೂ ಕ್ರಮ ಸಂಖ್ಯೆ (2)ರಲ್ಲಿ ನಮೂದಿಸಲಾದ ದಾಖಲೆ ಪ್ರಕಟಣೆ ಇತ್ಯಾದಿಗಳ ಬಗ್ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205-00-104-0-01-059 (ಯೋಜನೆ) ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆರವರ ಟಿಪ್ಪಣಿ ಸಂಖ್ಯೆ : ಇಡಿ 76 ಐಎಫ್ (ಬಿಎ) 2009 ದಿನಾಂಕ 09.03.2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10.7.96 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 965 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 11 ಸಅಸೇ 2009, ಬೆಂಗಳೂರು, ದಿನಾಂಕ: 18ನೇ ಮಾರ್ಚ್ 2009

ಕರ್ನಾಟಕ ಸರ್ಕಾರ ಸಚಿವಾಲಯದ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ: 6.10.2008 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ (ವೇತನ ಶ್ರೇಣಿ 18400-22400) ಎಂದು ನಿಮ್ನೀಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 966 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಜಿ. ಶ್ರೀನಿವಾಸರಾವ್, ಸಿ.ಎಚ್.ಸಿ.–474, ಸಂಚಾರ, ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು, ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರ ಆದೇಶ ಸಂಖ್ಯೆ: ಸಿಬ್ಬಂದಿ (4) ಶಿಕ್ಷೆ /120/07/ಓ.ಬಿ.440/07 ದಿನಾಂಕ 22–11–2007.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ: 31/ಸಿಬ್ಬಂದಿ 2/2007–08 ಓ.ಬಿ:307/2007–08 ದಿನಾಂಕ 25.03.2008.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 9–6–08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)/30/2008–09 ದಿನಾಂಕ: 24–11–2008.

ಪ್ರಸ್ತಾವನೆ:–

ಶ್ರೀ ಜೆ. ಶ್ರೀನಿವಾಸರಾವ್, ಸಿ.ಎಚ್.ಸಿ.–474, ಸಂಚಾರ ಪೊಲೀಸ್ ಠಾಣೆ, ಶಿವಮೊಗ್ಗ, ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಧಿಕಾರ ದುರುಪಯೋಗಪಡಿಸಿಕೊಂಡು ಕರ್ತವ್ಯದಲ್ಲಿ ತೀವ್ರ ಲೋಪವೆಸಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

"ಶಿವಮೊಗ್ಗದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯವು ಸಿ.ಸಿ. 7042:06ರಲ್ಲಿ ಶ್ರೀ ವೇಲು ಚಕ್ಕಮರಡಿ ಗ್ರಾಮ ಇವರಿಗೆ ವಾರೆಂಟ್ ಹೊರಡಿಸಿದ್ದು, ನೀವು ಸದರಿ ವಾರೆಂಟ್ ಆಸಾಮಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸದೆ ವಾರೆಂಟ್‌ನ ಬಾಬ್ತು ದಂಡದ ಹಣವೆಂದು ಅವರಿಂದ 3 ಬಾರಿ ಒಟ್ಟು 780–00 ರೂ.ಗಳನ್ನು ಪಡೆದು ಅದನ್ನು ನ್ಯಾಯಾಲಯಕ್ಕೆ ಕಟ್ಟದೆ ಅಧಿಕಾರ ದುರುಪಯೋಗಪಡಿಸಿಕೊಂಡು ಕತವ್ಯದಲ್ಲಿ ತೀವ್ರ ಲೋಪವೆಸಗಿರುತ್ತೀರಿ"

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ 22–11–2007ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡಿ ದಿ.15–06–07 ರಿಂದ 29–07–2007 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸುವ ದಂಡನೆಯನ್ನು ವಿಧಿಸಿದ್ದಾರೆ.

ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಅರ್ಜಿದಾರರ ಮೇಲ್ಮನವಿಯನ್ನು ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 25.03.2008 ರ ಆದೇಶದಲ್ಲಿ ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 02 ಪೊಸಿಅ 2009, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ.ಶ್ರೀನಿವಾಸರಾವ್, ಸಿ.ಎಚ್.ಸಿ.–474 ಸಂಚಾರ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಪಿ.ಆರ್. 968 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಬಿ.ವಿ.ಸುರೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಮುಲ್ಕಿ ವೃತ್ತ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಡಿಇ/40/ಉವ/2006-07 ದಿ:01-02-2007.
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು, ಇವರ ಆದೇಶ ಸಂಖ್ಯೆ:ಸಿಬಿ(8)15/2007-08 ದಿನಾಂಕ:22.12.2007.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:07.01.2008.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)9/2007-08 ದಿನಾಂಕ:05.09.2008.

ಪ್ರಸ್ತಾವನೆ:

ಶ್ರೀ ಬಿ.ವಿ.ಸುರೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಇವರು ರಾಮದುರ್ಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ಹಾಗೂ ಕರ್ತವ್ಯಲೋಪ ಎಸಗಿರುವ ಹಿನ್ನಲೆಯಲ್ಲಿ ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಆಪಾದಿತ ಪೊಲೀಸ್ ಅಧಿಕಾರಿ ಬಿ.ವಿ.ಸುರೇಶ್, ಪೊಲೀಸ್ ವೃತ್ತ ನಿರೀಕ್ಷಕರು, ರಾಮದುರ್ಗ ವೃತ್ತ, ರಾಮದುರ್ಗ ರವರಾದ ನೀವು

1) ಪ್ರಾಥಮಿಕ ಆರೋಗ್ಯ ಕೇಂದ್ರ ಕಟಕೋಳದ ವೈದ್ಯಾಧಿಕಾರಿಗಳು ಪೋಸ್ಟ್‌ಮಾರ್ಟಮ್ ವರದಿಯಲ್ಲಿ ಮೃತಳ ಬಲಕಿವಿಯಿಂದ ಎಡಕಿವಿಯವರೆಗೆ ಗಾಯದ ಗುರುತಿದ್ದು ಮರಣವು ಉರುಲು ಹಾಕಿದ್ದರಿಂದ ಸಂಭವಿಸಿರುವುದಾಗಿ ಹೇಳಿದ್ದಾರೆ. ಈ ಗಾಯವು ಸ್ಪಷ್ಟವಾಗಿ ಕಾಣುವಂತೆ ಇದ್ದರೂ ಸಹ ಪಂಚನಾಮಾ ವರದಿಯಲ್ಲಿ ಈ ಗಾಯದ ಗುರುತಿನ ಬಗ್ಗೆ ನಮೂದಿಸದೇ ನೀವು ನಿಮ್ಮ ಕರ್ತವ್ಯದಲ್ಲಿ ಘೋರ ಕರ್ತವ್ಯಚ್ಯುತಿ ಎಸಗಿರುತ್ತೀರಿ.
2) ಮೃತಳ ಸಾವಿನ ಬಗ್ಗೆ ಮತ್ತು ಅವಳ ಮೈಮೇಲಿನ ಗಾಯಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸದೇ ಯಾವ ರೀತಿಯ ಗಾಯಗಳೆಂದು ಸರಿಯಾಗಿ ತಪಾಸಣೆ ಮಾಡದೇ ಮೃತಳ ಮೈಮೇಲಿನ ಗಾಯಗಳು ಪೋಸ್ಟ್‌ಮಾರ್ಟಮ್ ಪೂರ್ವದಲ್ಲಿ ಆದವುಗಳೇ ಅಥವಾ ನಂತರದವುಗಳೇ ಅನ್ನುವ ಬಗ್ಗೆ ಮತ್ತು ಈ ಗಾಯಗಳು ಯಾವುದಾದರೂ ಆಯುಧದಿಂದ ಆದವು ಅನ್ನುವ ಬಗ್ಗೆ ವಿವರವಾಗಿ ವೈದ್ಯಾಧಿಕಾರಿಗಳಿಂದ ವರದಿ ಪಡೆಯದೇ ನಿಮ್ಮ ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ಮತ್ತು ಕರ್ತವ್ಯಚ್ಯುತಿ ಪ್ರದರ್ಶಿಸಿರುತ್ತೀರಿ.
3) ದಿನಾಂಕ: 17-08-2005 ರಂದು ವೈದ್ಯಾಧಿಕಾರಿಗಳಿಂದ ಪೋಸ್ಟ್‌ಮಾರ್ಟಮ್ ವರದಿಯನ್ನು ಸ್ವೀಕರಿಸಿದರೂ ಸಹ ಪೋಸ್ಟ್‌ಮಾರ್ಟಮ್ ವರಧಿಯನ್ನಾಧರಿಸಿ ತನಿಖೆಯನ್ನು ಮಾಡಿರುವುದಿಲ್ಲ ಮತ್ತು ಸಾವು ಉರುಲು ಹಾಕಿದ್ದರಿಂದ ಸಂಭವಿಸಿದೆ ಅನ್ನುವ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಿ ಸಕಾರಣಗಳೊಂದಿಗೆ ಪ್ರಕರಣಗಳನ್ನು ಪುಷ್ಟೀಕರಿಸದೇ ಮರಣಕ್ಕೆ ಕಾರಣವಾದ ಆಯುಧ/ವಸ್ತುಗಳನ್ನು ಜಪ್ತ ಮಾಡದೇ ಅಥವಾ ಮಾಡಲು ಪ್ರಯತ್ನಿಸದೇ ನಿಮ್ಮ ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಮತ್ತು ಕರ್ತವ್ಯಲೋಪ ಎಸಗಿರುತ್ತೀರಿ.
4) ಫಿರ್ಯಾದಿದಾರರಾದ ಶ್ರೀ ಬಾಳಪ್ಪ ಬೊಮ್ಮಣ್ಣವರ ಸಾ:ಸಿಂಚನೂರ ಇವರು ತಮ್ಮ ಫಿರ್ಯಾದಿ ಅರ್ಜಿಯಲ್ಲಿ ದುರ್ಗಪ್ಪ ನಿಂಗಪ್ಪ ಬೊಮ್ಮಣ್ಣವರ ಅನ್ನುವ ಸಂಶಯುಕ್ತ ವ್ಯಕ್ತಿಯ ಬಗ್ಗೆ ಸ್ಪಷ್ಟವಾಗಿ ಫಿರ್ಯಾದದಲ್ಲಿ ಪ್ರಸ್ತಾಪಿಸಿದ್ದರೂ ಸಹ ಅವನನ್ನು ಬಂಧಿಸಿ ಸತ್ಯ ಹೊರಗೆಡವುವಲ್ಲಿ ವಿಫಲರಾಗಿದ್ದೂ ಅಲ್ಲದೆ ಸದರಿ ವ್ಯಕ್ತಿಯನ್ನು ಸಾಕ್ಷಿದಾರರನ್ನಾಗಿ ಮಾಡಿ ಸಿಆರ್‌ಪಿಸಿ ಕಲಂ 161ರಲ್ಲಿ ಹೇಳಿಕೆಯನ್ನು ಪಡೆದುಕೊಂಡು ನೀವು ನಿಮ್ಮ ಕರ್ತವ್ಯದಲ್ಲಿ ಘೋರನಿರ್ಲಕ್ಷತನ ಮತ್ತು ಕರ್ತವ್ಯಲೋಪ ಎಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲ ಎಂದು ಸಲ್ಲಿಸಿದ ವರದಿಯನ್ನು ಶಿಸ್ತು ಪ್ರಾಧಿಕಾರವು ಒಪ್ಪದೆ, ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ:01-02-2007ರ ಆದೇಶದಲ್ಲಿ "ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು, ಇವರು ಅರ್ಜಿದಾರರ ಮೇಲ್ಮನವಿಯನ್ನು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:22-12-07ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 11 ಪೊಸಿಅ 2009, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ.ಬಿ.ವಿ.ಸುರೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಮುಲ್ಕಿ ವೃತ್ತ, ದಕ್ಷಿಣ ಕನ್ನಡ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 970

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ವಿಷಯ: ಬಳ್ಳಾರಿ ಜಿಲ್ಲೆ ಸಿರಗುಪ್ಪಾದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ವಸತಿ ಗೃಹ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:
1. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಇವರ ಆದೇಶ ನಂ:ಪ.ನಿ./20/88–89, ದಿನಾಂಕ 16.03.89.
2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವಾಜ್ಯಗಳ ಇಲಾಖೆ ಬೆಂಗಳೂರು ಇವರ ಪತ್ರ ಸಂ:ಡಿಪಿಎನ್/ಸ್ಥಳಾವ/14/06–07, ದಿನಾಂಕ:28.02.2007 ಮತ್ತು 26.02.2009.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ 16.03.89ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರು ಬಳ್ಳಾರಿ ಜಿಲ್ಲೆ ಸಿರಗುಪ್ಪ ಪಟ್ಟಣದ ಸರ್ವೆ ನಂ. 417/ಎ/1ಎರಲ್ಲಿ 60X40 ಚದರ ಅಡಿ ಜಾಗವನ್ನು ಅಭಿಯೋಜನಾ ಇಲಾಖೆಗೆ ಮಂಜೂರು ಮಾಡಿರುತ್ತಾರೆ.

ಮೇಲೆ ಓದಲಾದ (2)ರ ದಿನಾಂಕ : 28.02.2007 ಮತ್ತು 26.02.2009 ರ ಪತ್ರಗಳಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವಾಜ್ಯಗಳ ಇಲಾಖೆ, ಬೆಂಗಳೂರು ಇವರು ಬಳ್ಳಾರಿ ಜಿಲ್ಲೆ ಸಿರಗುಪ್ಪದಲ್ಲಿ ಬಳ್ಳಾರಿ ಜಿಲ್ಲೆ ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುವ ಸ್ಥಳದಲ್ಲಿ ಸಹಾಯಕ ಸರ್ಕಾರಿ ಅಭಿಯುತರ ವಸತಿ ಗೃಹ ಕಟ್ಟಡವನ್ನು ನಿರ್ಮಾಣ ಮಾಡುವ ಕಾಮಗಾರಿಗೆ ಕಾರ್ಯ ನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ ಇವರು ತಯಾರಿಸಿರುವ ಅಂದಾಜು ಪಟ್ಟಿಯನ್ನು ಸಲ್ಲಿಸುತ್ತಾ, ಸದರಿ ಕಾಮಗಾರಿಗೆ 2008–09ನೇ ಸಾಲಿನ ಅಪೆಂಡಿಕ್ಸ್ – 'ಇ' ನಲ್ಲಿ ರೂ.6.25 ಲಕ್ಷಗಳ ಅನುದಾನವನ್ನು ಒದಗಿಸಿರುವುದರಿಂದ, ಲೋಕೋಪಯೋಗಿ ಇಲಾಖೆಯ ಅಭಿಯಂತರರು ಸಲ್ಲಿಸಿರುವ ರೂ.6.25 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ನಂ. ಒಇ 119 ಪಿಪಿಇ 2007, ಬೆಂಗಳೂರು, ದಿನಾಂಕ: 20ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬಳ್ಳಾರಿ ಜಿಲ್ಲೆ ಸಿರಗುಪ್ಪ ಪಟ್ಟಣದ ಸರ್ವೆ ನಂ.417/ಎ/1ಎ ರಲ್ಲಿ 60 X 40 ಚದರ ಅಡಿಗಳ ಜಾಗದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ವಸತಿ ಗೃಹದ ನಿರ್ಮಾಣದ ಕಾಮಗಾರಿಗಾಗಿ 2008–09ನೇ ಸಾಲಿನ ಆಯವ್ಯಯದಲ್ಲಿ ರೂ.6.25 (ಆರು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು)ಗಳ ಅನುದಾನವನ್ನು ಒದಗಿಸಲಾಗಿದ್ದು, ಸದರಿ ಕಾಮಗಾರಿಯ ಕೆಲಸವನ್ನು ಪ್ರಾರಂಭಿಸಲು ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ ಇವರು ತಯಾರಿಸಿರುವ ರೂ. 6.25 (ಆರು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು)ಗಳ ಅಂದಾಜು ಪಟ್ಟಿಗೆ ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಒಸಾಇ 15909 ಆಂಆಸ 2009 ದಿನಾಂಕ: 12.03.2009 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 1996, ದಿನಾಂಕ: 10.07.1996 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 971

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಕಾ ಮತ್ತು ಸು, ಕಾಫಿಪೋಸಾ ಮತ್ತು ಅಭಿಯೋಗಗಳು)

ಆರ್ಥಿಕ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಆಇ 19 ಬಿಪಿಇ 2008, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2009

ಸರ್ಕಾರದ ಆದೇಶ ಸಂಖ್ಯೆ ಆಇ 19 ಬಿಪಿಇ 2008, ದಿ: 23.12.2008ರ ಕ್ರ. ಸಂ. 4ರಲ್ಲಿ "ದಿನಾಂಕ: '14.3.2009 ರೊಳಗೆ" ಎಂದಿರುವುದನ್ನು "ದಿನಾಂಕ: 23.3.2009 ರೊಳಗೆ" ಎಂದು ಓದಿಕೊಳ್ಳತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ: ಆಇ 19 ಬಿಪಿಇ 2008, ದಿ: 23.12.2008 ರ ಕ್ರ. ಸಂ. 9ರಲ್ಲಿ "ದಿನಾಂಕ: 10.3.2009 ರೊಳಗೆ" ಎಂದಿರುವುದನ್ನು "ದಿನಾಂಕ: 21.3.2009ರೊಳಗೆ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಅಜಯ್ ಸೇಠ್

ಪಿ.ಆರ್. 972 ಸರ್ಕಾರದ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ).

ಒಳಾಡಳಿತ ಸಚಿವಾಲಯ

ತಿದ್ದುಪಡಿ

ನಂ. ಒಇ 20 ಪಿಪಿಇ 2009, ಬೆಂಗಳೂರು, ದಿನಾಂಕ: 23ನೇ ಮಾರ್ಚ್ 2009

ಸರ್ಕಾರದ ಆದೇಶ ನಂ ಒಇ 20 ಪಿಪಿಇ 2009 ದಿನಾಂಕ 24.02.2009 ರ ಪ್ರಸ್ತಾವನೆಯ 4ನೇ ಕಂಡಿಕೆಯ 2ನೇ ಸಾಲಿನಲ್ಲಿ ಹಾಗೂ ಆದೇಶ ಭಾಗದ 2ನೇ ಸಾಲಿನಲ್ಲಿ "ಸಂಕೇಶ್ವರ್" ಎಂಬುದರ ಬದಲಾಗಿ "ಶೀವರ್ಗಿ" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು. ಉಳಿದಂತೆ ದಿನಾಂಕ 24.02.2009ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 975 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ತಿದ್ದುಪಡಿ

ನಂ. ಒಇ 180 ಪಿಪಿಇ 2009, ಬೆಂಗಳೂರು, ದಿನಾಂಕ: 23ನೇ ಮಾರ್ಚ್ 2009

ಸರ್ಕಾರದ ಆದೇಶ ನಂ ಓಇ 561 ಪಿಪಿಇ 2008 ದಿನಾಂಕ 18.02.2009 ರ ಪ್ರಸ್ತಾವನೆಯ 4ನೇ ಕಂಡಿಕೆಯ ಮೊದಲನೇ ಸಾಲಿನಲ್ಲಿ ಹಾಗೂ ಆದೇಶ ಭಾಗದ ಮೊದಲನೇ ಸಾಲಿನಲ್ಲಿ "ಶ್ರೀಮತಿ ಸತ್ಯವತಿ" ಎಂಬುದರ ಬದಲಾಗಿ "ಶ್ರೀಮತಿ ಹೆಚ್.ಆರ್.ಸತ್ಯವತಿ" ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳುವುದು. ಉಳಿದಂತೆ ದಿನಾಂಕ 18.02.2009ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 976 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಕಂದಾಯ ಸಚಿವಾಲಯ

ಸರ್ಕಾರದ ಆದೇಶ ಸಂ.ಕಂಇ 911 ಎಲ್.ಜಿ.ಬಿ. 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009

ವಿಷಯ: ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 17/9/2008 ರಂದು ನೀಡಿರುವ ಆದೇಶದನ್ವಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕ್ರಮ ಕೈಗಳ್ಳುವ ಬಗ್ಗೆ.

ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 17/9/2008 ರಂದು ನೀಡಿರುವ ಆದೇಶದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ:–

"The lake area as per the revenue records will be surveyed by the Revenue Department and would be fenced at the cost of the respondents"

ಮೇಲಿನ ಆದೇಶದಂತೆ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಈಗಾಗಲೇ ಕೆರೆ ಪ್ರದೇಶಗಳ ಸರ್ವೆ ಪೂರ್ಣಗೊಂಡಿದ್ದಲ್ಲಿ ಅವುಗಳ ಪೂರ್ಣ ವಿವರಗಳನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದವರಿಗೆ ಮತ್ತು ಇತರೆ ಸಂಸ್ಥೆಗಳಿಗೆ ಕಳುಹಿಸಿ, ಕೋರ್ಟಿನ ಆದೇಶದಂತೆ ತಂತಿ ಬೇಲಿ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ವಿಷಯದ ಬಗ್ಗೆ ದಿನಾಂಕ 31/1/2009ರಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ನಿರ್ಣಯಗಳ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ದಾಖಲೆಗಳಲ್ಲಿ

ಸರ್ಕಾರಿ ಕೆರೆಗಳೆಂದು ನಮೂದಾಗಿದ್ದು, ಹಾಲಿ ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೋಸ್ಕರ ಬಿಬಿಎಂಪಿ, ಬಿಡಿಎ, ಜಿಲ್ಲಾ ಪಂಚಾಯತ್ ಮತ್ತು ನೀರಾವರಿ ಇಲಾಖೆಗಳ ಸುಪರ್ದಿಗೆ ನೀಡಲಾಗಿರುವ ಕೆರೆಗಳನ್ನು ಆಯಾಯ ಇಲಾಖೆಗಳು ನಿರ್ವಹಿಸುತ್ತಿದ್ದು, ಇಂತಹ ನಿರ್ವಹಣೆಯು ಸದರಿ ಕೆರೆಗಳ ಒತ್ತುವರಿಗಳ ಸಂರಕ್ಷಣೆ ಮತ್ತು ಇಂತಹ ಒತ್ತುವರಿ ಬಗ್ಗೆ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಹ ಆಯಾಯ ಇಲಾಖೆಗಳ ಕರ್ತವ್ಯ ಆಗಿರುತ್ತದೆ.

ಆದರೂ ಮೇಲಿನ ಸಭೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದ ಹಿನ್ನಲೆಯಲ್ಲಿ ಯಾವ ಯಾವ ಇಲಾಖೆಗಳು ಸರ್ಕಾರಿ ಕೆರೆಗಳನ್ನು ತಮ್ಮ ಸುಪರ್ದಿಯಲ್ಲಿ ಇಟ್ಟುಕೊಂಡು ನಿರ್ವಹಿಸುತ್ತಿವೆಯೋ ಅಂತಹ ಇಲಾಖೆಗಳಿಗೆ ಸದರಿ ಕೆರೆಗಳನ್ನು ಸಂರಕ್ಷಿಸುವ ಹಾಗೂ ಅಂತಹ ಕೆರೆಗಳನ್ನು ಒತ್ತುವರಿಯಿಂದ ತೆರವುಗೊಳಿಸಲು ಅಗತ್ಯವಿರುವ ಹಾಗೂ ಈ ಸಂಬಂಧ ಕೋರ್ಟಿನಲ್ಲಿ ಹೂಡಿರುವ/ಹೂಡಬಹುದಾದ ದಾವೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಹಾಗೂ defend ಮಾಡಿಕೊಳ್ಳಲು ಈ ಮೂಲಕ ಅಧಿಕಾರ ನೀಡಲಾಗಿದೆ.

ಕೆರೆಗಳ ಒಡೆತನವನ್ನು ಆಯಾಯ ಇಲಾಖೆಗಳಿಗೆ ಹಸ್ತಾಂತರಿಸುವ ಬಗ್ಗೆ ಪ್ರತ್ಯೇಕವಾದ ಆದೇಶವನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 978

ಇ. ಈಶ್ವರ್ ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ).

ವಿಷಯ: ಶ್ರೀಮತಿ ಬಿ.ಆರ್. ರೂಪ, ತಹಶೀಲ್ದಾರ್ ಗ್ರೇಡ್–2, ಪ್ರಸ್ತುತ ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ಜಿಲ್ಲೆ ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ: 1) ಸರ್ಕಾರದ ಅಧಿಸೂಚನೆ ಸಂ: ಕಂಇ 08 ಎಟಿಎಸ್ 2006, ದಿನಾಂಕ:15–04–2006.

2) ಶ್ರೀಮತಿ ಬಿ.ಆರ್. ರೂಪ, ತಹಶೀಲ್ದಾರ್ ಇವರ ಮನವಿ ದಿನಾಂಕ: 23–02–2007.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ:(1), ದಿನಾಂಕ: 15.04.2006ರ ಅಧಿಸೂಚನೆಯಲ್ಲಿ, ಶ್ರೀಮತಿ ಬಿ.ಆರ್. ರೂಪ, ಇವರು ಕಂದಾಯ ಇಲಾಖೆಯ ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ನೇಮಕಾತಿಗೊಂಡಿರುತ್ತಾರೆ. ಸದರಿಯವರು ಈ ಹುದ್ದೆಗೆ, ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ, ಪ್ರೌಢಶಾಲಾ, ಸಹ ಶಿಕ್ಷಕರಾಗಿ ಸರ್ಕಾರಿ ಪ್ರಾಥಶಾಲೆ ಅಕ್ಕನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿ ದಿನಾಂಕ: 04.11.98 ರಿಂದ 19.04.2006ರವರೆಗೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಮಂಜೂರಾತಿಗೆ ಪರಿಗಣಿಸಲು ಕೋರಿರುತ್ತಾರೆ. ಸದರಿಯವರು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರ ಜ್ಞಾಪನ ಸಂ:ಆ4:ಇಲಾಖಾ ಅನು.ಬಗ್ಗೆ.05:2006–07, ದಿನಾಂಕ: 19.04.2006ರನ್ವಯ ಬಿಡುಗಡೆ ಹೊಂದಿರುತ್ತಾರೆ. ಆದ್ದರಿಂದ ಶ್ರೀಮತಿ ರೂಪಾರವರು ಶಿಕ್ಷಣ ಇಲಾಖೆಯಲ್ಲಿ ದಿನಾಂಕ:04.11.98 ರಿಂದ 19.04.2006ರವರೆಗೆ ಸೇವಾ ಅವಧಿಯನ್ನು ಪೂರೈಸಿದ್ದು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಶ್ರೀಮತಿ ಬಿ.ಆರ್. ರೂಪ, ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ಜಿಲ್ಲೆ ಇವರ ಮನವಿಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಸದರಿಯವರ ಮೂಲ ಸೇವಾ ಪುಸ್ತಕದಲ್ಲಿ ದಾಖಲಿಸಿರುವಂತೆ ಇವರು ಈ ಹಿಂದೆ ಶಿಕ್ಷಣ ಇಲಾಖೆಯಲ್ಲಿ, ಸಹಶಿಕ್ಷಕರಾಗಿ ಸಲ್ಲಿಸಿದ್ದ ಸೇವೆ ದಿನಾಂಕ: 04.11.98 ರಿಂದ 19.04.2006ರವರೆಗೆ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ: ಆರ್‌ಡಿ 123 ಎಎಸ್‌ಡಿ 2007, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀಮತಿ ಬಿ.ಆರ್. ರೂಪ, ತಹಶೀಲ್ದಾರ್, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ವಿಭಾಗ, ಮೈಸೂರರ ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ: 04.11.98 ರಿಂದ 19.04.2006ರವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಅವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ–7) ರವರ ಟಿಪ್ಪಣಿ ಸಂ: 1403 ವೆಚ್ಚ–7/2008, ದಿನಾಂಕ: 15.12.2008ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 979

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು–3).

REVENUE SECRETARIAT

NOTIFICATION

No. RD 1 TNV 2007, Bangalore, Dated:26th February, 2009

As per the No Objection received from the Ministry of Home Affairs, Government of India vide their letter No.11/12/2007-M&G Dated:06.02.2009 and as per the correct and approved spellings in Devanagari and Roman language given by the Ministry of Science and Technology, Government of India vide their Official Memorandum No.SM/28/20/2008 Dated:14.02.2009, the name of "Byndoor" Railway Station in Kundapur Taluk, Udupi District, Karnataka ha been changed as "Mookambika Road Byndoor". The Devanagari, Roman and Regional Language (Kannada) script of the new name as given by the Survey of India will be as under:

Devanagari Script	Roman Script	Regional Language (Kannada) Script
मूकांबिका रोड बैन्दूर	MOOKAMBIKA ROAD BYNDOOR	ಮೂಕಾಂಬಿಕಾ ರೋಡ್ ಬೈಂದೂರು

3) This will come into effect from the date of publication of this notification in the official Gazette.

By order and in the name of the Governor of Karnataka,

M. VENKATESHAMURTHY

PR-758

Under Secretary to Government

(Rehabilitation & LAQ-2) Revenue Department.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ: ಶ್ರೀ ಎಸ್.ಪಿ. ರಾಜು, ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರ ರಜಾ ಅವಧಿ ಸಕ್ರಮಗೊಳಿಸುವ ಬಗ್ಗೆ.

ಓದಲಾಗಿದೆ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಇವರ ಪತ್ರಗಳ ಸಂಖ್ಯೆ ಎ2/ರಜೆ/ಸಿಆರ್-12/2008-09, ದಿನಾಂಕ:05.07.2008 ಮತ್ತು 20.09.2008.

ಪ್ರಸ್ತಾವನೆ:

ಶ್ರೀ ಎಸ್.ಪಿ. ರಾಜು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ, ಹಾವೇರಿ ಇವರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 161 ಅಪಸೇ 2007, ದಿನಾಂಕ:30.08.2007ರಲ್ಲಿ ವಿಭಾಗೀಯ ವ್ಯವಸ್ಥಾಪಕರು, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ, ಮೂಡಬಿದರೆ ಹುದ್ದೆಗೆ ವರ್ಗಾಯಿಸಲಾಗಿತ್ತು. ಅದರಂತೆ ಸದರಿಯವರು ಈ ಹುದ್ದೆಯ ಪ್ರಭಾರವನ್ನು ದಿನಾಂಕ:03.09.2007 ರಂದು ವಹಿಸಿಕೊಟ್ಟು ಅನಾರೋಗ್ಯದ ನಿಮಿತ್ತ ದಿನಾಂಕ:03.09.2007 ರಿಂದ 13.01.2008 ರವರೆಗೆ ವೈದ್ಯಕೀಯ ರಜೆ ಕೋರಿದ್ದು, ದಿನಾಂಕ:03.09.2007 ರಿಂದ 29.12.2007 ರವರೆಗೆ ವೈದ್ಯಕೀಯ ಆಧಾರದ ಮೇಲೆ 118 ದಿನ ಪರಿವರ್ತಿತ ರಜೆ ಮತ್ತು ದಿನಾಂಕ:30.12.2007 ರಿಂದ 13.01.2008ರ ಅವಧಿಗೆ 15 ದಿನಗಳ ಗಳಿಕೆ ರಜೆ ಒಟ್ಟು 133 ದಿನಗಳ ಸಂಯುಕ್ತ ರಜೆಯನ್ನು ಮಂಜೂರು ಮಾಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾದಿಕಾರಿಯವರು ಕೋರಿರುತ್ತಾರೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಪಜೀ 182 ಅಪಸೇ 2008, ಬೆಂಗಳೂರು, ದಿನಾಂಕ:24ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಶ್ರೀ ಎಸ್.ಪಿ. ರಾಜು, ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೆ ದಿನಾಂಕ:03.09.2007 ರಿಂದ 13.01.2008 ರವರೆಗಿನ ಅವಧಿಯನ್ನು ವೈದ್ಯಕೀಯ ಕಾರಣಗಳ ಮೇಲೆ ಈ ಕೆಳಗಿನಂತೆ ಸಂಯುಕ್ತ ರಜೆಯನ್ನು ಮಂಜೂರು ಮಾಡಿದೆ.

1) ದಿನಾಂಕ:03.09.2007 ರಿಂದ 29.12.2007 ರವರೆಗೆ – 118 ದಿನಗಳ ಪರಿವರ್ತಿತ ರಜೆ.

2) ದಿನಾಂಕ:30.12.2007 ರಿಂದ 13.01.2008ರವರೆಗೆ – 15 ದಿನಗಳ ಗಳಿಕೆ ರಜೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಪಿ.ಆರ್.760

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಸೇವೆಗಳು)

ವಿಷಯ: ಶ್ರೀ ಸತೀಶ್ ಬಾಬಾ ರೈ ವಲಯ ಅರಣ್ಯಾಧಿಕಾರಿ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, ನಿಯಮ 32 ರಡಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ನೀಡಲಾದ ಬಡ್ತಿಯನ್ನು ಹಿಂಪಡೆಯುವ ಬಗ್ಗೆ.

ಓದಲಾಗಿದೆ:1) ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 138 ಅಪಸೇ 2006, ದಿನಾಂಕ:01.06.2007.

2) ಶ್ರೀ ಸಿ. ಪ್ರಕಾಶ್, ವಕೀಲರು, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಜಾರಿ ಮಾಡಿರುವ ಲೀಗಲ್ ನೋಟೀಸ್ ದಿನಾಂಕ:04.02.2008.

3) ಸರ್ಕಾರದ ನೋಟೀಸ್ ಸಂಖ್ಯೆ: ಅಪಜೀ 200 ಅಇವಿ 2007, ದಿನಾಂಕ:09.09.2008.

4) ಶ್ರೀ ಸತೀಶ್ ಬಾಬಾ ರೈ ವಲಯ ಅರಣ್ಯಾಧಿಕಾರಿ ಇವರ ಸಮಜಾಯಿಷಿ ದಿನಾಂಕ:20.10.2008.

ಪ್ರಸ್ತಾವನೆ:

ಶ್ರೀ ಸತೀಶ್ ಬಾಬಾ ರೈ ವಲಯ ಅರಣ್ಯಾಧಿಕಾರಿ ಇವರಿಗೆ ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:01.06.2007ರ ಅಧಿಸೂಚನೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಿದೆ. ಶ್ರೀ ಪ್ರಕಾಶ್, ವಕೀಲರು ಶ್ರೀ ದಾಸ ನಾಯಕ್ ಇವರು ಪರವಾಗಿ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನೋಟೀಸ್‌ನಲ್ಲಿ ಶ್ರೀ ಟಿ.ಕೆ. ರಂಗನಾಥ್ ಮತ್ತು ಶ್ರೀ ಸತೀಶ್ ಬಾಬಾ ರೈ ಇವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಬಾಕಿ ಇದ್ದರೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ಬಡ್ತಿ ನೀಡಿರುವುದನ್ನು ಹಿಂಪಡೆಯಲು ಮತ್ತು ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಕೋರಿದ್ದಾರೆ.

ಶ್ರೀ ಪ್ರಕಾಶ್ ರವರು ನೀಡಿರುವ ನೋಟೀಸ್‌ನಲ್ಲಿ ಪ್ರಸ್ತಾಪಿಸಿರುವಂತೆ ತೀರ್ಥಹಳ್ಳಿ, ಜೆಎಂಎಫ್‌ಸಿ ನ್ಯಾಯಾಲಯ ಪ್ರಕರಣ ಸಂಖ್ಯೆ: 462/99ರಲ್ಲಿ ದಿನಾಂಕ:20.01.2007ರಂದು ನೀಡಿರುವ ಆದೇಶದಲ್ಲಿ ಶ್ರೀ ಸತೀಶ್ ಬಾಬಾ ರೈ ಅಂದಿನ ವಲಯ ಅರಣ್ಯಾಧಿಕಾರಿ, ಶ್ರೀ ಟಿ.ಎ. ರಂಗನಾಥ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಇತರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:3ನ್ನು ದಾಖಲು ಮಾಡಿ ಆದೇಶಿಸಿದೆ.

ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಂತರ ಮತ್ತು ಮುಂಬಡ್ತಿ ನೀಡುವ ಅವಧಿಯೊಳಗೆ ಇಲಾಖಾ/ ಕ್ರಿಮಿನಲ್ ವಿಚಾರಣೆ ಪ್ರಾರಂಭಿಸಿದ್ದಲ್ಲಿ, ಅಂತಹ ಪ್ರಕರಣಗಳನ್ನು ಹೇಗೆ ಪರಿಗಣಿಸಬೇಕೆಂಬುದರ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಎಸ್‌ಆರ್ 98, ದಿನಾಂಕ:14.07.99ರಲ್ಲಿ ಸ್ಪಷ್ಟಪಡಿಸಿದೆ. ಸದರಿ ಅಧಿಕೃತ ಜ್ಞಾಪನದ ಕಂಡಿಕೆ 3(ಬಿ) ಯ ಉಧೃತ ಭಾಗ ಈ ಕೆಳಕಂಡಂತಿದೆ:

"Where the Departmental Promotion Committee has recommended the promotion of a Government servant, but before he is actually promoted, if disciplinary proceedings or criminal prosecution of proceedings are initiated against him, his case shall be treated as if it has been placed in a sealed cover by the Departmental Promotion Committee and he shall not be promoted, Further action shall be taken in accordance with paras-4 and 5, mutatiles mutandis".

ಶ್ರೀ ಸತೀಶ್ ಬಾಬಾ ರೈ ಇವರನ್ನು ಸ್ವತಂತ್ರ ಪ್ರಭಾರದಲ್ಲಿರಿಸುವ ಸಂಬಂಧ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ದಿನಾಂಕ:19.12.2006 ರಂದು ಜರುಗಿಸಲಾಗಿದೆ. ತದನಂತರ ದಿನಾಂಕ:21.06.2007 ರಂದು ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ. ಸ್ವತಂತ್ರ ಪ್ರಭಾರದಲ್ಲಿರಿಸಿದ ದಿನಾಂಕಕ್ಕೆ ಶ್ರೀ ಸತೀಶ್ ಬಾಬಾ ರೈ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುತ್ತದೆ.

ಶ್ರೀ ಸತೀಶ್ ಬಾಬಾ ರೈ ಇವರನ್ನು ಸ್ವತಂತ್ರ ಪ್ರಭಾರದಲ್ಲಿರಿಸಿದ ದಿನಾಂಕಕ್ಕೆ ಕ್ರಿಮಿನಲ್ ಮೊಕದ್ದಮೆ ಬಾಕಿ ಇದ್ದುದರಿಂದ, ಸದರಿಯವರನ್ನು ಸ್ವತಂತ್ರ ಪ್ರಭಾರದಲ್ಲಿರಿಸಿರುವುದನ್ನು ಏಕೆ ಹಿಂಪಡೆಯಬಾರದು ಎಂಬ ಬಗ್ಗೆ ಸಮಜಾಯಿಷಿ ಸಲ್ಲಿಸಲು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ:09.09.2008ರ ಸೂಚಿಸಲಾಗಿತ್ತು.

ಶ್ರೀ ಸತೀಶ್ ಬಾಬಾ ರೈ ಇವರು ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ ದಿನಾಂಕ:20.10.2008ರಂದು ಸಲ್ಲಿಸಿರುವ ಸಮಜಾಯಿಷಿಯಲ್ಲಿ ಶ್ರೀಮತಿ ಲಲಿತಮ್ಮನವರಿಗೆ ಮಂಜೂರಾಗಿದ್ದ ಲೀಸ್ ಭೂಮಿಯನ್ನು ವಶಪಡಿಸಿಕೊಂಡು ಕಾನೂನು ಪ್ರಕಾರ ಕ್ರಮ ಜರುಗಿಸಿದೆ ಇವರ ಪತಿ ಶ್ರೀ ದಾಸನಾಯಕ್ ಇವರಿಗೆ ಯಾವುದೇ ತೊಂದರೆ ನೀಡಿಲ್ಲದಿದ್ದರೂ ದುರುದ್ದೇಶ ಪೂರಕವಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿರುತ್ತಾರೆ. ಆದುದರಿಂದ ಈ ಪ್ರಕರಣವನ್ನು ವಜಾಗೊಳಿಸಲು ಕ್ರಮವಹಿಸುವಂತೆ ನಿವೇದಿಸಿಕೊಂಡಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಲಾಗಿ, ಶ್ರೀ ಸತೀಶ್ ಬಾಬಾ ರೈ ಇವರ ವಿರುದ್ಧ ಪ್ರಥಮ ದರ್ಜೆ ನ್ಯಾಯಲಯ, ತೀರ್ಥಹಳ್ಳಿ ದಿನಾಂಕ:20.01.2007ರ ಆದೇಶದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ದಿನಾಂಕ:24.05.2007ರಂದು ಹಾಜರಾಗಲು ಸಮನ್ಸ್ ನೀಡಲು ಆದೇಶಿಸಿದೆ. ಈ ಅಧಿಕಾರಿಯನ್ನು ಸ್ವತಂತ್ರ ಪ್ರಭಾರದಲ್ಲಿರಿಸಿದ

ದಿನಾಂಕ:21.06.2007ಕ್ಕೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಬಾಕಿ ಇರುತ್ತದೆ. ಆದುದರಿಂದ ಈ ಅಧಿಕಾರಿಯನ್ನು ಸ್ವತಂತ್ರ ಪ್ರಭಾರದಲ್ಲಿರಿಸಿರುವುದನ್ನು ಹಿಂಪಡೆಯಲು ನಿರ್ಧರಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 200 ಅಇವಿ 2007, ಬೆಂಗಳೂರು, ದಿನಾಂಕ:19ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಸತೀಶ್ ಬಾಬಾ ರೈ ವಲಯ ಅರಣ್ಯಾಧಿಕಾರಿ ಇವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಅಪಜೀ 138 ಅಪಸೇ 2006, ದಿನಾಂಕ:01.06.2007ರ ಪ್ರಕಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿರಿಸಿರುವುದನ್ನು ಈ ಮೂಲಕ ಹಿಂಪಡೆಯಲಾಗಿದೆ.

ಈ ಅಧಿಕಾರಿಯು ಮುಂದಿನ ಸ್ಥಳನಿಯುಕ್ತಿ ಕೋರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ವರದಿ ಮಾಡಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಪಿ.ಆರ್.761

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಗುಲ್ಬರ್ಗಾ ವಿಭಾಗದ 5 ಜಿಲ್ಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರಿಗೆ "ಸುವರ್ಣ ಆರೋಗ್ಯ ಸುರಕ್ಷಾ" ಎಂಬ ಒಂದು ಹೊಸ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೆ ತರುವ ಬಗ್ಗೆ.

ಓದಲಾಗಿದೆ: (1) ದಿನಾಂಕ 29-9-2007 ರಂದು ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ನಡೆವಳಿಗಳು.

(2) ಯೋಜನಾ ಆಡಳಿತಾಧಿಕಾರಿ, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಯೋಜನೆ ರವರ ಏಕ ಕಡತ ಪದ್ಧತಿಯಡಿ ಸಲ್ಲಿಸಿದ ಪ್ರಸ್ತಾವನೆ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/ ಕೆ.ಹೆಚ್.ಎಸ್.ಡಿ.ಆರ್.ಪಿ/ ಹೆಚ್.ಐಎನ್‌ಎಸ್/01-08-09 ದಿನಾಂಕ 11-8-2008

(3) ಸಚಿವ ಸಂಪುಟವು ವಿಷಯ ಸಂಖ್ಯೆ:119/2009 ದಿನಾಂಕ 18-2-2009 ರಲ್ಲಿ ನೀಡಿರುವ ಅನುಮೋದನೆ.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಆರೋಗ್ಯ ವಿಮೆ ಜಾರಿಗೊಳಿಸುವ ಪ್ರಸ್ತಾವನೆ ಕಲವು ಕಾಲದಿಂದ ಸರ್ಕಾರದ ಪರಿಶೀಲನೆಯಲ್ಲಿದೆ. ರಾಜ್ಯದಲ್ಲಿನ ಬಡತನ ರೇಖೆಗಿಂತ ಕೆಳಗಿರುವವರು ಒಮ್ಮೆಲೆ ದುರಂತ ಉಂಟು ಮಾಡುವ (catastrophic) ಆರೋಗ್ಯ ಆಘಾತಕ್ಕೆ ಒಳಗಾಗುತ್ತಾರೆ. ರಾಜ್ಯದಲ್ಲಿ ಪ್ರಸ್ತುತ ಇರುವ ಆರೋಗ್ಯ ವಿಮೆ ಕಾರ್ಯಕ್ರಮಗಳು ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಬಹಳ ಕಡಿಮೆ ಪ್ರಮಾಣದಲ್ಲಿ ತಲುಪುತ್ತಿವೆ. ಕರ್ನಾಟಕದಲ್ಲಿ ಇತರೆ ಇಲಾಖೆಗಳ ಮೂಲಕ ಅಂದರೆ ಸಹಕಾರ ಇಲಾಖೆಯ ಮೂಲಕ ಯಶಸ್ವಿನಿ ಯೋಜನೆ, ಕಾರ್ಮಿಕ ಇಲಾಖೆಯ ಮೂಲಕ ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ ಮತ್ತು ಕಂದಾಯ ಇಲಾಖೆಯ ಮೂಲಕ ಆಮ್ ಆದ್ಮಿ ಭಿಮಾ ಯೋಜನೆ ಇತ್ಯಾದಿಗಳನ್ನು ಜಾರಿಗೊಳಿಸಲಾಗುತ್ತಿದೆ. ಯಶಸ್ವಿನಿ ಯೋಜನೆಯನ್ನು ವಿಶ್ಲೇಷಿಸಿದಾಗ ತಿಳಿದು ಬರುವುದೇನೆಂದರೆ, ಅದು ಸಹಕಾರಿ ಸಂಘಗಳ ಸದಸ್ಯರಿಗೆ ಮಾತ್ರ ಲಭ್ಯವಿದ್ದು, 1600 ಶಸ್ತ್ರಚಿಕಿತ್ಸೆಗಳ ಒಳಪಡಿಸುವಿಕೆ ಮತ್ತು ಆಯ್ದ ತುರ್ತು ವೈದ್ಯಕೀಯ ಚಿಕಿತ್ಸೆಗಳಿಗೆ ಸೀಮಿತವಾಗಿದೆ. ಯಶಸ್ವಿನಿ ಯೋಜನೆಯಡಿ ಒಂದಾದ ನ್ಯೂನತೆ ಎಂದರೆ ಸಹಕಾರಿ ಸಂಘದ ಸದಸ್ಯರಾಗಿರದಿದ್ದಲ್ಲಿ ಅವರು ಬಡತನ ರೇಖೆಗಿಂತ ಕೆಳಗಿದ್ದರೂ ಸಹ ಹೊರತುಪಡಿಸಲಾಗಿದೆ. ಅದಲ್ಲದೆ ನಗರ ಪ್ರದೇಶದ ಜನರನ್ನು ಅವರು ಸಹಕಾರಿ ಸಂಘದ ಸದಸ್ಯರಾಗಿದ್ದರೂ ಸಹ ಹೊರತುಪಡಿಸಲಾಗಿದೆ. ಸಹಕಾರಿ ಸಂಘಗಳ ಒಟ್ಟು ಸದಸ್ಯತ್ವದ ಶೇಕಡ 30 ಕ್ಕೂ ಹೆಚ್ಚು ಸದಸ್ಯರನ್ನು ಯಶಸ್ವಿನಿ ಯೋಜನೆಯಲ್ಲಿ ಒಳಪಡಿಸಲಾಗಿಲ್ಲ. ಅದೇ ರೀತಿ ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ ಹಾಗೂ ಆಮ್ ಆದ್ಮಿ ಭಿಮಾ ಯೋಜನೆಗಳು ತನ್ನದೇ ಆದ ರೂಪು ರೇಷೆಗಳನ್ನು ಹೊಂದಿದ್ದು ಬಡತನ ರೇಖೆಗಿಂತ ಕೆಳಗಿರುವ ಎಲ್ಲರನ್ನೂ ಅವುಗಳಡಿ ಒಳಪಡಿಸಲು ಸಾಧ್ಯವಾಗಿಲ್ಲ.

ಏನತ್ಮಧ್ಯೆ, ಆಂಧ್ರ ಪ್ರದೇಶ ಸರ್ಕಾರವು "ಆರೋಗ್ಯಶ್ರೀ" ಎಂಬ ಆರೋಗ್ಯ ವಿಮೆ ಯೋಜನೆಯನ್ನು ಆ ರಾಜ್ಯದಲ್ಲಿ ಬೃಹದಾಕಾರವಾಗಿ ಪ್ರಾರಂಭಿಸಿದೆ. ಈ ಯೋಜನೆಯಡಿ ಒಮ್ಮೆಲೆ ದುರಂತ ಉಂಟು ಮಾಡುವ (catastrophic) ಅನಾರೋಗ್ಯಗಳಿಗೆ ತೃತೀಯ ಹಂತದಲ್ಲಿ (Tertiary level) ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಆಂಧ್ರ ಪ್ರದೇಶದಲ್ಲಿ ನಾಲ್ಕು ಕೋಟಿ ಜನಸಂಖ್ಯೆಯನ್ನು ಒಳಗೊಂಡಂತೆ ಈ ಯೋಜನೆಯನ್ನು ಜಾರಿಮಾಡಲಾಗಿದೆ. ಭಾರತದಲ್ಲೇ ಇದು ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಒಳಗೊಂಡ ಕಾರ್ಯಕ್ರಮವಾಗಿದೆ. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮೇಲೆ (1) ರಲ್ಲಿ ಓದಲಾದ ದಿನಾಂಕ: 29/9/2007 ರಂದು ನಡೆದ ಸಭೆಯಲ್ಲಿ ಸುವರ್ಣ ಸುರಕ್ಷಾ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಚರ್ಚಿಸಲಾಗಿತ್ತು. ಆ ಸಭೆಯಲ್ಲಿ, ಇನ್ನಿತರೆ ಅಂಶಗಳನ್ನು ಒಳಗೊಂಡಂತೆ, ಆಂಧ್ರ ಪ್ರದೇಶದ ಆರೋಗ್ಯಶ್ರೀ ಯೋಜನೆಯನ್ನು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧ್ಯಯನ ಮಾಡಿ ಅದರಂತೆ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೊಳಿಸಲು ಒಂದು ವಿವರವಾದ ಪ್ರಸ್ತಾವನೆಯನ್ನು ತಯಾರಿಸುವಂತೆ ತೀರ್ಮಾನಿಸಲಾಯಿತು. ಅದರನ್ವಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳ ತಂಡವೊಂದು ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿ ಆರೋಗ್ಯಶ್ರೀ ಯೋಜನೆಯನ್ನು ಅಧ್ಯಯನ ಮಾಡಿದೆ. ಆಂಧ್ರ ಪ್ರದೇಶದ ಆರೋಗ್ಯಶ್ರೀ ಮಾದರಿಯು ಬಹಳ ಪ್ರಯೋಜನಕಾರಿಯಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಜನರ ಆರೋಗ್ಯ ಸ್ಥಾನಮಾನವನ್ನು ಸುಧಾರಿಸುವ ನಿಟ್ಟಿನಲ್ಲಿ ಖಚಿತವಾಗಿಯೂ ಧೀರ್ಘಕಾಲಿಕ ಪರಿಣಾಮವನ್ನು ಅದು ಬೀರುತ್ತದೆ.

ಕರ್ನಾಟಕ ರಾಜ್ಯದಲ್ಲಿಯೂ ಸಹ ಬಡತನ ರೇಖೆಯ ಕೆಳಗಿರುವ ಕುಟುಂಬಗಳು ತಮ್ಮ ಆದಾಯದ ಮುಖ್ಯ ಪಾಲನ್ನು ಆರೋಗ್ಯ ಸಮಸ್ಯೆಗಳಿಗೆ ಖರ್ಚು ಮಾಡುತ್ತಾರೆ. ಸರ್ಕಾರಿ ವಲಯದಲ್ಲಿ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಕ್ಷಣೆ ಲಭ್ಯವಿದೆ. ಬೆರಳೆಣಿಸುವ ಕೆಲವು ಸರ್ಕಾರಿ ಆಸ್ಪತ್ರೆಗಳನ್ನು ಬಿಟ್ಟರೆ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆ ಲಭ್ಯವಿರುವುದಿಲ್ಲ. ಮಾರಣಾಂತಿಕ ಖಾಯಿಲೆಗಳು ಬಡತನ ರೇಖೆಯ ಕೆಳಗಿರುವ ಕುಟುಂಬಗಳ ಹತ್ತಾರು ವರ್ಷಗಳ ಉಳಿತಾಯವನ್ನು ಅಳಿಸಿಹಾಕುತ್ತವೆ. ಬಡ ಕುಟುಂಬಗಳು ಮಾರಣಾಂತಿಕ ಖಾಯಿಲೆಗಳನ್ನು ಎದುರಿಸಲು ಸಹಾಯ ಮಾಡುವುದು ಸರ್ಕಾರದ ನೈತಿಕ ಹೊಣೆಯಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಈಗ "ಸುವರ್ಣ ಆರೋಗ್ಯ ಸುರಕ್ಷಾ" ಎಂಬ ಒಂದು ವಿವರವಾದ ಆರೋಗ್ಯ ವಿಮಾ ಯೋಜನೆಯನ್ನು ಆಂಧ್ರ ಪ್ರದೇಶದ ಆರೋಗ್ಯಶ್ರೀ ಮಾದರಿಯನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತಯಾರಿಸಿದೆ. ಸುವರ್ಣಾ ಆರೋಗ್ಯ ಸುರಕ್ಷಾ ಯೋಜನೆಯನ್ನು ಜಾರಿಗೆ ತರಲು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 25.25 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. ಆದುದರಿಂದ, ಈಗ "ಸುವರ್ಣಾ ಆರೋಗ್ಯ ಸುರಕ್ಷಾ" ಎಂಬ ಒಂದು ಪ್ರಮುಖ ಆರೋಗ್ಯ ವಿಮೆ ಯೋಜನೆಯನ್ನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರಿಗೆ ಚಿಕಿತ್ಸೆಯನ್ನು ನಗದುರಹಿತವಾಗಿ ನೀಡಲು ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿ ಮೇಲೆ ಓದಲಾದ (2) ರ ಕಡತದಲ್ಲಿ ಯೋಜನಾ ಆಡಳಿತಾಧಿಕಾರಿ, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಯೋಜನೆ ರವರು ಪ್ರಸ್ತಾವನೆ ಸಲ್ಲಿಸಿದ್ದಾರೆ.

ದಿನಾಂಕ: 1/11/2008 ರಂದು ಮಾನ್ಯ ಮುಖ್ಯಮಂತ್ರಿಯವರು ಆರೋಗ್ಯ ಕವಚ ಯೋಜನೆಯನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ರಾಜ್ಯದ ಗುಲ್ಬರ್ಗಾ ವಿಭಾಗದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು ಎಂಬುದಾಗಿ ಸಹ ಘೋಷಣೆ ಮಾಡಿದ್ದರು. ಅದರಂತೆ ಗುಲ್ಬರ್ಗಾ ವಿಭಾಗದ ಐದು ಜಿಲ್ಲೆಗಳಲ್ಲಿ ಅಂದರೆ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಮತ್ತು ಬಳ್ಳಾರಿಗಳಲ್ಲಿ ಪ್ರಾಯೋಗಿಕವಾಗಿ ಪ್ರಸಕ್ತ ಸಾಲಿನಿಂದ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಜಾರಿಗೊಳಿಸುವ ಪ್ರಸ್ತಾವನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಯೋಜನೆ ಮತ್ತು ಆರ್ಥಿಕ ಇಲಾಖೆಗಳ ಸಮಾಲೋಚನೆಯೊಂದಿಗೆ ಪರಿಶೀಲಿಸಿದೆ. ಈ ಕುರಿತು ವಿಷಯವನ್ನು ಸಚಿವ ಸಂಪುಟದ ಅನುಮೋದನೆಗೆ ಸಹ ಮಂಡಿಸಲಾಗಿ ಸಚಿವ ಸಂಪುಟವು ಮೇಲೆ (3 ರಲ್ಲಿ) ಓದಲಾದ ದಿನಾಂಕ: 18/2/2009 ರಂದು ನಡೆದ ಸಭೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ ಆಕುಕ 216 ಸಿಜಿಇ 2008, ಬೆಂಗಳೂರು, ದಿನಾಂಕ 20ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಗುಲ್ಬರ್ಗಾ ವಿಭಾಗದ ಐದು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಗಳಲ್ಲಿ ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರಿಗೆ "ಸುವರ್ಣ ಆರೋಗ್ಯ ಸುರಕ್ಷಾ" ಎಂಬ ಒಂದು ಹೊಸ ಆರೋಗ್ಯ ವಿಮೆ ಯೋಜನೆಯನ್ನು ತಕ್ಷಣದಿಂದಲೇ ಅನ್ವಯವಾಗುವಂತೆ ಜಾರಿಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

2. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಜಾರಿಗೊಳಿಸಲು "ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್" ಎಂಬ ಹೆಸರಿನ ಒಂದು ಟ್ರಸ್ಟ್‌ನ್ನು ಭಾರತೀಯ ಟ್ರಸ್ಟ್ ಅಧಿನಿಯಮ 1882 ರಡಿ ಕೆಳಕಂಡಂತೆ ರಚಿಸಿ ಅದರ ಮೂಲಕ ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1.	ಮಾನ್ಯ ಮುಖ್ಯ ಮಂತ್ರಿಗಳು	ಪ್ರಧಾನ ಪೋಷಕರು
2.	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	ಪೋಷಕರು–1
3.	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು	ಪೋಷಕರು–2
4.	ಸರ್ಕಾರದ ಕಾರ್ಯದರ್ಶಿ, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಅಧ್ಯಕ್ಷರು
5.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅಥವ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಿಲ್ಲದ ಅವರ ಪ್ರತಿನಿಧಿ	ಟ್ರಸ್ಟೀ
6.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)	ಟ್ರಸ್ಟೀ

7.	ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ	ಟ್ರಸ್ಟೀ
8.	ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ	ಟ್ರಸ್ಟೀ
9.	ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ಮುಖ್ಯ ಕಾರ್ಯನಿರ್ವಾಹಕ ಟ್ರಸ್ಟೀ
10.	ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ / ಯೋಜನಾ ನಿರ್ದೇಶಕರು, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ	ಟ್ರಸ್ಟೀ
11.	ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಟ್ರಸ್ಟೀ
12.	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ	ಟ್ರಸ್ಟೀ
13.	ಡಾ. ದೇವಿ ಶೆಟ್ಟಿ, ಕಾರ್ಡಿಯೋ ಥೋರಾಸಿಕ್ ಸರ್ಜನ್, ನಾರಾಯಣ ಹೃದಯಾಲಯ, ಬೆಂಗಳೂರು	ಟ್ರಸ್ಟೀ
14.	ಟಸ್ಟ್ ನ ಕಾರ್ಯ-ನಿರ್ವಾಹಕ ನಿರ್ದೇಶಕರು	ಟ್ರಸ್ಟೀ-ಕಾರ್ಯದರ್ಶಿ
15.	ಡಾ.ಸಿ.ಎನ್. ಮಂಜುನಾಥ್, ನಿರ್ದೇಶಕರು, ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು	ಟ್ರಸ್ಟೀ
16.	ಡಾ. ಡಿ. ನಾಗರಾಜ್, ನಿರ್ದೇಶಕರು, ನಿಮ್ಹಾನ್ಸ್, ಬೆಂಗಳೂರು	ಟ್ರಸ್ಟೀ
17.	ಶ್ರೀ ಮೋಹನ್ ದಾಸ್ ಪೈ, ಇನ್ಫೋಸಿಸ್ ಸಂಸ್ಥೆ, ಬೆಂಗಳೂರು	ಟ್ರಸ್ಟೀ
18.	ಡಾ.ಕೆ.ವಿ.ರಾಜು, ಅರ್ಥಶಾಸ್ತ್ರಜ್ಞರು, ಬೆಂಗಳೂರು	ಟ್ರಸ್ಟೀ
19.	ಡಾ. ಹೆಚ್. ಸುದರ್ಶನ್, ಕರುಣಾ ಟ್ರಸ್ಟ್	ಟ್ರಸ್ಟೀ
20.	ಡಾ. ಅಶೋಕ್ ಶೆಣೈ, ನಿರ್ದೇಶಕರು, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ಬೆಂಗಳೂರು	ಟ್ರಸ್ಟೀ

ಸದರಿ ಟ್ರಸ್ಟ್ ಆರೋಗ್ಯ, ವಿಮೆ, ಆರ್ಥಿಕ, ರಿಸ್ಕ್ ನಿರ್ವಹಣೆ ಇತ್ಯಾದಿ ಕ್ಷೇತ್ರದಲ್ಲಿರುವ ಪ್ರಮುಖ ವ್ಯಕ್ತಿಗಳನ್ನು ಆಗಿಂದಾಗ್ಯೆ ಆಹ್ವಾನಿಸಬಹುದು. ಅಂತಹ ಆಹ್ವಾನಿತರ ಸಂಖ್ಯೆ ಒಂದು ಸಲಕ್ಕೆ ಐದನ್ನು ಮೀರಬಾರದು.

3. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯವಾದ ನೀತಿ ನಿರ್ಣಯಗಳಿಗೆ ಸಂಬಂಧಿಸಿದ ಎಲ್ಲಾ ತೀರ್ಮಾನಗಳನ್ನು ತೆಗೆದುಕೊಳ್ಳಲು ಸದರಿ ಟ್ರಸ್ಟ್ ಅಧಿಕಾರ ಹೊಂದಿರುತ್ತದೆ ಹಾಗೂ ಸದರಿ ಟ್ರಸ್ಟ್ ಈ ಯೋಜನೆಯ ಒಟ್ಟಾರೆ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಆಡಳಿತ ಅಧಿಕಾರ ಸಹ ಹೊಂದಿರುತ್ತವೆ. ಸದರಿ ಟ್ರಸ್ಟ್‌ನ ಅಧಿಕಾರ ಮತ್ತು ಜವಾಬ್ದಾರಿ ಈ ದೆಸೆಯಲ್ಲಿ ಪ್ರತ್ಯೇಕವಾಗಿ ನೊಂದಾಯಿಸಲ್ಪಡುವ ಟ್ರಸ್ಟ್ ಡೀಡ್ ನಲ್ಲಿ ನಮೂದಿಸಿರುವ ಪ್ರಕಾರ ಇರತಕ್ಕದ್ದು.

4. ಈ ಯೋಜನೆಯ ದಿನನಿತ್ಯದ ಕಾರ್ಯ ನಿರ್ವಹಣೆಗಾಗಿ ಕೆಳಕಂಡ ಕಾರ್ಯಕಾರಿ ಸಮಿತಿಯನ್ನು ಸಹ ರಚಿಸಲಾಗಿದೆ:-

1.	ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಅಧ್ಯಕ್ಷರು
2.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಅಥವ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಿಲ್ಲದ ಅವರ ಪ್ರತಿನಿಧಿ	ಸದಸ್ಯರು
3.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)	ಸದಸ್ಯರು
4.	ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ಸದಸ್ಯರು
5.	ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ / ಯೋಜನಾ ನಿರ್ದೇಶಕರು, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ	ಸದಸ್ಯರು
6.	ಟ್ರಸ್ಟ್ ನ ಕಾರ್ಯ-ನಿರ್ವಾಹಕ ನಿರ್ದೇಶಕರು	ಸದಸ್ಯ-ಕಾರ್ಯದರ್ಶಿ
7.	ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಸದಸ್ಯರು
8.	ಡಾ. ಹೆಚ್. ಸುದರ್ಶನ್, ಕರುಣಾ ಟ್ರಸ್ಟ್,	ಸದಸ್ಯರು
9.	ಡಾ. ಕೆ.ವಿ. ರಾಜು, ಅರ್ಥಶಾಸ್ತ್ರಜ್ಞರು, ಬೆಂಗಳೂರು	ಸದಸ್ಯರು
10.	ಶ್ರೀ ಮೋಹನ್ ದಾಸ್ ಪೈ, ಇನ್ಫೋಸಿಸ್	ಸದಸ್ಯರು

5. ಕಾರ್ಯಕಾರಿ ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿ ಕೆಳಕಂಡಂತಿರುತ್ತದೆ.

(1) ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಒಂದು ಅನುಷ್ಠಾನ ಏಜೆನ್ಸಿಯನ್ನು (Implementing Agency) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಅದರಡಿ ರಚಿಸಲಾದ ನಿಯಮಗಳನ್ನು ಅನುಸರಿಸಿ ಆಯ್ಕೆ ಮಾಡುವುದು.

(2) ಅನುಷ್ಠಾನ ಏಜೆನ್ಸಿಯು ನಿರ್ವಹಿಸುವ ಕಾರ್ಯ ಮತ್ತು ಜವಾಬ್ದಾರಿಯನ್ನು ನಿಗದಿಪಡಿಸಿ ಅದರ ಜೊತೆ ಹಾಗೂ ಜಾಲ ಆಸ್ಪತ್ರೆಗಳ (Network Hospitals) ಜೊತೆ ಸೂಕ್ತ ಒಪ್ಪಂದ ಮಾಡಿಕೊಳ್ಳುವುದು. ಒಟ್ಟಾರೆಯಾಗಿ ಈ ಯೋಜನೆಯನ್ನು ಜಾರಿಗೊಳಿಸಲು ದಿನನಿತ್ಯದ ಆಡಳಿತಕ್ಕೆ ಬೇಕಾದ ಎಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳಲು ಕಾರ್ಯಕಾರಿ ಸಮಿತಿಗೆ ಪೂರ್ಣ ಅಧಿಕಾರವಿರುತ್ತದೆ.

(3) ಸದರಿ ಕಾರ್ಯಕಾರಿ ಸಮಿತಿಯ ವಿವರವಾದ ಅಧಿಕಾರ ಮತ್ತು ಜವಾಬ್ದಾರಿ ಈ ದೆಸೆಯಲ್ಲಿ ಪ್ರತ್ಯೇಕವಾಗಿ ನೊಂದಾಯಿಸಲ್ಪಡುವ ಟ್ರಸ್ಟ್ ಡೀಡ್ ನಲ್ಲಿ ನಮೂದಿಸಿರುವ ಪ್ರಕಾರ ಇರತಕ್ಕದ್ದು.

6. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯ ರೂಪುರೇಷೆಗಳು ಕೆಳಕಂಡಂತೆ ಇರತಕ್ಕದ್ದು:-

(1) ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಡಿಯಲ್ಲಿ ಈ ಕೆಳಕಂಡ ಮಾರಣಾಂತಿಕ ಖಾಯಿಲೆಗಳಿಗೆ ಆಸ್ಪತ್ರೆಗೆ ದಾಖಲಾತಿ, ಶಸ್ತ್ರಚಿಕಿತ್ಸೆ ಹಾಗೂ ಇತರೆ ಚಿಕಿತ್ಸೆಗಳನ್ನು ಗೊತ್ತುಪಡಿಸಿದ ಆರೋಗ್ಯ ಸಂಸ್ಥೆಗಳ ಜಾಲದ ಮೂಲಕ ನೀಡಲಾಗುವುದು.

- ಹೃದ್ರೋಗಗಳು
- ಕ್ಯಾನ್ಸರ್ ಚಿಕಿತ್ಸೆ - ಶಸ್ತ್ರಚಿಕಿತ್ಸೆ / ಕೀಮೋಥೇರಪಿ
- ನರವ್ಯಾಧಿಗಳು
- ಕಿಡ್ನಿ ಖಾಯಿಲೆಗಳು.
- ಸುಟ್ಟ ಪ್ರಕರಣ
- ಬಹು ಅಪಘಾತ ಪ್ರಕರಣಗಳು (ಪಾಲಿಟ್ರಾಮ) (ವಾಹನ ವಿಮೆ ಪ್ರಕರಣಗಳ ಹೊರತಾಗಿ),
- ನಿಯೋನ್ಯಾಟಲ್
- ಈ ಯೋಜನೆಯಡಿ ಒಳಪಡಿಸಲಾಗುವ ಇತರೆ ಚಿಕಿತ್ಸೆ ವಿವರಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

(2) **ಆಸ್ಪತ್ರೆಗಳ ಜಾಲ:** ಕಾರ್ಯಕಾರಿ ಸಮಿತಿ ಗುರುತಿಸಲ್ಪಟ್ಟ ಆಸ್ಪತ್ರೆಗಳ ಜಾಲದ ಮುಖಾಂತರ ಆರೋಗ್ಯ ಚಿಕಿತ್ಸೆ ನೀಡಲಾಗುವುದು. ಐ.ಆರ್.ಡಿ.ಎ. ನೊಂದಣಿವುಳ್ಳ ಅನುಷ್ಠಾನ ಏಜೆನ್ಸಿ ಈ ಯೋಜನೆಯನ್ನು ಕಾರ್ಯಕಾರಿ ಸಮಿತಿ ನಿಗದಿಪಡಿಸಿದ ಜವಾಬ್ದಾರಿ ರೀತಿ ಕಾರ್ಯಗತ ಮಾಡುವ ಜವಾಬ್ದಾರಿ ಹೊಂದಿರುತ್ತದೆ. ಈ ಬಗ್ಗೆ ಒಂದು ಒಪ್ಪಂದವನ್ನು ಆಸ್ಪತ್ರೆಗಳ ಜೊತೆ ಮಾಡಿಕೊಳ್ಳಲಾಗುವುದು. ಸದರಿ ಒಪ್ಪಂದಕ್ಕೆ ಸುವರ್ಣ ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುತ್ತದೆ. ಆ ಒಪ್ಪಂದದಲ್ಲಿ ಕರಾರು ಉಲಂಘನೆಗೆ ದಂಡ ಇತ್ಯಾದಿ ಉಪಬಂಧಗಳನ್ನು ಕಲ್ಪಿಸಲಾಗುವುದು.

(3) **ವ್ಯಾಪ್ತಿ:** ಬಡತನ ರೇಖೆಗಿಂತ ಕೆಳಗಿರುವ ಪ್ರತಿ ಕುಟುಂಬದ ಐವರು ಗರಿಷ್ಠ ಸದಸ್ಯರುಗಳಿಗೆ ಅಂದರೆ ಪತಿ, ಪತ್ನಿ, ಇಬ್ಬರು ಅಥವಾ ಮೂವರು ಅವಲಂಭಿತರುಗಳಿಗೆ ಸೀಮಿತಗೊಳಿಸಿದೆ. ಪ್ರಾರಂಭಿಕವಾಗಿ ಈ ಯೋಜನೆಯುನ್ನು ಗುಲ್ಬರ್ಗಾ ವಿಭಾಗದಲ್ಲಿನ ಜಿಲ್ಲೆಗಳು ಅಂದರೆ ಬೀದರ್. ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಗಳಲ್ಲಿ ಜಾರಿಗೊಳಿಸಲಾಗುವುದು. ತದನಂತರ ಹಂತಹಂತವಾಗಿ ರಾಜ್ಯಾದ್ಯಾಂತ ವಿಸ್ತರಿಸಲಾಗುವುದು.

(4) **ಫಲಾನುಭವಿಗಳ ಗುರುತಿಸುವಿಕೆ:** ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ ವರ್ಗದವರು ಬಿ.ಪಿ.ಎಲ್ ಕಾರ್ಡ್ ಹೊಂದಿರುವಂತಹವರು ಈ ಯೋಜನೆಯಡಿ ಲಾಭ ಪಡೆಯಲು ಅರ್ಹತೆಯುಳ್ಳವರಾಗಿರುತ್ತಾರೆ. ಸದರಿ ಬಿ.ಪಿ.ಎಲ್ ಕಾರ್ಡಿನಲ್ಲಿ ನಮೂದಿಸಿರುವ ಹೆಸರು / ಭಾವಚಿತ್ರದ ಪ್ರಕಾರ ಪ್ರತಿ ಕುಟುಂಬಕ್ಕೆ ಗರಿಷ್ಠ ಐದು ಜನರು ಈ ಯೋಜನೆಯ ಲಾಭವನ್ನು family floater ಆಧಾರದ ಮೇಲೆ ಪಡೆಯಬಹುದು. ಕಾಲಕ್ರಮೇಣದಲ್ಲಿ ಫಲಾನುಭವಿಗಳಿಗೆ ಈ ಯೋಜನೆಯಡಿ ಬಯೋ-ಮೆಟ್ರಕ್ ಕಾರ್ಡ್‌ಗಳನ್ನು ನೀಡಲಾಗುವುದು.

(5) **ವಿಮೆ ವಂತಿಕೆ ಮತ್ತು ವಿಮೆಯ ಅವಧಿ:** ಪ್ರತಿ ಕುಟುಂಬ ಐದು ಸದಸ್ಯರಿಗೆ ಪ್ರತಿ ವರ್ಷಕ್ಕೆ ಅಂದಾಜು ರೂ. 300 ರಂತೆ ಫಲಾನುಭವಿಗಳ ವಂತಿಕೆಯಾಗಿ ಸರ್ಕಾರವು ಆರೋಗ್ಯ ಸುವರ್ಣ ಸುರಕ್ಷಾ ಯೋಜನೆಯನ್ನು ಅನುಷ್ಠಾನಗೊಳಿಸುವ ಟ್ರಸ್ಟ್‌ಗೆ ಎರಡು ಕಂತುಗಳಲ್ಲಿ ನೇರವಾಗಿ ಪಾವತಿಸಲಿದೆ.

ಫಲಾನುಭವಿಗಳು ಯಾವುದೇ ವಂತಿಕೆ ಹಣವನ್ನು ನೀಡಬೇಕಾಗಿಲ್ಲ. ಈ ಯೋಜನೆಯಡಿ ನೀಡಲಾಗುವ ವಿಮೆ ಪಾಲಿಸಿಯು ವಿಮೆ ಪಾಲಿಸಿಯನ್ನು ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

(6) **ವಿಮೆ ಲಾಭದ ಗಂಟು (ಬೆನಿಫಿಟ್ ಪ್ಯಾಕೇಜ್):** ವಿಮೆ ಲಾಭದ ಗಂಟು ತೃತೀಯ ಹಂತದ ಈ ಯೋಜನೆಯಡಿ ಗುರುತಿಸಲ್ಪಟ್ಟ ಮಾರಣಾಂತಿಕ ಕಾಯಿಲೆಗಳ ಚಿಕಿತ್ಸೆಯನ್ನು ಪಡೆಯಲು ಒಳಗೊಂಡಿರುತ್ತದೆ. ವಾಗ್ದಾನದ ವಿಮೆ ಮೊತ್ತ ಕುಟುಂಬವೊಂದಕ್ಕೆ ವಾರ್ಷಿಕ ಗರಿಷ್ಠ ರೂ.1,50,000/-ರಂತೆ (ಫ್ಯಾಮಿಲಿ ಪ್ಲೋಟರ್ ಆಧಾರದ ಮೇಲೆ) ನಿಗಧಿಪಡಿಸಲಾಗಿದೆ. ಸದರಿ ಗರಿಷ್ಠ ಮೊತ್ತ ಮೀರಿದಲ್ಲಿ ಪ್ರತಿ ವರ್ಷ ರೂ.50,000/- ರಂತೆ ಹೆಚ್ಚುವರಿ ವಿಮೆ ಮೊತ್ತವನ್ನು ಒದಗಿಸಲಾಗುವುದು ಹಾಗೂ ಇದು ಇಡೀ ಕುಟುಂಬಕ್ಕೆ ಪ್ರಕರಣದಿಂದ ಪ್ರಕರಣಕ್ಕೆ ಅವಲಂಭಿತವಾಗಿದೆ.

(7) **ಫ್ಲೋಟರ್ ಆಧಾರದ ಮೇಲೆ ವಿಮೆ ಮೊತ್ತ:** ಈ ಯೋಜನೆಯಡಿ, ಆಸ್ಪತ್ರೆ ದಾಖಲಾತಿ, ವೈದ್ಯಕೀಯ, ಶಸ್ತ್ರಚಿಕಿತ್ಸಾ ಪ್ರೊಸಿಜರ್‌ಗಳು ಮತ್ತು ಕೀಮೋಥೆರಪಿ ಪ್ರೊಸಿಜರ್‌ಗಳಿಗೆ ತಗಲುವ ವೆಚ್ಚಕ್ಕೆ ಚಿಕಿತ್ಸೆಯನ್ನು ಫಲಾನುಭವಿಯು ಪಡೆಯಬಹುದಾಗಿದೆ. ಫಲಾನುಭವಿಯ ಕುಟುಂಬವೊಂದಕ್ಕೆ ವಾರ್ಷಿಕ ಗರಿಷ್ಠ ರೂ.1,50,000/-ರಂತೆ (ಫ್ಯಾಮಿಲಿ ಪ್ಲೋಟರ್ ಆಧಾರದ ಮೇಲೆ) ಹಾಗೂ ಸದರಿ ಗರಿಷ್ಠ ಮೊತ್ತವು ಮೀರಿದಲ್ಲಿ ಪ್ರತಿ ವರ್ಷ ರೂ.50,000/- ರಂತೆ ಹೆಚ್ಚುವರಿ ಮೊತ್ತಕ್ಕೆ ಸಮನಾಗಿ (ಅಂದರೆ ಇಡೀ ಕುಟುಂಬಕ್ಕೆ ಪ್ರಕರಣದಿಂದ ಪ್ರಕರಣಕ್ಕೆ ಅವಲಂಭಿಸಿದೆ) ಜಾಲದ ಆಸ್ಪತ್ರೆ ಮೂಲಕ ಚಿಕಿತ್ಸೆ ಪಡೆಯಬಹುದಾಗಿದೆ. ಫ್ಯಾಮಿಲಿ ಫ್ಲೋಟರ್ ಆಧಾರದ ಮೇಲೆ ದೊರಕುವ ಸದರಿ ಸೌಲಭ್ಯವನ್ನು ಅಂದರೆ ಒಟ್ಟಾರೆ ರೂ.1,50,000/- ಮೊತ್ತಕ್ಕೆ ಸಮನಾಗಿ ಕುಟುಂಬದ ಒಬ್ಬ ಸದಸ್ಯ ಅಥವಾ ಕುಟುಂಬದ ಸದಸ್ಯರು ಒಟ್ಟಾರೆಯಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

(8) **ನಗದು ರಹಿತ ವ್ಯವಹಾರ:** ಈ ಯೋಜನೆಯಡಿ ಆಸ್ಪತ್ರೆಯಲ್ಲಿ ದಾಖಲಾಗುವ ರೋಗಿಯ ಚಿಕಿತ್ಸೆಗೆ ಸಂಬಂಧಪಟ್ಟಂತೆ ವ್ಯವಹಾರವು ಸಂಪೂರ್ಣವಾಗಿ ನಗದುರಹಿತವಾಗಿರುತ್ತದೆ. ಅಂದರೆ ಒಬ್ಬ ಫಲಾನುಭವಿಯು ಗುರುತಿಸಲ್ಪಟ್ಟ ಜಾಲದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿ ಸೇರಿದಂದಿನಿಂದ ಚಿಕಿತ್ಸೆ ಪಡೆದು ಹೊರ ಬರುವ ತನಕವು ಯಾವುದೇ ಹಣವನ್ನು ಪಾವತಿಸಬೇಕಾಗಿಲ್ಲ.

(9) **ಪಾಲಿಸಿ ಪೂರ್ವ ಇದ್ದಂತಹ ಖಾಯಿಲೆಗಳ ಕುರಿತು:** ಒಬ್ಬ ಪಾಲಿಸಿದಾರನು ಯಾವುದೇ ಗುರುತಿಸಲ್ಪಟ್ಟ ಖಾಯಿಲೆಯಿಂದ ಪಾಲಿಸಿ ಪಡೆಯು ಪೂರ್ವ-ನಿಗದಿತವಾಗಿ ನರಳುತ್ತಿದ್ದಲ್ಲಿ ಆ ಖಾಯಿಲೆಗಳಿಗೂ ಸಹ ಈ ಯೋಜನೆಯು ಅನ್ವಯಿಸುತ್ತದೆ.

(10) **ಆಸ್ಪತ್ರೆಗೆ ದಾಖಲಾದ ಮತ್ತು ನಂತರದ ಚಿಕಿತ್ಸಾ ಅವಧಿ:** ಫಲಾನುಭವಿಯು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದ ದಿನಾಂಕದಿಂದ ಹಾಗೂ ಆಸ್ಪತ್ರೆಯಿಂದ ಬಿಡುಗಡೆಯಾದ ಹತ್ತು ದಿನಗಳೊಳಗೆ ಯಾವುದೇ ಚಿಕಿತ್ಸಾ ನಂತರದ ತೊಂದರೆಗೊಳಗಾದಲ್ಲಿ ನಗದುರಹಿತವಾಗಿ ಈ ಯೋಜನೆಯಡಿ ಒದಗಿಸಿರುವ ಪ್ಯಾಕೇಜಿನ ಅನ್ವಯ ಪೂರ್ಣ ಮೊಬಲಿಗೆ ಚಿಕಿತ್ಸೆಯನ್ನು ಪಡೆಯಲು ಅರ್ಹರಿರುತ್ತಾನೆ.

(11) **ಈ ಯೋಜನೆಯಡಿ ಆಸ್ಪತ್ರೆಗಳನ್ನು ನೊಂದಾಯಿಸುವುದು:** ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳು (ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ / ಖಾಸಗಿ ವೈದ್ಯಕೀಯ ಕಾಲೇಜುಗಳು) ಮತ್ತು ಗುರುತಿಸಲ್ಪಟ್ಟ ಖಾಸಗಿ ಆಸ್ಪತ್ರೆಗಳು / ನರ್ಸಿಂಗ್ ಹೋಂಗಳನ್ನು ಪ್ರತ್ಯೇಕವಾಗಿ ಈ ಯೋಜನೆಯಡಿ ಸುವರ್ಣ ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿ ಪಟ್ಟಿ ಮಾಡುವುದು. ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು ಎಂದರೆ ಕನಿಷ್ಠ ಮಾನದಂಡಗಳನ್ನು ಹೊಂದಿರುವಂತಹ ಕರ್ನಾಟಕದಲ್ಲಿ ಒಳರೋಗಿ ಶಸ್ತ್ರಚಿಕಿತ್ಸೆಗಾಗಿ ಸ್ಥಾಪಿಸಲ್ಪಟ್ಟ ಯಾವುದೇ ಸಂಸ್ಥೆ ಮತ್ತು ಜಾಲದ ಆಸ್ಪತ್ರೆ ಆಗಿರುತ್ತದೆ. ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗಳಾದ ನರರೋಗ, ಹೃದಯ, ಕ್ಯಾನ್ಸರ್ (ಶಸ್ತ್ರಚಿಕಿತ್ಸೆ, ಕಿಮೋಥೆರಪಿ, ರೇಡಿಯೋಥೆರಪಿ), ಮೂತ್ರಪಿಂಡ ತೊಂದರೆ, ಸುಟ್ಟ ಗಾಯಗಳು ಮತ್ತು ಮೋಟಾರು ವಾಹನ ಅಧಿನಿಯಮದಡಿ ಒಳಗೊಳ್ಳದ ಪಾಲಿ-ಟ್ರಾಮ, ಚಿಕಿತ್ಸೆ ನೀಡಲು ಆಸ್ಪತ್ರೆಗಳು ನಿಗದಿತ ಮೂಲಸೌಲಭ್ಯ ಹಾಗೂ ತಜ್ಞ ವೈದ್ಯರನ್ನು ಹೊಂದಿರಬೇಕು ಹಾಗೂ ಸದರಿ ಆಸ್ಪತ್ರೆಗಳು ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಈ ಯೋಜನೆಯಡಿ ನಿಗದಿಪಡಿಸಿರುವ ಸೌಲಭ್ಯಗಳನ್ನು ಒದಗಿಸುವಂತಿರಬೇಕು.

(12) **ಯೋಜನೆ ಜಾರಿಗೊಳಿಸುವ ಏಜೆನ್ಸಿಗಳ ಜೊತೆ ಒಪ್ಪಂದ:** ಆರೋಗ್ಯ ಸುವರ್ಣ ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿ ಆರೋಗ್ಯ ವಿಮೆ ಯೋಜನೆಯನ್ನು ಜಾರಿಗೊಳಿಸಲು ಒಂದು ಅನುಷ್ಠಾನ ಏಜೆನ್ಸಿ ಜೊತೆ ಒಪ್ಪಂದ ಮಾಡಿಕೊಳ್ಳುತ್ತದೆ. ಸದರಿ ಏಜೆನ್ಸಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ಅದರಡಿ ರಚಿಸಲಾಗಿರುವ ನಿಯಮಗಳನ್ನು ಅನುಸರಿಸಿ ಸುವರ್ಣ

ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿ ಆಯ್ಕೆ ಮಾಡುತ್ತದೆ ಹಾಗೂ ಆ ಏಜೆನ್ಸಿ ಐ.ಆರ್.ಡಿ.ಎ. ನೊಂದಣಿ ಹೊಂದಿರುವುದು ಅವಶ್ಯಕ. ಈ ಏಜೆನ್ಸಿ ಜೊತೆ ನಿರ್ದಿಷ್ಟವಾಗಿ ಒಪ್ಪಂದ ಮಾಡಿಕೊಳ್ಳುವಂತಹ ಚಟುವಟಿಕೆಗಳು ಅಂದರೆ, ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳು, ಆಸ್ಪತ್ರೆಗಳ ಜಾಲ ಮತ್ತು ಸೇವೆ ಒದಗಿಸುವವರನ್ನು ಗುರುತಿಸುವುದು, ಹಣ ಪಾವತಿಸುವಿಕೆ ಕುರಿತ ರೂಪುರೇಷೆಗಳ ತಯಾರಿಕೆ, ಆರೋಗ್ಯ ಮಿತ್ರದಲ್ಲಿರುವಂತೆ ರೋಗಿಗಳ ನೆರವಿಗಾಗಿ ವಿಮೆ, ಸಮನ್ವಯಾಧಿಕಾರಿಗಳ ತರಬೇತಿ ಮತ್ತು ಸ್ಥಳನಿಯುಕ್ತಿ, ಆರೋಗ್ಯ ಮೇಳಗಳನ್ನು ನಡೆಸುವುದು, ಕಾಲ್ ಸೆಂಟರ್‌ಗಳ ಸ್ಥಾಪನೆ ಮತ್ತು ಸ್ವೀಕೃತ ಕ್ಲೈಮ್‌ಗಳ ಪಾವತಿ ಕುರಿತಂತೆ ನಿರ್ವಹಣೆ ಹಾಗೂ ಸೇವೆ ನೀಡುವವರ ಮೇಲ್ವಿಚಾರಣೆ ಇತ್ಯಾದಿ ಒಳಗೊಂಡಿರುತ್ತದೆ. ಸದರಿ ಅನುಷ್ಠಾನ ಏಜೆನ್ಸಿ ನಿರ್ವಹಿಸಬೇಕಾದ ವಿವರಗಳನ್ನು ಒಪ್ಪಂದದಲ್ಲಿ ನಮೂದಿಸಲಾಗುವುದು. ಆದರೆ, ಫಲಾನುಭವಿಗಳ ನೊಂದಣಿ ಮತ್ತು ವಿಮೆ ಮಾರ್ಪಾಡು (Insurance underwriting) ಈ ಚಟುವಟಿಕೆಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿ ನಿರ್ವಹಿಸುತ್ತದೆ ಹಾಗೂ ಈ ಕಾರ್ಯವನ್ನು ಯಾವುದೇ ಕಾರಣಕ್ಕೂ ಅನುಷ್ಠಾನ ಏಜೆನ್ಸಿ ನಿರ್ವಹಿಸುವಂತಿಲ್ಲ. ಅನುಷ್ಠಾನ ಏಜೆನ್ಸಿ ಕುರಿತ ಒಪ್ಪಂದವನ್ನು ಆರ್ಥಿಕ ಇಲಾಖೆಯ ಸಮಾಲೋಚನೆಯೊಡನೆ ಅಂತಿಮಗೊಳಿಸಲಾಗುವುದು.

(13) **ಕ್ಲೈಮುಗಳ ಇತ್ಯರ್ಥಪಡಿಸುವಿಕೆ:** ಆಸ್ಪತ್ರೆಗಳ ಕ್ಲೈಮುಗಳನ್ನು ಅನುಷ್ಠಾನ ಏಜೆನ್ಸಿಯು ಪರಿಶೀಲಿಸಿ ಸಲ್ಲಿಸಿದ ನಂತರ ಸುವರ್ಣ ಆರೋಗ್ಯ ಸುರಕ್ಷಾ ಕಾರ್ಯಕಾರಿ ಸಮಿತಿಯು ಸಮೀಕ್ಷಿಸಿ ಏಳು ದಿನಗಳ ಒಳಗೆ ಇತ್ಯರ್ಥಪಡಿಸಲಿದೆ.

(14) **ಆರೋಗ್ಯ ಮೇಳಗಳು:** ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಜಾಲ ಆಸ್ಪತ್ರೆಗಳು ಕನಿಷ್ಠ ನಿಗದಿತ ಸಂಖ್ಯೆಯ ಆರೋಗ್ಯ ಮೇಳಗಳನ್ನು ಪ್ರತಿ ವರ್ಷ ನಡೆಸಲೇಬೇಕು. ಕಾರ್ಯಕಾರಿ ಸಮಿತಿ ಸಲಹೆ ಮಾಡುವಂತೆ ನಿಗದಿತ ಸ್ಥಳಗಳಲ್ಲಿ, ನಿಯತಕಾಲಿಕೆಯಲ್ಲಿ, ಹಾಗೂ ಅವಶ್ಯಕ ಸಲಕರಣೆಗಳು, ತಜ್ಞರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯೊಂದಿಗೆ ಜಾಲ ಆಸ್ಪತ್ರೆಗಳು ಆರೋಗ್ಯ ಮೇಳಗಳನ್ನು ನಡೆಸುವುದು. ಅವರುಗಳು ಜಿಲ್ಲಾ ಸಮನ್ವಯಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಜೊತೆ ಸಮನ್ವಯ ಮಾಡಿ ಹಾಗೂ ಜಿಲ್ಲಾ ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಸಮಾಲೋಚಿಸಿ ಈ ಬಗ್ಗೆ ಕಾರ್ಯನಿರ್ವಹಿಸಬೇಕು.

(15) **ವೈದ್ಯಕೀಯ ಲೆಕ್ಕಪರಿಶೋಧಕರ ನೇಮಕ:** ಅನುಷ್ಠಾನ ಏಜೆನ್ಸಿಯು ಪ್ರಿ-ಆಥರೈಸೇಷನ್ ಸಲುವಾಗಿ ಸಾಕಷ್ಟು ಸಂಖ್ಯೆಯ ವೈದ್ಯಾಧಿಕಾರಿಗಳನ್ನು ಸ್ಥಾನಿಕರಿಸಬೇಕು ಹಾಗೂ ಆಸ್ಪತ್ರೆಗಳ ನಿಯತಕಾಲಿಕ ತಪಾಸಣೆ, ಫಲಾನುಭವಿಗಳಿಂದ ಅಥವ ಆರೋಗ್ಯ ಮಿತ್ರಗಳ ಮೂಲಕ ಸ್ವೀಕರಿಸುವ ದೂರುಗಳು, ಆಸ್ಪತ್ರೆಗಳ ಸೇವೆಯಲ್ಲಿ ಕೊರತೆ ಇತ್ಯಾದಿಗಳನ್ನು ನೋಡಿಕೊಳ್ಳಲು ಮತ್ತು ರೋಗಿಗಳಿಗೆ ಅಗತ್ಯವಿರುವ ಸಲಹೆಯನ್ನು ನೀಡಿ ಜಾಲ ಆಸ್ಪತ್ರೆ ಹಾಗೂ ಆರೋಗ್ಯ ಮಿತ್ರಗಳ ನಡುವೆ ಸಮನ್ವಯ ಮಾಡಲು ತಜ್ಞವೈದ್ಯರನ್ನು ಸಹ ನೇಮಿಸಬೇಕು.

(16) **ಸಾರ್ವಜನಿಕ ದೂರು ನಿವಾರಣೆ ಕೋಶ:** ಸಾರ್ವಜನಿಕರಿಂದ ಸ್ವೀಕರಿಸಲ್ಪಡುವ ದೂರು / ಸಲಹೆ ಮತ್ತು ಅಹವಾಲುಗಳನ್ನು ಇತ್ಯರ್ಥಪಡಿಸಲು ಸುವರ್ಣ ಆರೋಗ್ಯ ಕಾರ್ಯಕಾರಿ ಸಮಿತಿ ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಸಾರ್ವಜನಿಕ ದೂರು ನಿವಾರಣೆ ಕೋಶಗಳನ್ನು ಸ್ಥಾಪಿಸಲಿದೆ.

7. ಯಶಸ್ವಿನಿ ಮತ್ತು ರಾಷ್ಟ್ರೀಯ ಸ್ವಸ್ಥ ಭೀಮಾ ಯೋಜನೆಗಳನ್ನು ಜಾರಿಗೊಳಿಸುತ್ತಿರುವ ಏಜೆನ್ಸಿಗಳು ಆರೋಗ್ಯ ಸುರಕ್ಷಾ ಯೋಜನೆಯಡಿಯ ಫಲಾನುಭವಿಗಳನ್ನು ತಮ್ಮ ಯೋಜನೆಗಳಡಿ ಒಳಪಡಿಸಬಾರದು.

8. ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯನ್ನು ಜಿಲ್ಲಾ ಮಟ್ಟಗಳಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕುರಿತು ಅವಶ್ಯಕ ಮೇಲ್ವಿಚಾರಣೆ ಮಾಡಲು ಜಿಲ್ಲಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಸಮಿತಿ ರಚಿಸಲಾಗಿದೆ:

1. ಜಿಲ್ಲಾ ಜಿಲ್ಲಾಧಿಕಾರಿ	ಅಧ್ಯಕ್ಷರು
2. ಮುಖ್ಯ ಕಾರ್ಯನಿರ್ವಹಣಾಧಿಕಾರಿ	ಸದಸ್ಯರು
3. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ	ಸದಸ್ಯ-ಕಾರ್ಯದರ್ಶಿ
4. ಜಿಲ್ಲಾ ಸರ್ಜನ್	ಸದಸ್ಯರು
5. ಒಬ್ಬರು ಸ್ಥಳೀಯ ಹಿರಿಯ ತಜ್ಞವೈದ್ಯರು (ಜಿಲ್ಲಾಧಿಕಾರಿಯವರು ನಾಮನಿರ್ದೇಶಿಸುವ)	ಸದಸ್ಯರು

ಸದರಿ ಜಿಲ್ಲಾ ಸಮಿತಿಯು ಅನುಷ್ಠಾನ ಏಜೆನ್ಸಿ ಹಾಗೂ ಜಾಲ ಆಸ್ಪತ್ರೆಗಳ ನಡುವ ಸೂಕ್ತ ಸಮನ್ವಯ ಮಾಡಿ ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು ಹಾಗೂ ನಿಯತಕಾಲಿಕವಾಗಿ ಪ್ರಗತಿ ಪರಿಶೀಲನಾ ವರದಿಯನ್ನು ಕಳುಹಿಸಬೇಕು.

9. ಸುವರ್ಣ ಸುರಕ್ಷಾ ಟ್ರಸ್ಟ್‌ಗೆ ಕಾರ್ಯನಿರ್ವಹಣೆ ಬಂಡವಾಳವಾಗಿ ರೂ.20 ಕೋಟಿಗಳನ್ನು (ಇಪ್ಪತ್ತು ಕೋಟಿ ರೂಪಾಯಿಗಳು ಮಾತ್ರ) ಅನ್ನು ಬಿಡುಗಡೆ ಮಾಡಲು ಹಾಗೂ ಪ್ರಸಕ್ತ ಸಾಲಿನಲ್ಲಿ ರೂ 10 ಕೋಟಿಗಳನ್ನು (ಹತ್ತು ಕೋಟಿ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಸಂಬಂಧ ತಗಲುವ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಸಂಖ್ಯೆ ಸುವರ್ಣ ಸುರಕ್ಷಾ (ಆಪತ್‌ಬಾಂಧವ) 2210-06-800-0-15 ಯೋಜನೆ ರಡಿ ಒದಗಿಸಿರುವ ರೂ.25.25 ಕೋಟಿಗಳ ಪೈಕಿ ಭರಿಸುವುದು.

10. ಈ ಆದೇಶವನ್ನು ಯೋಜನಾ ಮತ್ತು ಆರ್ಥಿಕ ಇಲಾಖೆಗಳ ಸಹಮತಿಯನ್ನು ಕ್ರಮವಾಗಿ ಅ.ಟಿ.ಸಂಖ್ಯೆ: ಪಿಡಿ 90 ಎಂಇ 2008 ದಿನಾಂಕ 7-9-2008 ಆಇ 2219 ವೆಚ್ಚ-5/2008 ದಿನಾಂಕ 26-12-2008 ರಲ್ಲಿ ಪಡೆದು ಹಾಗೂ ಸಚಿವ ಸಂಪುಟದ ಅನುಮೋದನೆಯನ್ನು ವಿಷಯ ಸಂಖ್ಯೆ:ಸಿ/119/2009 ದಿನಾಂಕ 18-2-2009 ರಂದು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 762

ಎಂ. ಮದನ ಗೋಪಾಲ್

ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಶ್ರೀ ಬಿ.ಸಿ. ಮುದೋಳ್, ನಿವೃತ್ತ ಮುಖ್ಯ ಇಂಜಿನಿಯರ್, ಅವರ ವಿರುದ್ಧ ಇಲಾಖೆ ವಿಚಾರಣಾ ಮಂಡನಾಧಿಕಾರಿ ನೇಮಕ ಕುರಿತು.

ಓದಲಾಗಿದೆ:1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್‌ಇಎನ್ 05, ದಿನಾಂಕ:08.06.2007.

2) ಸರ್ಕಾರದ ಆದೇಶ ಸಂಖ್ಯೆ: 51 ಎಸ್‌ಇಎನ್ 05, ದಿನಾಂಕ:22.09.2008.

3) ಶ್ರೀ ಎಸ್.ಪಿ. ಪಾಲಯ್ಯ, ನಿಬಂಧಕರು ಇವರ ಮನವಿ ದಿನಾಂಕ:02.12.2008.

ಪ್ರಸ್ತಾವನೆ:

ಶ್ರೀ ಬಿ.ಸಿ. ಮುದೋಳ್, ನಿವೃತ್ತ ಮುಖ್ಯ ಇಂಜಿನಿಯರ್, ಅವರು ಬಾಗಲಕೋಟೆ ನಗರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಪ್ರಾಧಿಕಾರದ ವ್ಯಾಪ್ತಿಯಲ್ಲಿ 300 ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸದೇ ತಮಗೆ ಬೇಕಾದ ಕಂಟ್ರಾಕ್ಟರುಗಳಿಗೆ ನೀಡಿ, ಅವುಗಳು ಪೂರ್ಣಗೊಳ್ಳದೆ ಅರ್ಧಕ್ಕೆ ನಿಂತಿದ್ದರೂ ಸಹ ಅವುಗಳ ಗುಣಮಟ್ಟ ಅರಿಯದೇ ಪೂರ್ಣ ಹಣವನ್ನು ಪಾವತಿ ಮಾಡಿದ್ದು, ಅಲಮ್ ಕೂರಿನ್ ಮತ್ತು ಪ್ರಾಧಿಕಾರಕ್ಕೆ ಅವಶ್ಯಕತೆಗಿಂತ ಹೆಚ್ಚಾಗಿ ವಾಟರ್ ಮೀಟರ್ ಖರೀದಿಯಲ್ಲಿ ಅವ್ಯವಹಾರ ಎಸಗಿ ಪಾರದರ್ಶಕತೆ ಕಾಯಿದೆಗಳನ್ನು ಪಾಲಿಸದೆ ಸರ್ಕಾರದ ಹಣವನ್ನು ದುರುಪಯೋಗಪಡಿಸಿರುವ ಆರೋಪಿಗಳಿಗಾಗಿ ಶ್ರೀ ಬಿ.ಸಿ. ಮುದೋಳ್ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11, 11-ಎ, ರನ್ವಯ ಇಲಾಖಾ ವಿಚಾರಣೆ ಜರುಗಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ:08.06.2007ರ ಸರ್ಕಾರದ ಆದೇಶದಲ್ಲಿ ಶ್ರೀ ಬಿ. ರಂಗಸ್ವಾಮಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಮತ್ತು ಶ್ರೀಮತಿ ಹೇಮಲತಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ ಕ್ರಮಸಂಖ್ಯ (2)ರ ಆದೇಶದಲ್ಲಿ ಶ್ರೀಮತಿ ಹೇಮಲತಾ ಇವರು ಮನವಿ ಸಲ್ಲಿಸಿ, ಮಂಡನಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲವಾದ ಕಾರಣ ಈ ಪ್ರಕರಣದ ಮಂಡನಾಧಿಕಾರಿ ಜವಾಬ್ದಾರಿಯಿಂದ ಬಿಡುಗಡೆಗೊಳಿಸುವಂತೆ ಕೋರಿರುವ ಹಿನ್ನಲೆಯಲ್ಲಿ ದಿನಾಂಕ:22.09.2008ರಂದು ಶ್ರೀ ಪಾಲಯ್ಯ, ನಿಬಂಧಕರು, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ನಂತರ ಓದಲಾದ ಕ್ರಮಸಂಖ್ಯೆ (3)ರಲ್ಲಿ ಶ್ರೀ ಪಾಲಯ್ಯ ಇವರು ದಿನಾಂಕ:02.12.2008ರಂದು ಮನವಿ ಸಲ್ಲಿಸಿ ಅತಿಯಾದ ಕೆಲಸದ ಒತ್ತಡದಿಂದಾಗಿ ಸದರಿ ಪ್ರಕರಣದಲ್ಲಿ ಮಂಡನಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ, ಮಂಡನಾಧಿಕಾರಿಯಾಗಿ ತಾಂತ್ರಿಕವಾಗಿ ಸಮರ್ಥರಿರುವ ಅಧಿಕಾರಿಯನ್ನು ನೇಮಕ ಮಾಡಿಕೊಳ್ಳುವಂತೆ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್‌ಇಎನ್ 2005, ಬೆಂಗಳೂರು, ದಿನಾಂಕ:27ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್‌ಇಎನ್ 2005, ದಿನಾಂಕ:22.09.2008ನ್ನು ಭಾಗಶಃ ಮಾರ್ಪಡಿಸಿ, ಶ್ರೀ ಪಾಲಯ್ಯ, ನಿಬಂಧಕರು ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು, ಇವರ ಸ್ಥಾನದಲ್ಲಿ ಶ್ರೀ ಕೆ.ಆರ್. ಶ್ರೀನಿವಾಸ್ ರಂಗನ್, ಕಾರ್ಯಪಾಲಕ ಇಂಜಿನಿಯರ್,

ಕೃಷ್ಣಾ ಗೋದಾವರಿ ಘಟಕ ಅಂತರ ರಾಜ್ಯ ಜಲ, ಜಲಸಂಪನ್ಮೂಲ ಸಂಸ್ಥೆ, ಬೆಂಗಳೂರು ಇವರನ್ನು ಈ ಪ್ರಕರಣದಲ್ಲಿ ಮಂಡನಾಧಿಕಾರಿಯನ್ನಾಗಿ ಕರ್ನಾಟಕ ನಾಗರೀಕ ಸೇವಾ (ಮೇಲ್ಮನವಿ, ವರ್ಗೀಕರಣ ಮತ್ತು ನಿಯಂತ್ರಣ) ನಿಯಮ 11(15)(ಸಿ) ಅನ್ವಯ ನೇಮಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್.796

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಮುಖ್ಯ ಮಂತ್ರಿಗಳು/ ಸಚಿವರ ಕಛೇರಿಗಳಿಗೆ ಅಳವಡಿಸಲು ಹೊಸ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿರುವ ವೆಚ್ಚ ಪಾವತಿ ಮಾಡುವ ಬಗ್ಗೆ.

ಓದಲಾಗಿದೆ:

1) ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಗಳ ಟಿಪ್ಪಣಿ ಸಂಖ್ಯೆ: ತೋಬಂಸ/30/ವಿಕ/2008, ದಿನಾಂಕ:16.09.2008.
2) ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳ ಟಿಪ್ಪಣಿ ಸಂಖ್ಯೆ:ವಿಕ:501/2008, ದಿನಾಂಕ:10.10.2008.
3) ಮುಖ್ಯ ಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ–3 ರವರ ಟಿಪ್ಪಣಿ ಸಂಖ್ಯೆ: ಸಿಎ–210/ಓಎಸ್‌ಡಿ/2008 ದಿನಾಂಕ:06.10.2008.
4) ಮುಖ್ಯ ಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಸಿಎಂ–123/ಓಎಸ್‌ಡಿ/2008 ದಿನಾಂಕ:22.11.2008.
5) ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ:ಮುಮವಿಕ/ ಕಛೇರಿ/2008–09/2 ದಿನಾಂಕ:12.11.2008.
6) ಮುಖ್ಯ ಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯವರ ಟಿಪ್ಪಣಿ ಸಂಖ್ಯೆ: ಮುಮವಿಕ 673/08 ದಿನಾಂಕ:15.11.2008.
7) ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 467 ಡಿಟಿಎನ್ 2008 ದಿನಾಂಕ:09.01.2009.
8) ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 467 ಡಿಟಿಎನ್ 2008 ದಿನಾಂಕ:12.02.2009.
9) ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್ ಸಂಸ್ಥೆಯ ಬಿಲ್ ಸಂಖ್ಯೆ:617 ದಿನಾಂಕ:18.02.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1) ರಿಂದ (6) ರಲ್ಲಿನ ಟಿಪ್ಪಣಿಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಸಚಿವಾಲಯದ ಅಧಿಕಾರಿಗಳು ಮತ್ತು ತೋಟಗಾರಿಕೆ ಸಚಿವರ ಕಛೇರಿಗಳಿಗೆ ಹೊಸ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕೋರಿಕೆ ಸಲ್ಲಿಸಿದ್ದರು. ಮುಖ್ಯ ಮಂತ್ರಿಗಳು ಮತ್ತು ಸಚಿವರ ಕಛೇರಿಗಳಿಗೆ ಅಳವಡಿಸಲು ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ–983 ಮಾದರಿಯ ಆರು ಫ್ಯಾಕ್ಸ್ ಯಂತ್ರಗಳನ್ನು ಖರೀದಿಸುವ ಸಂಬಂಧ ಮೇಲೆ ಓದಲಾದ ಕ್ರಮಸಂಖ್ಯೆ (7) ರಲ್ಲಿನ ಪತ್ರದಲ್ಲಿ ಏಳು ಸಂಸ್ಥೆಗಳಿಂದ ದರ ಪಟ್ಟಿಯನ್ನು ಕರೆಯಲಾಗಿತ್ತು. ಈ ಸಂಬಂಧ ಐದು ಸಂಸ್ಥೆಗಳು ಮಾತ್ರ ದರಪಟ್ಟಿ ಸಲ್ಲಿಸಿದ್ದು, ಅವುಗಳಲ್ಲಿ ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್, ಬೆಂಗಳೂರು ಸಂಸ್ಥೆಯು ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ–983 ಮಾದರಿಯ ಫ್ಯಾಕ್ಸ್ ಉಪಕರಣವೊಂದಕ್ಕೆ ಅತಿ ಕಡಿಮೆ ದರ ಅಂದರೆ ರೂ.9,360.00 (ತೆರಿಗೆ ಸೇರಿ) ಮೊತ್ತವನ್ನು ನಮೂದಿಸಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮಸಂಖ್ಯೆ (8) ರ ಪತ್ರದಲ್ಲಿ ಒಟ್ಟು 06 (ಆರು) ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ–983 ಮಾದರಿಯ ಫ್ಯಾಕ್ಸ್ ಯಂತ್ರಗಳನ್ನು ಒಟ್ಟು ರೂ.56,160.00 (ತೆರಿಗೆ ಸೇರಿ) ವೆಚ್ಚದಲ್ಲಿ ಖರೀದಿಸಿ ಒದಗಿಸುವಂತೆ ಕೋರಲಾಗಿತ್ತು. ಅದರಂತೆ ಈ ಸಂಸ್ಥೆಯು ಒಟ್ಟು 06 ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸಿದ್ದು ಮೇಲೆ ಕ್ರಮ ಸಂಖ್ಯೆ (9) ರಲ್ಲಿನ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 467 ಡಿಟಿಎನ್ 2008, ಬೆಂಗಳೂರು ದಿನಾಂಕ:4ನೇ ಮಾರ್ಚ್, 2009

ಪ್ರಸ್ತಾವನೆಯಲ್ಲಿನ ವಿವರಣೆಯನ್ವಯ ಮುಖ್ಯ ಮಂತ್ರಿಯವರ ಸಚಿವಾಲಯದ ಕಛೇರಿಗಳಿಗೆ ಮತ್ತು ಸಚಿವರ ಕಛೇರಿಗಳಿಗೆ ಒಟ್ಟು 06 (ಆರು) ಹೊಸ ಪ್ಯಾನಾಸೋನಿಕ್ ಕೆಎಕ್ಸ್ ಎಫ್‌ಟಿ–983 ಮಾದರಿಯ ಫ್ಯಾಕ್ಸ್ ಯಂತ್ರಗಳನ್ನು ಖರೀದಿಸಿ ಅಳವಡಿಸಿರುವ ವೆಚ್ಚ ಒಟ್ಟು ರೂ. ಒಟ್ಟು ರೂ.56,160.00 (ರೂ. ಐವತ್ತಾರು ಸಾವಿರದ ಒಂದು ನೂರ ಅರವತ್ತು ಮಾತ್ರ) (ತೆರಿಗೆ ಸೇರಿ) ಗಳನ್ನು ಮೆ: ಅಭಿಷೇಕ್ ಬಿಸಿನೆಸ್ ಸೆಲ್ಯೂಷನ್, ನಂ.31/1, 2ನೇ ಅಡ್ಡರಸ್ತೆ, ಸಿ.ಕೆ.ಸಿ. ಗಾರ್ಡನ್, ಲಾಲ್‌ಬಾಗ್ ರಸ್ತೆ, ಬೆಂಗಳೂರು ಸಂಸ್ಥೆಗೆ ಪಾವತಿ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ "2013-ಮಂತ್ರಿಮಂಡಲ-800-ಇತರೆ ವೆಚ್ಚಗಳು-051-ಸಾಮಾನ್ಯ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10.07.1996 ರಲ್ಲಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ಮಂಜುನಾಥ್

ಪಿ.ಆರ್.797

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಶ್ರೀ ಜಿ.ವಿ. ನಾಯಕ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅವರ ವಿರುದ್ಧ ಇಲಾಖಾ ವಿಚಾರಣೆ-ಮರು ವಿಚಾರಣೆಗೆ ಪ್ರಕರಣವನ್ನು ವಿಚಾರಣಾಧಿಕಾರಿಗಳಿಗೆ ವಹಿಸುವ ಬಗ್ಗೆ.

ಓದಲಾಗಿದೆ:1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಎಸ್‌ಇಎನ್ 2004, ದಿನಾಂಕ:25.11.2005.

2) ವಿಚಾರಣಾ ವರದಿ ಸಂಖ್ಯೆ: 7/2005, ದಿನಾಂಕ:02.05.2006.

ಪ್ರಸ್ತಾವನೆ:

ಶ್ರೀ ಜಿ.ವಿ. ನಾಯಕ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಅವರು 1998-99ರ ಅವಧಿಯಲ್ಲಿ ಬೆಳಗಾವಿಯಲ್ಲಿ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ, 1998-99ನೇ ಸಾಲಿನ ವಿಶೇಷ ಶಿಕ್ಷಕರುಗಳ ನೇಮಕಾತಿಗಾಗಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಯಾದ ನಂತರ ಪಟ್ಟಿಯಲ್ಲಿ ಆಯ್ಕೆಯಾಗದ 5 ಮಂದಿ ಅಭ್ಯರ್ಥಿಗಳಿಂದ ಮೂಲ ಅರ್ಜಿಯೊಡನೆ ಸಲ್ಲಿಸದಿದ್ದ ಅಂಕ ಪಟ್ಟಿ ಹಾಗೂ ಮೀಸಲಾತಿ ಪ್ರಮಾಣ ಪತ್ರಗಳನ್ನು ಪಡೆದು ನಿಯಮಗಳಿಗೆ ವಿರುದ್ಧವಾಗಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ನೇಮಕ ಮಾಡಿದ; ನಿಗದಿ ಪಡಿಸಿದ ವಿಶ್ವವಿದ್ಯಾಲಯಗಳ ಪದವಿಯನ್ನು ಹೊಂದದಿರುವ ಇಬ್ಬರು ಅಭ್ಯರ್ಥಿಗಳನ್ನು ಮೀಸಲಾತಿ ಗುಂಪಿನಲ್ಲಿ ಸಂಗೀತ ಶಿಕ್ಷಕರನ್ನಾಗಿ ನೇಮಕ ಮಾಡಿದ; ವಿಶೇಷ ಶಿಕ್ಷಕರುಗಳಾಗಿ ನೇಮಕಾತಿ ಆಗದ 6 ಮಂದಿ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಈಗಾಗಲೇ ನೀಡಲಾಗಿದ್ದ ಸ್ಥಳ ನಿಯುಕ್ತಿ ಆದೇಶವನ್ನು ಬೇಕಾಬಿಟ್ಟಿ ಮಾರ್ಪಾಡು ಮಾಡಿದ 3 ಆರೋಪಗಳಿಗಾಗಿ ಅವರ ವಿರುದ್ಧ ಮೇಲೆ (1)ರಲ್ಲಿ ಓದಲಾದ ದಿನಾಂಕ:25.11.2005ರ ಸರ್ಕಾರಿ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಆದೇಶಿಸಿ ಶ್ರೀ ಎಂ.ವಿ. ಶೀಲವಂತ್, ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಯಿತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ:02.05.2006ರ ವಿಚಾರಣಾ ವರದಿಯನ್ನು ಸಲ್ಲಿಸಿದ್ದಾರೆ. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ 3 ಆರೋಪಗಳು ಸಾಭೀತಾಗಿರುವುದಿಲ್ಲ, ಸದರಿ ವರದಿಯನ್ನು ಪರಿಶೀಲಿಸಲಾಗಿದೆ.

ವಿಚಾರಣಾಧಿಕಾರಿಗಳು 1ನೇ ಆರೋಪದ ಬಗ್ಗೆ ವಿಶ್ಲೇಷಿಸುತ್ತಾ ನೇಮಕಾತಿ ವಿಭಾಗದ ಆಕ್ಷೇಪಣಾ ರಿಜಿಸ್ಟರ್‌ನ ನಿಶಾನೆ ಡಿ-4 ರಿಂದ 7ರವರೆಗಿನವುಗಳನ್ನು ಗುರುತಿಸಿರುವುದಾಗಿಯೂ, ಇವುಗಳು ಸದರಿ ಅಭ್ಯರ್ಥಿಗಳು ಯಾವ ಯಾವ ಕಾಗದ ಪತ್ರಗಳನ್ನು ಹಾಜರು ಮಾಡಿರುತ್ತಾರೆ ಎಂಬುದನ್ನು ತೋರಿಸುತ್ತವೆ. ಇವುಗಳನ್ನು ನೋಡಲಾಗಿ ಸದರಿ ಅಭ್ಯರ್ಥಿಗಳು ಅಂಕಪಟ್ಟಿಯನ್ನಾಗಲೀ ಅಥವಾ ಪ್ರಮಾಣ ಪತ್ರವನ್ನಾಗಲೀ ಅನಂತರ ಹಾಜರ್ ಮಾಡಿರುವುದಾಗಿ ಕಂಡು ಬಂದಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ, ನೇರ ನೇಮಕಾತಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಜನ್ಮ ದಿನಾಂಕ, ವಿದ್ಯಾರ್ಹತೆ, ಮೀಸಲಾತಿ ಮತ್ತು ಇತರೆ ಅರ್ಹತೆಗಳನ್ನು ಸಮರ್ಥಿಸುವ ದಾಖಲೆಗಳ ಪ್ರತಿಗಳನ್ನು ಲಗತ್ತಿಸುವುದು ನಿಯಮವಾಗಿರುತ್ತದೆ. ಅಗತ್ಯ ದಾಖಲೆಗಳಿಲ್ಲದೇ ಸಲ್ಲಿಸಲಾಗುವ ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಬೇಕೆಂಬುದು ನಿಯಮವೇ ವಿಧಿಸಿದ ನಿಬಂಧನೆಯಾಗಿದೆ. ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಸಂದರ್ಭದಲ್ಲಿ ಮೂಲ ಅರ್ಜಿಯೊಂದಿಗೆ ಸಲ್ಲಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಆಕ್ಷೇಪಣೆ ಸಲ್ಲಿಸಲು ಅವಕಾಶವಿರುತ್ತದೆಯೇ ಹೊರತು ಮೂಲ ಅರ್ಜಿಯೊಂದಿಗೆ ಸಲ್ಲಿಸದೇ ಇರುವ ದಾಖಲೆಗಳನ್ನು ಹೊಸದಾಗಿ ಸೇರಿಸಲಾಗಲೀ, ಪರಿಗಣಿಸಲಾಗಲೀ ಅವಕಾಶವಿರುವುದಿಲ್ಲ. ಮೂಲ ಅರ್ಜಿಯೊಡನೆ ಸಲ್ಲಿಸದೇ ಇರುವ ಯಾವ ದಾಖಲೆಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವ ಸಂದರ್ಭದಲ್ಲಿ ಪರಿಗಣಿಸಿ ಅಭ್ಯರ್ಥಿಗಳನ್ನು ಆರೋಪಿಯು ಆಯ್ಕೆ ಮಾಡಿರುತ್ತಾರೆ ಹಾಗೂ ಯಾವ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂಬುದರ ಬಗ್ಗೆ ವಿಚಾರಣಾ ವರದಿಯಲ್ಲಿ ಪ್ರಸ್ತಾಪಿಸಿರುವುದಿಲ್ಲ ಹಾಗೆಯೇ ಅಪೂರ್ಣವಾಗಿ ಸಲ್ಲಿಸಿದ್ದ ಅರ್ಜಿಗಳನ್ನು ಯಾವ ಉದ್ದೇಶದಿಂದ ತಿರಸ್ಕರಿಸದೇ ನೇಮಕಾತಿಗೆ ಪರಿಗಣಿಸಿದ್ದಾರೆ ಎಂಬ ಬಗ್ಗೆ ವಿಶ್ಲೇಷಿಸಿಲ್ಲ.

ಎರಡನೇ ಆರೋಪದ ಬಗ್ಗೆ ವಿಶ್ಲೇಷಿಸುತ್ತಾ, ವಿಚಾರಣಾಧಿಕಾರಿಯವರು ದಿನಾಂಕ:30.10.1999ರ ಆದೇಶವನ್ನು ನಿರ್ದೇಶಕರು ನೀಡಿದ ಪ್ರಕಾರ ಮೈಸೂರು ಯೂನಿವರ್ಸಿಟಿಯ ಬಿ.ಎಫ್.ಎ. ಡಿಗ್ರಿಯನ್ನು ಮಾತ್ರ ಬಿ.ಮ್ಯೂಸಿಕ್ ಎಂದು ಹೆಸರು

ಬದಲಾಯಿಸಿದೆ. ದಿನಾಂಕ:22.08.1975ರ ಸರ್ಕಾರಿ ಆದೇಶ, ವೃಂದ ಮತ್ತು ನೇಮಕಾತಿ ನಿಯಮ 34(ಎ)ರ ಪ್ರಕಾರ ವಿದ್ವತ್ ಗ್ರೇಡ್ ಹಾಗೂ ಯಾವುದೇ ವಿಶ್ವವಿದ್ಯಾಲಯ ನೀಡಿದ ಬಿ.ಮ್ಯೂಸಿಕ್ ಡಿಗ್ರಿ ತತ್ಸಮವೆಂದು ತಿಳಿಯತಕ್ಕದ್ದೆಂದು ಸೂಚಿಸುತ್ತದೆ. ಇದರಂತೆ ಖಾನಡೆ ಹಾಗೂ ಮೆಪರವಾಡೆ ಇವರುಗಳು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸಂಗೀತ ಶಿಕ್ಷಕರುಗಳ ಹುದ್ದೆಗೆ ಅರ್ಹತೆ ಪಡೆದಿದ್ದರು. ಸದರಿ ನಿಯಮದ ಪ್ರಕಾರ ಬಿ.ಮ್ಯೂಸಿಕ್ ಹಾಗೂ ಬಿ.ಎಫ್.ಎ. ಎರಡೂ ತತ್ಸಮಾನ ಪದವಿ ಅರ್ಹತೆ ಇರುತ್ತದೆ. ಹೀಗಾಗಿ ಇವರುಗಳು ನಿಗದಿತ ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲವೆಂದು ಹೇಳಲು ಬರುವುದಿಲ್ಲ. ಹೀಗಾಗಿ ಅವರುಗಳನ್ನು ಆಯ್ಕೆ ಮಾಡಿದ ಕ್ರಮ ದುರ್ನಡತೆಯಲ್ಲವೆಂದು ನಿರ್ಣಯಿಸಿದ್ದಾರೆ. ವಿಚಾರಣಾಧಿಕಾರಿಗಳು ಕೇವಲ ವೃಂದ ಮತ್ತು ನೇಮಕಾತಿ ನಿಯಮಗಳ ಮೂಲ ನಿಯಮಗಳಲ್ಲಿನ ವಿದ್ಯಾರ್ಹತೆಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದು ಕಾಲಕಾಲಕ್ಕೆ ಸದರಿ ನಿಯಮಗಳಿಗೆ ಸರ್ಕಾರದಿಂದ ಮಾಡಲಾದ ತಿದ್ದುಪಡಿಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಮೂಲ ನಿಯಮ 34(ಎ)ರ ಪ್ರಕಾರ ವಿದ್ವತ್ ಗ್ರೇಡ್ ಹಾಗೂ ಯಾವುದೇ ವಿಶ್ವವಿದ್ಯಾಲಯ ನೀಡಿದ ಬಿ.ಮ್ಯೂಸಿಕ್ ಡಿಗ್ರಿ ಎಂದು ಇರುವುದನ್ನು ಮಾತ್ರ ವಿಚಾರಣಾಧಿಕಾರಿಗಳು ಆಧಾರವಾಗಿಟ್ಟುಕೊಂಡಿದ್ದಾರೆ. ಆದರೆ ಪ್ರೌಢ ಶಿಕ್ಷಣ ನಿರ್ದೇಶಕರು ನೀಡಿರುವ ದಿನಾಂಕ:30.10.1999ರ ಸ್ಪಷ್ಟೀಕರಣದಂತೆ ಸಂಗೀತ ಶಿಕ್ಷಕರ ಹುದ್ದೆಗೆ ನೇಮಕಾತಿಗೆ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಮ್ಯೂಸಿಕ್ ವಿದ್ಯಾರ್ಹತೆಯನ್ನು ಪರಿಗಣಿಸುವಂತಿಲ್ಲ.

ಮೂರನೇ ಆರೋಪ ಕುರಿತು ತಮ್ಮ ವಿಶ್ಲೇಷಣೆಯಲ್ಲಿ ವಿಚಾರಣಾಧಿಕಾರಿಗಳು ನೇಮಕಾತಿ ಆದೇಶ ಪಡೆದ 5 ಮಂದಿ ಹೊಲಿಗೆ ಶಿಕ್ಷಕರು ನೇಮಿಸಿದ ಸ್ಥಳಕ್ಕೆ ಹೋದಾಗ ಹುದ್ದೆ ಖಾಲಿ ಇಲ್ಲದ ಕಾರಣ ಸಂಬಂಧಪಟ್ಟ ಮುಖ್ಯೋಪಾಧ್ಯಾಯರಿಂದ ಹುದ್ದೆ ಖಾಲಿ ಇಲ್ಲದಿರುವ ಬಗ್ಗೆ ಲಿಖಿತ ಪತ್ರಗಳನ್ನು ತಂದು ಆರೋಪಿಯ ಮುಂದೆ ಹಾಜರುಪಡಿಸಿದ್ದಾರೆ. ನಂತರ ಆರೋಪಿಯು ನೋಟ್ ಮಾಡಿಕೊಂಡು ಸದರಿ ಹುದ್ದೆಗಳು ಖಾಲಿ ಇಲ್ಲದಿರುವುದನ್ನು ನೋಡಿಕೊಂಡು ಮರು ಸ್ಥಳನಿಯುಕ್ತಿಗೊಳಿಸಿದ್ದಾರೆಂದು ತಿಳಿಸಿ ಆರೋಪ ಸಾಭೀತಾಗಿಲ್ಲವೆಂದು ನಿರ್ಣಯಿಸಿದ್ದಾರೆ. ಆದರೆ ನೇರ ನೇಮಕಾತಿ ಪ್ರಕಟಣೆ ನೀಡುವಾಗ ಅಗತ್ಯಕ್ಕನುಗುಣವಾಗಿ ಹುದ್ದೆಗಳನ್ನು ಗುರುತಿಸಿ ಕಾಯ್ದಿರಿಸುವುದು ಕಡ್ಡಾಯವಾಗಿದೆ. ವಿಚಾರಣಾ ವರದಿಯಲ್ಲಿಯೇ ಮೂಡಿ ಬಂದಿರುವಂತೆ ನೇರ ನೇಮಕಾತಿಗಾಗಿ ಕಾಯ್ದಿರಿಸಿದ ಹುದ್ದೆಗಳಲ್ಲಿ ಬೇರೆ ಶಿಕ್ಷಕರುಗಳನ್ನು ವರ್ಗಾವಣೆ ಮೂಲಕ ತುಂಬಿರುವುದು ಕಂಡುಬರುತ್ತದೆ. ಇದನ್ನು ಆಯ್ಕೆ ಪ್ರಾಧಿಕಾರಿಗಳೇ ಅಲ್ಲದೆ ಇತರೆ ಪ್ರಾಧಿಕಾರಿಗಳೂ ಮಾಡಿದ್ದಾರೆ.

ಹೀಗಾಗಿ ನೇರ ನೇಮಕಾತಿ ಅಭ್ಯರ್ಥಿಗಳಿಗೆಂದೇ ಕಾಯ್ದಿರಿಸಲಾಗಿದ್ದ ಹುದ್ದೆಗಳು ಅವರಿಗೆ ಸ್ಥಳ ನಿಯುಕ್ತಿಗೊಳಿಸಿದಾಗ ಅವರಿಗೆ ಖಾಲಿ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಇಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಉಪನಿರ್ದೇಶಕರಿಂದ ವಿವರವಾದ ವರದಿಯನ್ನು ಪಡೆಯದೇ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರು ಹುದ್ದೆ ಖಾಲಿ ಇಲ್ಲದಿರುವ ಬಗ್ಗೆ ನೀಡಿದ ಲಿಖಿತ ಪತ್ರಗಳನ್ನು ಆಧಾರವಾಗಿಟ್ಟುಕೊಂಡು ಮರುಸ್ಥಳ ನಿಯುಕ್ತಿಗೊಳಿಸಿರುವುದು ತೀವ್ರವಾದ ಕರ್ತವ್ಯಲೋಪವಾಗಿದೆ. ಅದೇ ವಿಚಾರಣೆಯನ್ನು ಹೂಡಲು ಮುಖ್ಯ ಆಧಾರವಾಗಿದೆ. ಈ ಅಂಶವನ್ನು ವಿಚಾರಣೆಯಲ್ಲಿ ಪ್ರಸ್ತಾಪಿಸಿಲ್ಲ ಹಾಗೂ ಪರಿಗಣಿಸಿಲ್ಲ.

ಮೇಲಿನ ಎಲ್ಲಾ ಕಾರಣಗಳಿಂದಾಗಿ ವಿಚಾರಣೆಯಲ್ಲಿ ನಿಯಮಾನುಸಾರ ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆಂದು ಸರ್ಕಾರವು ನಿರ್ಣಯಿಸಿ ಮರುವಿಚಾರಣೆಗೆ ವಹಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 34 ಎಸ್ಇಎನ್ 2004, ಬೆಂಗಳೂರು, ದಿನಾಂಕ:3ನೇ ಮಾರ್ಚ್, 2009

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಈ ಪ್ರಕರಣವನ್ನು ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮರು ವಿಚಾರಣೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ವಿಚಾರಣಾಧಿಕಾರಿಗಳಿಗೆ ಹಿಂತಿರುಗಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್.800

ಕಾರ್ಮಿಕ ಸಚಿವಾಲಯ

ವಿಷಯ: ಕರ್ನಾಟಕ ಲೇಬರ್ ಇನ್ಸ್‌ಟಿಟ್ಯೂಟ್ ಸ್ಥಾಪಿಸಲು ಆಯವ್ಯಯ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕಾಇ 284 ಎಲ್ಇಟಿ 2008, ದಿನಾಂಕ:12.09.2008.

2) ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ:20.01.2009.

3) ಕಾರ್ಮಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ:ಎಸಿಟಿ–1/ಸಿಆರ್–57/2008–09, ದಿನಾಂಕ:23.01.2009 ಮತ್ತು 09.02.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ:12.09.2008ರಲ್ಲಿ ರಾಷ್ಟ್ರೀಯ ಕಾನೂನು ಶಾಲೆ (National Law School of India University) ಇವರ ಸಹಯೋಗದೊಂದಿಗೆ ಕಾರ್ಮಿಕ ಅಧ್ಯಯನ ವಿಷಯಗಳಿಗಾಗಿ ರಾಜ್ಯ ಸಂಸ್ಥೆಯನ್ನು ಅಂದರೆ ಕರ್ನಾಟಕ ಲೇಬರ್ ಇನ್ಸ್ಟಿಟ್ಯೂಟ್‌ನ್ನು ಸ್ಥಾಪಿಸಲು ಕೆಲವೊಂದು ಷರತ್ತುಗಳಿಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ದಿನಾಂಕ:20.01.2009ರ ಪತ್ರದಲ್ಲಿ Memorandum of Association and Bye-Law's ನ್ನು ಸರ್ಕಾರವು ಪರಿಶೀಲಿಸಿ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ ಮತ್ತು ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಈ ಸಂಸ್ಥೆಯನ್ನು ನೋಂದಾಯಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕಾರ್ಮಿಕ ಆಯುಕ್ತರಿಗೆ ತಿಳಿಸಲಾಗಿದೆ.

ಕಾರ್ಮಿಕ ಆಯುಕ್ತರು ಮೇಲೆ (3) ರಲ್ಲಿ ಓದಲಾದ ದಿನಾಂಕ:23.01.2009ರ ಪತ್ರದಲ್ಲಿ ಸೊಸೈಟಿಯು ನೋಂದಾಯಿಸಲಾಗುತ್ತಿದೆ ಎಂದು ಕಾರ್ಪೋರೇಷನ್ ಬ್ಯಾಂಕ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಈ ಶಾಖೆಯಲ್ಲಿ ಉಳಿತಾಯ ಖಾತೆ 01-003399 ತೆರೆಯಲಾಗಿದೆಯೆಂದೂ, 2008-09ನೇ ಸಾಲಿನಲ್ಲಿ 2230-01-277-0-01-ಯೋಜನೆ-ಲೆಕ್ಕಶೀರ್ಷಿಕೆ ಅಡಿಯಲ್ಲಿ ಹಂಚಿಕೆ ಮಾಡಿರುವ 65.68 ಲಕ್ಷ ರೂ.ಗಳ ಆಯವ್ಯಯವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ವಿಷಯವನ್ನು ಸರ್ಕಾರವು ಪರಿಶೀಲಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 363 ಎಲ್‌ಇಟಿ 2008, ಬೆಂಗಳೂರು, ದಿನಾಂಕ:13ನೇ ಫೆಬ್ರವರಿ, 2009

2008-09ನೇ ಸಾಲಿನಲ್ಲಿ ನೀಡಲಾದ ಲೆಕ್ಕಶೀರ್ಷಿಕೆ 2230-01-277-0-01-ಯೋಜನೆ ಅಡಿಯಲ್ಲಿ ಒದಗಿಸಿರುವ 65.68 ಲಕ್ಷ ರೂ.ಗಳ (ಅರವತ್ತೈದು ಲಕ್ಷದ ಅರವತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ವೆಚ್ಚವನ್ನು ಭರಿಸುವ ಸಲುವಾಗಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಅನುದಾನದ ಬಿಲ್ಲಿಗೆ ಮೇಲು ರುಜು ಮಾಡುವ ಅಧಿಕಾರವನ್ನು ಕಾರ್ಮಿಕ ಆಯುಕ್ತರು ಇವರಿಗೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಕಕಾ 15 ಆಂಆಸ 2009, ದಿನಾಂಕ:04.02.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಎನ್. ನಾಗೇಂದ್ರ

ಪಿ.ಆರ್.807

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ-ಕರ್ನಾಟಕ ಇದರಡಿ, 2008-09ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಮೂರನೇ ಕಂತಿನ ರಾಜ್ಯದ ಅನುದಾನ ಬಿಡುಗಡೆ ಮಾಡುತ್ತಿರುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂ.ಜೆ-12022/4/2008-ಎನ್.ಆರ್.ಇ.ಜಿ.ಎ-ಎಸ್.ಎಲ್. ನಂ.762 ದಿನಾಂಕ:20.02.2009.

ಪ್ರಸ್ತಾವನೆ:

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರವು ಗುಲ್ಬರ್ಗಾ ಜಿಲ್ಲೆಗೆ ರು.3621.00 ಲಕ್ಷಗಳನ್ನು ಮೂರನೇ ಕಂತಾಗಿ ನೇರವಾಗಿ ಬಿಡುಗಡೆ ಮಾಡಿ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಹದಿನೈದು ದಿನಗಳೊಳಗಾಗಿ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತದೆ. 2008-09ನೇ ಸಾಲಿನಲ್ಲಿ ಸದರಿ ಯೋಜನೆಗೆ ಆಯವ್ಯಯದಲ್ಲಿ ಅನುದಾನವನ್ನು ರಾಜ್ಯದ ಪಾಲಾಗಿ, ಸಾಮಗ್ರಿಗಳ ಬಳಕೆಗಾಗಿ ಶೇಕಡಾ 10ರಷ್ಟಾಗಿ ಬಿಡುಗಡೆ ಮಾಡಲು ಒದಗಿಸಲಾಗಿರುತ್ತದೆ. ಆದುದರಿಂದ, ಪ್ರಸ್ತುತ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ, ಉದ್ಯೋಗ ಖಾತರಿ ಯೋಜನೆಯಡಿ, ಸಾಮಗ್ರಿಗಳ ಘಟಕದ ಬಳಕೆಗಾಗಿ, ಶೇಕಡಾ 10ರಷ್ಟಾದ ರೂ.362.10 ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿದಂತೆ, ಬಿಡುಗಡೆ ಮಾಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ.02.ಉಖಾಯೋ.08, ಬೆಂಗಳೂರು, ದಿನಾಂಕ:28ನೇ ಫೆಬ್ರವರಿ, 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ- ಕರ್ನಾಟಕ ಇದರಡಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2008-09ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯದ ಪಾಲನ್ನು ಮೂರನೇ ಕಂತಿನ ಅನುದಾನವಾದ ರೂ.362.10 ಲಕ್ಷಗಳನ್ನು (ರೂ. ಮೂರು ಕೋಟಿ

ಅರವತ್ತೆರಡು ಲಕ್ಷದ ಹತ್ತು ಸಾವಿರ ಮಾತ್ರ) ಅನುಬಂಧದಲ್ಲಿ ನಮೂದಿಸಿದಂತೆ, ಸಾಮಗ್ರಿ ಘಟಕದ ವೆಚ್ಚಕ್ಕೆ ಬಳಸಲು ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಆರ್ಥಿಕ ಇಲಾಖೆಯ ಆದೇಶದ ಸಂಖ್ಯೆ: ಎಫ್‌ಡಿ, 7 ಜೆಡ್‌ಪಿಎ 2003 ದಿನಾಂಕ:14.07.2005 ಮತ್ತು ಸರ್ಕಾರದ ಸುತ್ತೋಲೆ ಸಂ.ಆಇ 01 ಜಿಪಅ 07 ದಿನಾಂಕ:19.01.2007ರಲ್ಲಿನ ಸೂಚನೆಗಳನ್ವಯ ಈ ಕೆಳಕಂಡ ಲೆಕ್ಕಶೀರ್ಷಿಕೆಯಡಿ ಪೇಯಿಸ್ ರಸೀದಿಯ ಮೇಲೆ ಖಜಾನೆಯಿಂದ ಅನುದಾನ ಪಡೆದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ ವೆಚ್ಚವನ್ನು ಭರಿಸತಕ್ಕದ್ದು.

2008–09ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಲೆಕ್ಕಶೀರ್ಷಿಕೆ "2505 ಗ್ರಾಮೀಣ ಉದ್ಯೋಗ 02 ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 101– ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಕ್ರಮ 0–01 ಕರ್ನಾಟಕ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ–059 ಇತರೆ ಖರ್ಚು (ಯೋಜನೆ)" (2505–02–101–0–01–059).

ಈಗ ಬಿಡುಗಡೆ ಮಾಡುವ ಅನುದಾನವನ್ನು ಸಾಮಗ್ರಿ ಘಟಕಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು. ಪಂಚಾಯತ್ ರಾಜ್ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ ಅಧಿನಿಯಮದ ಪ್ರಕರಣಗಳು, ಕೇಂದ್ರ ಸರ್ಕಾರದ ನಿರ್ವಹಣೆಯ ಮಾರ್ಗಸೂಚಿಗಳು, ಸುತ್ತೋಲೆಗಳು, ಆದೇಶಗಳು ಹಾಗೂ ರಾಜ್ಯ ಸರ್ಕಾರವು ದಿನಾಂಕ:01.02.2007 ರಂದು ಅಧಿಸೂಚಿಸಿರುವ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಇದರ ಮಾರ್ಗಸೂಚಿಗಳ ರೀತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು. ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಹಕ ಅಧಿಕಾರಿಗಳು, ಉಸ್ತುವಾರಿ, ಅನುಷ್ಠಾನ ಮತ್ತು ಜಾಗೃತಿ ಇವುಗಳನ್ನು ಚಲಾಯಿಸುವ ಸಂಪೂರ್ಣ ಜವಾಬ್ದಾರಿ ಅವರುಗಳದಾಗಿರುತ್ತದೆ.

ಸರ್ಕಾರದ ಆದೇಶವನ್ನು ಈ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಗ್ರಾಅಪ:79:ಪಿಬಿಎಸ್:2009 ದಿನಾಂಕ:27.02.2009ರಲ್ಲಿ ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ:ಪಿ.ಸಿ. ಜಾಫರ್

ನಿರ್ದೇಶಕರು,

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ANNEXURE TO G.O.NO.RDP:02:NRE:2008, BANGALORE, DATED:28.02.2009

Statement showing the releases of IIIrd installment of state share of funds under NREGA during 2008-09.

(Rs.in lakhs)

Sl. No.	District	Central share directly to ZP		State share proposed for releases as per Column No.4	Funds being released in this Order
		Date	Amount		
1.	Gulbarga	20-02-2009	3621.00	362.10	362.10

Dr. P.C. JAFFER

Director,

PR-809

National Rural Employment Guarantee Scheme

& E/o. Dy. Secretary to Government,

Rural Development & Panchayat Raj Department.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ: 2008–09ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ 8 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ-I(12) ದಿನಾಂಕ:02.04.2008, (39) ದಿನಾಂಕ:22.05.2008 ಮತ್ತು (63) ದಿನಾಂಕ:26.06.2008.

2) ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ:12.05.2008 ಮತ್ತು 29.07.2008.

3) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ-I(126) ದಿನಾಂಕ:18.12.2008, (146) ದಿನಾಂಕ:14.01.2009 ಮತ್ತು (171) ದಿನಾಂಕ:28.01.2009.

4) ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ:30.01.2009 ಮತ್ತು 16.02.2009.

5) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ-I(183) ದಿನಾಂಕ:09.02.2009 ಮತ್ತು (198) ದಿನಾಂಕ:18.02.2009.

ಪ್ರಸ್ತಾವನೆ:

2008-09ನೇ ಸಾಲಿನಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಕೇಂದ್ರ ಸರ್ಕಾರವು ಓದಲಾಗಿದೆ (1)ರಲ್ಲಿ ಒಂದನೇ ಕಂತಿನ ಅನುದಾನವಾಗಿ ಒಟ್ಟು ರೂ.40,08,44,000 ಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ್ದು, ಇದರನ್ವಯ ಓದಲಾಗಿದೆ (2)ರನ್ವಯ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಜಿಲ್ಲೆಗಳಿಗೆ ಲಭ್ಯವಿರುವ ಅನುದಾನದಂತೆ ತನ್ನ ಪಾಲಿನ ಮೊದಲನೇ ಕಂತಿನ ಅನುದಾನ ರೂ.13,21,59,000 ಬಿಡುಗಡೆ ಮಾಡಲಾಗಿದೆ. ಓದಲಾಗಿದೆ (3) ರಲ್ಲಿನ ದಿನಾಂಕಗಳಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ರಾಜ್ಯದ 18 ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ.19,51,85,000ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಓದಲಾಗಿದೆ (4)ರ ಆದೇಶದಲ್ಲಿ ತನ್ನ ಪಾಲಿನ ಎರಡನೇ ಕಂತಿನ ಅನುದಾನ ರೂ.6,44,80,000 ಗಳನ್ನು ಬಿಡುಗಡೆ ಮಾಡಿದೆ.

ಓದಲಾಗಿದೆ (5)ರ ಪತ್ರದಲ್ಲಿ ಕೇಂದ್ರ ಸರ್ಕಾರ ಎಸ್‌ಜಿಎಸ್‌ವೈ ಯಡಿ ರಾಜ್ಯದ ಬೆಳಗಾಂ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ, ಮಂಡ್ಯ, ರಾಯಚೂರು ಮತ್ತು ಉಡುಪಿ ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ.8,44,59,000ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ರೂ.2,81,53,000ನ್ನು ನೀಡಬೇಕಾಗಿದೆ. ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ರಾಜ್ಯದ ಆಯವ್ಯಯದಲ್ಲಿ ಅನುದಾನದ ಕೊರತೆಯಿರುವುದರಿಂದ ಈ ಜಿಲ್ಲೆಗಳಿಗೆ ಲಭ್ಯತೆ ಆಧಾರದ ಮೇಲೆ ಹಾಗೂ ಉಳಿದ ಜಿಲ್ಲೆಗಳಿಗೆ ಎರಡನೇ ಕಂತಿನ ಪೂರ್ಣ ಅನುದಾನವಾಗಿ ಒಟ್ಟು ರೂ.2,41,59,000 ನ್ನು ಬಿಡುಗಡೆ ಮಾಡಲು ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 32ಎಸ್‌ಜೆವೈ 2008, ಬೆಂಗಳೂರು, ದಿನಾಂಕ:2ನೇ ಮಾರ್ಚ್, 2009

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರವು ತನ್ನ ಪಾಲಿನ ಎರಡನೇ ಕಂತಿನ ಅನುದಾನವನ್ನು ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವಂತೆ ಬೆಳಗಾಂ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ, ಮಂಡ್ಯ, ರಾಯಚೂರು ಮತ್ತು ಉಡುಪಿ ಜಿಲ್ಲೆಗಳಿಗೆ ಒಟ್ಟು ರೂ.2,41,59,000ಗಳನ್ನು (ರೂ.ಎರಡು ಕೋಟಿ ನಲವತ್ತೊಂದು ಲಕ್ಷದ ಐವತ್ತೊಂಬತ್ತು ಸಾವಿರ ಮಾತ್ರ) ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು:

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75:25ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501- ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು-01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2008-09 (2501-01-198-6-01) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ:14.07.2005ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 14 ಎಸ್‌ಜೆವೈ 2007 ದಿನಾಂಕ:18.04.2007ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2008-09ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ: ಗ್ರಾಅಪ 78 ಪಿಬಿಎಸ್ 2009 ದಿನಾಂಕ:27.02.2009ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 32 ಎಸ್‌ಜೆವೈ 2008, ಬೆಂಗಳೂರು, ದಿನಾಂಕ:02.03.2009ಕ್ಕೆ ಅನುಬಂಧ

(ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲಾ ಪಂಚಾಯತಿಯ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾಗಿರುವ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಜಿಲ್ಲೆಗೆ ಲಭ್ಯವಿರುವ ಅನುದಾನದಂತೆ ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ
1.	ಬೆಳಗಾವಿ	413	2200ZZ0002	2,51,88,000	83,96,000	83,96,000
2.	ಚಾಮರಾಜನಗರ	456	1000ZZ0001	1,55,77,000	51,92,000	31,47,000
3.	ಚಿಕ್ಕಮಗಳೂರು	408	1800ZZ0017	39,05,000	13,02,000	13,02,000
4.	ಚಿಕ್ಕಬಳ್ಳಾಪುರ	453	0600ZZ0001	61,84,000	20,61,000	1,12,000
5.	ಹಾವೇರಿ	463	2700ZZ0001	1,25,72,000	41,91,000	41,91,000
6.	ಮಂಡ್ಯ	412	1100ZZ0001	58,05,000	19,35,000	19,35,000
7.	ರಾಯಚೂರು	420	3600ZZ0001	1,16,20,000	38,73,000	38,73,000
8.	ಉಡುಪಿ	457	2000ZZ0001	36,08,000	12,03,000	12,03,000
	ಒಟ್ಟು			**8,44,59,000**	**2,81,53,000**	**2,41,59,000**

* ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ರಾಜ್ಯದ ಆಯವ್ಯಯದಲ್ಲಿ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಲಭ್ಯವಿದ್ದ ಅನುದಾನ ಮಾತ್ರ ಬಿಡುಗಡೆಗೊಳಿಸಿದೆ.

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ

ಪಿ.ಆರ್.810

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಶಿಕ್ಷಣ ಇಲಾಖೆ

ವಿಷಯ: ಅನುದಾನರಹಿತ ಖಾಸಗಿ ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನ ಅನುದಾನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಅಧಿಸೂಚನೆ ಸಂ. ಇಡಿ 6 ಪಿಪಿಧ 2001, ದಿನಾಂಕ:12-10-2001

(2) ಸರ್ಕಾರದ ಪತ್ರ ಸಂ. ಇಡಿ 176 ಯುಜಿವಿ 2004(ಭಾಗ), ದಿನಾಂಕ:27-02-2008

(3) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂ. ಶಿತ3-ಇತರೆ-ಅನುದಾನ/02/08-09, ದಿನಾಂಕ:06-11-2008

ಪ್ರಸ್ತಾವನೆ:

ರಾಜ್ಯದಲ್ಲಿ ದಿನಾಂಕ:01-06-1987ರ ಪೂರ್ವದಲ್ಲಿ ಪ್ರಾರಂಭಿಸಲಾದ ಅನುದಾನರಹಿತ ಶಿಕ್ಷಣ ಮಹಾವಿದ್ಯಾಲಯಗಳನ್ನು (ಬಿ.ಇಡಿ ಕಾಲೇಜುಗಳನ್ನು) ವೇತನ ಅನುದಾನಕ್ಕೆ ಒಳಪಡಿಸಲು ಈ ಮಹಾವಿದ್ಯಾಲಯದಲ್ಲಿ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವೇತನ ಅನುದಾನ ನೀಡುವಂತೆ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ (3)ರ ಪತ್ರದಲ್ಲಿ ಪ್ರಸ್ತಾಪಿಸಿರುವುದರಿಂದ ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನ ಅನುದಾನಕ್ಕೆ ಒಳಪಡಿಸಲು ಪರಿಶೀಲಿಸಿ, ಸರ್ಕಾರವು ವೇತನ ಅನುದಾನ ಸಂಹಿತೆಯನ್ವಯ ಅರ್ಹ ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನ ಅನುದಾನಕ್ಕೆ ಒಳಪಡಿಸಬೇಕೆಂದು ತೀರ್ಮಾನಿಸಲಾಗಿದೆ. ಅದರಂತೆ ಅನುದಾನ ಸಂಹಿತೆಯ ಅರ್ಹ ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನ ಅನುದಾನಕ್ಕೆ ಒಳಪಡಿಸಲು ನಿರ್ಧರಿಸಿರುವುದರಿಂದ, ಪ್ರಸ್ತಾಪಿಸಿರುವ ಶಿಕ್ಷಣ ಮಹಾವಿದ್ಯಾಲಯಗಳಿಗೆ ಮೇಲೆ ಓದಲಾದ (1)ರ ದಿನಾಂಕ:12-10-2001ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ಬೋಧಕ/ಬೋದಕೇತರ ಹುದ್ದೆಗಳನ್ನು ನಿಗದಿಪಡಿಸಲಾಗಿದೆ.

STANDARD STAFFING PATTERN FOR COLLEGES OF EDUCATION IMPARTING B.Ed COURSE

In Colleges of Teachers Education imparting B.Ed Course, with an intake capacity of **100** students, the following teaching and non-teaching posts may be sanctioned.

Sl.No.	Designation		No. of Posts
1	Principal/Head	-	1 (one)
2	Readers/Lecturers	-	9(nine)
3	Librarian	-	1 (one)
4	Library Clerk/Library Assistant	-	1 (one)
5	First Division Clerk/Assistant/Accountant/ Head Clerk	-	2 (Two)
6	Attenders for Library and Office	-	3 (three)
7	Watchman	-	1(one)
8	Scavenger	-	1(one)
9	Peons/Class IV	-	4 (four)
10	Technician (Film Operator or Mechanic)	-	1 (one)
11	Clerk-cum-Typists	-	2(two)
12	Physical Education Instructor	-	1(one)

ಅದರನ್ವಯ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2) ಸರ್ಕಾರವು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ 21 ಅನುದಾನ ರಹಿತ ಶಿಕ್ಷಣ ಮಹಾವಿದ್ಯಾಲಯಗಳನ್ನು ವೇತನ ಅನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಈ ಕೆಳಕಂಡಂತೆ ಆದೇಶ ಭಾಗದಲ್ಲಿ ತಿಳಿಸಿರುವ ಅನುದಾನರಹಿತ ಶಿಕ್ಷಣ ಮಹಾವಿದ್ಯಾಲಯಗಳಿಗೆ ವೇತನ ಅನುದಾನ ಹಾಗೂ ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಪ್ರಸ್ತಾಪಿಸಿರುವ ಬೋಧಕ/ಬೋಧಕೇತರ ಹುದ್ದೆಗಳಿಗೆ ಮಂಜೂರಾತಿ ನೀಡಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ವಿಳಾಸ	ಹುದ್ದೆಗಳು	
		ಬೋಧಕ	ಬೋಧಕೇತರ
1	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಧಾರವಾಡ ಜಿಲ್ಲೆ.	1+8	09
2	ಶ್ರೀ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯ, ಹಾನಗಲ್, ಹಾವೇರಿ ಜಿಲ್ಲೆ	1+9	13
3	ಶ್ರೀ ಶಿವಾಜಿ ಶಿಕ್ಷಣ ಮಹಾವಿದ್ಯಾಲಯ, ಬಾಡ, ಕಾರವಾರ ಜಿಲ್ಲೆ.	1+8	17
4	ಶ್ರೀ ಕೆ. ವೆಂಕಟಪತೆಪ್ಪ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಬಳ್ಳಾಪುರ	1+9	16
5	ಶ್ರೀ ಸರ್ವಜ್ಞ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು.	1+7	15
6	ಸಂಜಯಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು	1+7	10
7	ನ್ಯೂ ಹಾರಿಜನ್ ಶಿಕ್ಷಣ ಮಹಾವಿದ್ಯಾಲಯ ಬೆಂಗಳೂರು	1+7	09
8	ಕೆ.ಎಸ್.ಇ.ಎಫ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು	1+4	05
9	ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಮಹಾವಿದ್ಯಾಲಯ, ಮಧುಗಿರಿ. ಮಧುಗಿರಿ ಶೈಕ್ಷಣಿಕ ಜಿಲ್ಲೆ	7	8
10	ಸರ್ವೋದಯ ಶಿಕ್ಷಣ ಮಹಾವಿದ್ಯಾಲಯ, ವೀರಾಜ ಪೇಟೆ, ಕೊಡಗು ಜಿಲ್ಲೆ	1+8	10
11	ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು.	1+6	8
12	ಶ್ರೀ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬೀದರ್	1+8	14
13	ಬಿ.ಎಲ್.ಡಿ.ಇ.ಎ. ಸಂಸ್ಥೆಯ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಬಿಜಾಪುರ.	1+9	14
14	ಶ್ರೀ ಜಗದ್ಗುರು ಪಂಚಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಗದ್ಲಗ್ಗ.	1+8	12
15	ಗೋಲ್ಡ್ ಫೀಲ್ಡ್ ಮಹಾವಿದ್ಯಾಲಯ, ಬಂಗಾರಪೇಟೆ, ಕೋಲಾರ ಜಿಲ್ಲೆ.	1+9	13
16	ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು.	8	11
17	ಕಿತ್ತೂರುರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾಂ ಜಿಲ್ಲೆ.	1+7	09
18	ಟಿ.ಎಂ.ಎ.ಇ. ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ	1+6	16
19	ಎಸ್.ಆರ್.ಕಂಠಿ ಶಿಕ್ಷಣ ಮಹಾವಿದ್ಯಾಲಯ, ಇಳಕಲ್, ಹುನಗುಂದ ತಾಲ್ಲೂಕು, ಬಾಗಲಕೋಟೆ	1+9	09
20	ಶ್ರೀ ಕ್ರಾಂತಿವೀರಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ, ಬೆಳಗಾಂ	1+9	14
21	ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ.	1+7	10

ಸರ್ಕಾರಿ ಆದೇಶ ಸಂಖ್ಯೆ:ಇಡಿ 176 ಯುಜಿವಿ 2004 (ಭಾಗ), ಬೆಂಗಳೂರು, ದಿನಾಂಕ:19ನೇ ಮೇ, 2009

3) ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಈ ಕೆಳಕಂಡ 21 ಶಿಕ್ಷಣ ಮಹಾವಿದ್ಯಾಲಯಗಳನ್ನು ಅವುಗಳ ಮುಂದೆ ತೋರಿಸಿರುವ ಸೂಚಿಸಿರುವ ಬೋಧಕ/ಬೋಧಕೇತರ ಹುದ್ದೆಗಳನ್ನೊಳಗೊಂಡಂತೆ ಮೇಲೆ ಓದಲಾದ (2)ರಲ್ಲಿರುವ ಸರ್ಕಾರದ ಅಧಿಸೂಚನೆಯನ್ವಯ ಮತ್ತು ಈ ಕೆಳಕಾಣಿಸಿದ ಷರತ್ತುಗಳಿಗೊಳಪಡಿಸಿ, ವೇತನ ಅನುದಾನಕ್ಕೆ ಒಳಪಡಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ವಿಳಾಸ	ಹುದ್ದೆಗಳು	
		ಬೋಧಕ	ಬೋಧಕೇತರ
1	ಕೆ.ಎಲ್.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ, ಧಾರವಾಡ ಜಿಲ್ಲೆ.	1+8	09

ಕ್ರಮ ಸಂಖ್ಯೆ	ಕಾಲೇಜಿನ ಹೆಸರು ಮತ್ತು ವಿಳಾಸ	ಹುದ್ದೆಗಳು	
		ಬೋಧಕ	ಬೋಧಕೇತರ
2	ಶ್ರೀ ಕುಮಾರೇಶ್ವರ ಶಿಕ್ಷಣ ಮಹಾವಿದ್ಯಾಲಯ, ಹಾನಗಲ್, ಹಾವೇರಿ ಜಿಲ್ಲೆ	1+9	13
3	ಶ್ರೀ ಶಿವಾಜಿ ಶಿಕ್ಷಣ ಮಹಾವಿದ್ಯಾಲಯ, ಬಾಡ, ಕಾರವಾರ ಜಿಲ್ಲೆ.	1+8	17
4	ಶ್ರೀ ಕೆ. ವೆಂಕಟಪತೆಪ್ಪ ಶಿಕ್ಷಣ ಮಹಾವಿದ್ಯಾಲಯ, ಚಿಕ್ಕಬಳ್ಳಾಪುರ	1+9	16
5	ಶ್ರೀ ಸರ್ವಜ್ಞ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು.	1+7	15
6	ಸಂಜಯಗಾಂಧಿ ಶಿಕ್ಷಣ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು	1+7	10
7	ನ್ಯೂ ಹಾರಿಜನ್ ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು	1+7	09
8	ಕೆ.ಎಸ್.ಇ.ಎಫ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು	1+4	05
9	ಟಿ.ವಿ. ವೆಂಕಟಸ್ವಾಮಿ ಶಿಕ್ಷಣ ಮಹಾವಿದ್ಯಾಲಯ, ಮಧುಗಿರಿ. ಮಧುಗಿರಿ ಶೈಕ್ಷಣಿಕ ಜಿಲ್ಲೆ	7	8
10	ಸರ್ವೋದಯ ಶಿಕ್ಷಣ ಮಹಾವಿದ್ಯಾಲಯ, ವೀರಾಜ ಪೇಟೆ, ಕೊಡಗು ಜಿಲ್ಲೆ	1+8	10
11	ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯ, ರಾಯಚೂರು.	1+6	8
12	ಶ್ರೀ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬೀದರ್	1+8	14
13	ಬಿ.ಎಲ್.ಡಿ.ಇ.ಎ. ಸಂಸ್ಥೆಯ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಬಿಜಾಪುರ.	1+9	14
14	ಶ್ರೀ ಜಗದ್ಗುರು ಪಂಚಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಗದಗ.	1+8	12
15	ಗೋಲ್ಡ್ ಫೀಲ್ಡ್ ಮಹಾವಿದ್ಯಾಲಯ, ಬಂಗಾರಪೇಟೆ, ಕೋಲಾರ ಜಿಲ್ಲೆ.	1+9	13
16	ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು.	8	11
17	ಕಿತ್ತೂರುರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯ, ಬೈಲಹೊಂಗಲ, ಬೆಳಗಾಂ ಜಿಲ್ಲೆ.	1+7	09
18	ಟಿ.ಎಂ.ಎ.ಇ. ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ	1+6	16
19	ಎಸ್.ಆರ್.ಕಂಠಿ ಶಿಕ್ಷಣ ಮಹಾವಿದ್ಯಾಲಯ, ಇಳಕಲ್, ಹುನಗುಂದ ತಾಲ್ಲೂಕು, ಬಾಗಲಕೋಟೆ	1+9	09
20	ಶ್ರೀ ಕ್ರಾಂತಿವೀರಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ, ಬೆಳಗಾಂ	1+9	14
21	ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ.	1+7	10

ಷರತ್ತುಗಳು:

(1) ಕಾಲೇಜು ದಿನಾಂಕ:01-06-1987ರ ಪೂರ್ವದಲ್ಲಿ ಪ್ರಾರಂಭಿಸಿ ನಿರಂತರವಾಗಿ ನಡೆಯುತ್ತಿರಬೇಕು.

(2) ಪ್ರತಿ ಕಾಲೇಜಿನಲ್ಲಿ ಅನುದಾನ ಸಂಹಿತೆ ಪ್ರಕಾರ ಅಗತ್ಯ ಸೌಲಭ್ಯ ಹೊಂದಿರಬೇಕು.

(3) ಪ್ರತಿ ಕಾಲೇಜಿಗೆ ಸಂಬಂಧಿಸಿದಂತೆ ಅನುದಾನ ಸಂಹಿತೆ ಪ್ರಕಾರ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನಿಗದಿಪಡಿಸಿರಬೇಕು ಹಾಗೂ ಸದರಿ ಕಾಲೇಜು ಆ ಹುದ್ದೆಗಳನ್ನು ಪಡೆಯಲು ಅನುದಾನ ಸಂಹಿತೆ ಪ್ರಕಾರ ಎಲ್ಲಾ ಅರ್ಹತೆ ಪಡೆದಿರುತ್ತದೆ ಎಂದು ದೃಢೀಕರಿಸಬೇಕು. ಹುದ್ದೆಗಳನ್ನು ಭರ್ತಿ ಮಾಡುವ ಮುನ್ನ ಸಂಬಂಧಿಸಿದ ಇಲಾಖೆಯಿಂದ ಪೂರ್ವಾನುಮತಿ ಪಡೆದಿರಬೇಕು. ಒಂದು ವೇಳೆ ಪೂರ್ವಾನುಮತಿ ಪಡೆಯದಿದ್ದರೆ ಈಗ ಸದರಿ ಹುದ್ದೆಗಳ ನೇಮಕಾತಿ ಬಗ್ಗೆ ಅಂದರೆ ಅನುದಾನ ಸಂಹಿತೆ ಹಾಗೂ ಎನ್.ಸಿ.ಟಿ.ಇ. ನಿಯಮಗಳನುಸಾರ ವಿದ್ಯಾರ್ಹತೆ, ವಯೋಮಿತಿ ಹಾಗೂ ನೇಮಕಾತಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸಿ ಅನುಮೋದನೆ ಪಡೆಯತಕ್ಕದ್ದು. ನಂತರವೇ ಕಾಲೇಜಿನಿಂದ ನೇಮಕ ಮಾಡಿರುವ ಅಭ್ಯರ್ಥಿಯು ನೇಮಕಾತಿಗೆ ವೇತನಾನುದಾನ ಸಹಿತ ಅನುಮೋದನೆ ಪಡೆಯಬೇಕು.

(4) ಬೋಧಕೇತರ ಹುದ್ದೆಗಳನ್ನು ದಿನಾಂಕ:01-06-1992ರ ಮುಂಚೆ ಪೂರ್ವಾನುಮತಿ ಪಡೆದು ನೇಮಕ ಮಾಡಿದ್ದರೆ ಮಾತ್ರ ಪರಿಗಣಿಸಬೇಕು.

(5) ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂ. ಇಡಿ 227 ಎಸ್‌ಇಪಿ 94, ದಿನಾಂಕ:21-04-95 ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಆದೇಶ ಹಾಗೂ ಸಿಆಸುಇ (ಸೇವಾ ನಿಯಮಗಳು) ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಿರಬೇಕು. ಪ್ರತಿ ಕಾಲೇಜು ಪಾಲಿಸಿರುವ ಬಗ್ಗೆ ಸಂಬಂಧಿಸಿದ ಅಧಿಕಾರಿ ದೃಢೀಕರಿಸಬೇಕು.

(6) ಸಚಿವ ಸಂಪುಟದ ನಿರ್ಣಯದ ದಿನಾಂಕ:03-10-2007ರ ನಂತರ ಕಾಲೇಜು ಮಾಡಿಕೊಂಡಿರುವ ನೇಮಕಗಳನ್ನು ಅದು ಅನುಮೋದನೆ ನೀಡುವ ಬಗ್ಗೆ ಪ್ರತ್ಯೇಕವಾಗಿ ಪರಿಶೀಲಿಸಿ ಅರ್ಹವಾಗಿದ್ದರೆ ಅನುದಾನ ರಹಿತವಾಗಿ ಪ್ರಥಮದಲ್ಲಿ ಒಪ್ಪಿಗೆ ನೀಡಿ ವೇತನಾನುದಾನಕ್ಕೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು.

(7) ಪ್ರಸ್ತಾಪಿತ ಕಾಲೇಜುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ವಿವಾದ ಇರುವುದಿಲ್ಲ ಎಂಬುದನ್ನು ದೃಢಪಡಿಸಿಕೊಳ್ಳಬೇಕು.

(8) ಈ ಸಂಬಂಧ ಅಗತ್ಯವಾದ ಅನುದಾನವನ್ನು ಇತರೆ ಯೋಜನಾ ಮಿತಿಯಲ್ಲಿ ಒದಗಿಸಿಕೊಳ್ಳಶಕ್ಕದ್ದು.

(9) ವೇತನಾನುದಾನವು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

(10) ಮೇಲ್ಕಂಡ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಕ್ರ.ಸಂ. 15ರಲ್ಲಿರುವ ಗೋಲ್ಡ್ ಫೀಲ್ಡ್ ಶಿಕ್ಷಣ ಮಹಾವಿದ್ಯಾಲಯ, ಬಂಗಾರಪೇಟೆಯ ಪ್ರಾಂಶುಪಾಲರ ಒಂದು ಹುದ್ದೆ ಹಾಗೂ ಕ್ರ.ಸಂ. 21ರಲ್ಲಿರುವ ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನದ ಒಂದು ಬೋಧಕೇತರ ಹುದ್ದೆಯ ನೇಮಕಾತಿ ಪ್ರಕರಣವು ನ್ಯಾಯಾಲಯದ ಮುಂದೆ ಇರುವುದರಿಂದ ಈ ಹುದ್ದೆಗಳನ್ನು ಹೊರತುಪಡಿಸಲಾಗಿದೆ.

4) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. ಆಇ 1260/ವೆಚ್ಚ-8/2008, ದಿನಾಂಕ:04-03-2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಬಿ. ಉಳವಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು).

ಪಿ.ಆರ್.1285

FOREST, ECOLOGY AND ENVIRONMENT SECRETARIAT

Sub: Diversion of 17.61ha. of forest land (8.96 ha. in Bellary Forest division and 8.65 ha. in Davangere Forest Division) for establishing 18.75 MW Wind Power Project in favour of M/s Suzlon Infrastructure Ltd., Bangalore.

Read:1) Letter No.A5(5) GFL Wind Power.CR.7/06-07, Dated:30.11.2006 of Principal Chief Conservator of Forests, Bangalore.

2) State Government letter No.FEE 209 FLL 2006, Dated:02.04.2007.

3) Letter No.4-KRC330/2007-BAN/508, Dated:01.08.2007 of Government of India, Ministry of Environment and FOrests, Regional Office, Southern Zone, Bangalore.

4) Letter No. A5(5) GFL.CR.7/06-07, Dated:27.12.2008 of Principal Chief Conservator of Forests, Bangalore.

5) State Government letter No. FEE 209 FLL 2006, Dated:11.02.2009.

6) Letter No.4-KRC330/2007-BAN-3863, Dated:27.02.2009 of Government of India, Ministry of Environment and Forests, Regional Office, Southern Zone, Bangalore.

Preamble:

The Principal Chief Conservator of Forests, Bangalore vide his letter Dated:30.11.2006 read at (1) above has submitted the proposal to obtain the approval of Government of India under Section 2 of The Forest (Conservation) Act, 1980 for diversion of 17.61ha. forest land (8.96 ha. of forest land in Sogi RF, Hadagali Range of Bellary Forest Division & 8.65 ha. of forest land in Sogi and Jajikalgudda RF, Harappanahalli Range of Davangere Forest Division) for establishing 18.75 MW Wind Power Project in favour of M/s Suzlon Inffrastructure Ltd., Bangalore esubject to certain conditions.

Accordingly the proposal was recommended to Government of India vide State Government letter Dated:02.04.2007 read at (2) above.

The Government of India, Ministry of Environment and Forests, Regional office, Bangalore vide their letter Dated:01.08.2007 read at (3) above has givne its approval in Principle (Stage-I) for diversion of 17.61ha. forest land (8.96 ha. of forest land in Sogi RF, Hadagali Range of Bellary Forest Division & 8.65 ha. of forest land in Sogi and Jajikalgudda RF, Harappanahalli Range of Davangere Forest Division) for establishing 18.75 MW Wind Power Project in favour of M/s Suzlon Infrastructure Ltd., Bangalore subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter Dated:27.12.2008 furnished the compliance report reat at (4) above and the same has been sent to Government of India vide State Government letter Dated:11.02.2009 read at (5) above.

Government of India Ministry of Environment and Forests, Regional Office, South Zone, Bangalore vide their letter Dated:27.02.2009 read at (6) above has conveyed its approval (Stage-II) under Section 2 of The Forest (Conservation) Act, 1980 for diversion of 17.61 ha. forest land (8.96 ha. of forest land in Sogi RF, Hadagali Range of Bellary Forest Division & 8.65 ha. of forest land in Sogi and Jajikalgudda RF, Harappanahalli Range of Davangere Forest Division) for establishing 18.75 MW Wind Power Project in favour of M/s Suzlon Infrastructure Ltd., Bangalore subject to certain conditions.

The proposal has been exammed in detail and hence the order.

Government Order No.FEE, 209 FLL 2006, Bangalore, Dated:5th March, 2007

In the Circumstances explained in the preamble above, Government are pleased to accord sanction under Section 2 of The Forest (Conservation) Act, 1980 for diversion of 17.61 ha. forest land (8.96 ha. of forest land in Sogi RF, Hadagali Range of Bellary Forest Division & 8.65 ha. of forest land in Sogi and Jajikalgudda RF, Harappanahalli Range of Davangere Forest Division) for establishing 18.75 MW Wind Power Project in favour of M/s Suzlon Infrastructure Ltd., Bangalore subject to the following conditions.

1) The legal Status of the forest land shall remain unchanged.
2) Compensatory Afforestation shall be raised over of equivalent identified non-forest land in Sy.No.225 of Kakubal village of Hospet Taluk, Bellary District at the cost of user agency. The State Government shall obtain prior permission of Central Government for change of location and schedule of CA if any.
3) Non-forest land for compensatory afforestation shall be notified by the State Government as RF/PF under Indian Forest Act, 1927 of the State Forest Act within a period of 6 months and Nodal Officer (Forest Convservation) shall report the compliance within 6 months.
4) The user agency shall demarcate the project area by creating cairns (60 cm. high) with available stones and indicate the marking of forward and backward bearing this cairns. After construction of approach road as per the project plan, this cairns shall be substituted by foour feet high RCC pillars at the project cost indicating on each pillar the forward and backward bearing as well as distrance between the adjacent pillars.
5) The alignment of roads in the proposed area shall be done by a recongnized firm and got approved by the DFO concerned before implementation of the project. The approached road will, however be available for use of the Forest Department of any person authorised by the Forest Department.
6) The additional amount of the Net Present Value (NPV) of the diverted forest land if any, due as per the orders of the Hon'ble Supreme Court Dated:28.03.2008 and 09.05.2008 in I.A. Nos. 826 in 566 with related IA's in Writ Petition (Civil) No.202/1995 shall be realised from the user agency and transferred to Ad-hoc CAMPA in account number CA-1578 of Corporation Bank, Block-II, CGO Complex, Phase-1, Lodhi Road, New Delhi-110 003.

7) The funds received from the user agency towards AC, lease rent and NPV under this project shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi-110003 with an intimation to Government of India.
8) The lease period shall be for 30 years as per the guidelines issued by MOEF vide letter No.8-84/2002-FC, Dated:14.05.2004. In case the user agency proposes to transfer the lease in favour of developers, it shall be done within a period of 4 years from the date of issue of this approval. In case the developers fail to develop wind farm, the land shall be reverted back to Forest Department without any compensation.
9) The vane tips of the wind turbine shall be painted with orange coolour to avoid bird hits. The location of the wind mill shall be such that it does not stand in the migratory path of the birds and is not near the breading sities of the migratory birds.
10) The lease rent of Rs.30,000/- per MW for realished from the user agency shall be utilised in providing gas connections to the local villagers under the Joint Forest Management Programme and the other conservation measures.
11) About 65-70% of leased out area in the wind farm shall be utilized for developing medicinal plant gardens, if possible, by the State Forest Department at the project cost. For this purpose the help of National Medicinal Plant Board in creating corridors of medicinal plant gardens may be taken. The intervening areas between two wing mills footprints should also be planted up by dwarf species of trees at the project cost.
12) Soil and moisture conservation measures like contour trenching shall be taken up on the hillocks supporting the wind mill at the cost of user agency.
13) Adequate fire protection measures, including employment of fire watchers and maintenance of fire lines etc., shall be undertaken by the user agency in and around the project area at its own cost.
14) Within the perimeters of wind farm, smaller turbines may be allowed for optimization of wind energy.
15) The wind turbines/ wind mills to be used on forest land and the applicability of such technology in the country should have general recognition of the Ministry of Non-Conventional Energy Sources, Government of India.
16) The State Government shall ensure that the project area does not form part of any National Park/ Sanctuary.
17) The total forest area utilized for the project shall not exceed 17.61 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
18) The land shall be utilized only for the purpose for which it is released.
19) The user agency has to pay the lease rent as fixed by the Government at the time of sanction and any subesequent order in this regard.
20) Karnataka Forest Act 1963 and Rules 1969 will be applicable for any violation.
21) Compensatory afforestation shall be raised at the cost of user agency over equivalent non-forest land at the rate of prevailing at the time of approval (at present it is Rs.84,000/- per ha.)
22) Traingulation points if any found on the hillocks should be identified and protective measures have to be taken up at the time of erection of Wind Mills.
23) The user agency has to pay the Net present value (NPV) fixed by Government vide Notification No.FEE 247 FGL 2002, Dated:17.01.2004 and as per the latest order of Hon'ble Supreme Court.

24) The user agency has to abide by all the terms and conditions as laid by Government of India as per the guidelines Dated:14.05.2004.

25) Any other condition to be stipulated by/ Government of India/ State Government/ Principal Chief Conservator of Forests, Karnataka in the interest of conservation of forests.

By Order and in the name of the Governor of Karnataka,

P.R. KALAVATHI

PR-872

Under Secretary to Government,

Forest, Ecology and Environment Department.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ: ಎಸ್‌ಜಿಎಸ್‌ವೈ ಲೆಕ್ಕ ಶೀರ್ಷಿಕೆ 2501-01-198-6-01 ಯಡಿ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಭರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 9 ಟಿಎಫ್‌ಪಿ 2005 ದಿನಾಂಕ:07.04.2005.

2) ಸರ್ಕಾರದ ಆದೇಶದ ಸಮಸಂಖ್ಯೆ ದಿನಾಂಕ:03.03.2009.

3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ ಎಸ್‌ಜೆವೈ 2008, ದಿನಾಂಕ:29.07.2008, 16.02.2009 ಮತ್ತು 02.03.2009.

ಪ್ರಸ್ತಾವನೆ:

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀರ್ಷಿಕೆ 2501-01-198-6-01 ಯಡಿ 2008-2009ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ.2562.39 ಲಕ್ಷಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಿದೆ. ಆದರೆ ಆಯವ್ಯಯದಲ್ಲಿ ಎಸ್‌ಜಿಎಸ್‌ವೈ ವಿಶೇಷ ಯೋಜನೆಗೆ ಅಲಾಯಿದ ಹಂಚಿಕೆ ನೀಡಿರುವುದಿಲ್ಲ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ರಾಜ್ಯವು ಕೇಂದ್ರದ ಅನುದಾನಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಸದರಿ ಸಾಲಿನಲ್ಲಿ ಎಸ್‌ಜಿಎಸ್‌ವೈ ಯಡಿ ಬಾಗಲಕೋಟೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ಒಂದೊಂದು ವಿಶೇಷ ಯೋಜನೆ ಮಂಜೂರಾಗಿದೆ. ಇದಲ್ಲದೆ ಚಾಮರಾಜನಗರ ಜಿಲ್ಲಾ ಪಂಚಾಯತಿಗೆ ಕೇಂದ್ರ ಸರ್ಕಾರ ಹೆಚ್ಚಿನ ಅನುದಾನ ನೀಡಿದೆ. ಇದಲ್ಲದೆ ಬೆಂಗಳೂರು (ಗ್ರಾ), ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ಸರ್ಕಾರ ಸದರಿ ವರ್ಷದಲ್ಲಿ ಅನುದಾನವನ್ನು ಪುರ್ನನಿಗದಿ ಪಡಿಸಿದ್ದು, ಇದಕ್ಕನುಗುಣವಾಗಿ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ನಿಗದಿಪಡಿಸಿರುವುದಿಲ್ಲ. ಆದ ಕಾರಣ, ರಾಜ್ಯದ ಪಾಲು ಬಿಡುಗಡೆ ಮಾಡಲು ತೊಂದರೆಯಾಗಿದ್ದು, ಓದಲಾಗಿದೆ (3)ರ ಆದೇಶದಲ್ಲಿ ಲಭ್ಯತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿತ್ತು. ಇದಲ್ಲದೆ ಚಾಮರಾಜನಗರ ಜಿಲ್ಲಾ ಪಂಚಾಯತಿಗೆ ರಾಜ್ಯದ ಆಯವ್ಯಯದಲ್ಲಿ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ, ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ಲಭ್ಯತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗಿತ್ತು. ಆದುದರಿಂದ ರಾಜ್ಯದ ಪಾಲು ಬಿಡುಗಡೆ ಮಾಡಲು ಬಿಜಾಪುರ ರೂ.22,88,000, ಕೊಡಗು ರೂ.8,19,000, ಕೊಪ್ಪಳ ರೂ.25,85,000, ಮಂಡ್ಯ ರೂ.30,76,000, ರಾಯಚೂರು ರೂ.23,65,000, ತುಮಕೂರು ರು.21,01,000 ಜಿಲ್ಲಾ ಪಂಚಾಯತ್‌ಗಳಲ್ಲಿ ಉಳಿಯಬಹುದಾದ ಒಟ್ಟು ರೂ.1,32,34,000ಗಳನ್ನು ಪುನರ್ವಿನಿಯೋಗಿಸಿಕೊಂಡು ಬಾಗಲಕೋಟೆ, ಬೆಂಗಳೂರು ಗ್ರಾ, ಚಿಕ್ಕಬಳ್ಳಾಪುರ, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ರಾಮನಗರ ಜಿಲ್ಲಾ ಪಂಚಾಯತ್‌ಗಳಿಗೆ ನೀಡಲು ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಓದಲಾದ (2)ರ ಆದೇಶದಲ್ಲಿ ಒಪ್ಪಿರುತ್ತಾರೆ. ಈ ಅನುದಾನದೊಂದಿಗೆ ಜಿಲ್ಲೆಯಲ್ಲಿ ಉಳಿದಿರುವ ಅನುದಾನವನ್ನು ಉಪಯೋಗಿಸಿಕೊಂಡು ಒಟ್ಟು ರೂ.1,36,60,000 ಗಳನ್ನು ಬಿಡುಗಡೆಗೊಳಿಸಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 65 ಎಸ್‌ಜೆವೈ 2008, ಬೆಂಗಳೂರು, ದಿನಾಂಕ:11ನೇ ಮಾರ್ಚ್, 2009

ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಲೆಕ್ಕ ಶೀರ್ಷಿಕೆ 2501-01-198-6-01 ಯಡಿ 2008-2009ನೇ ಸಾಲಿಗೆ ರಾಜ್ಯ ಸರ್ಕಾರವು ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ರಾಮನಗರ ಜಿಲ್ಲಾ ಪಂಚಾಯತ್‌ಗಳಿಗೆ ರೂ.1,36,60,000ಗಳನ್ನು (ರೂ. ಒಂದು ಕೋಟಿ ಮೂವತ್ತಾರು ಲಕ್ಷದ ಅರವತ್ತು ಸಾವಿರ ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಕ್ರ. ಸಂ.	ಜಿಲ್ಲಾ ಪಂಚಾಯತ್ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ ಕೋಡ್	ಪುನರ್ವಿನಿಯೋಗದ ನಂತರ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ)
1.	ಬಾಗಲಕೋಟೆ	461	2900ZZ0001	32,06,000
2.	ಬೆಂಗಳೂರು ಗ್ರಾಮಾಂತರ	402	0300 ZZ8001	6.21,000
3.	ಚಿಕ್ಕಬಳ್ಳಾಪುರ	453	0600 ZZ0001	19,50,000
4.	ಚಾಮರಾಜನಗರ	456	1000 ZZ0001	20,46,000

ಕ್ರ. ಸಂ.	ಜಿಲ್ಲಾ ಪಂಚಾಯತ್ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಪುನರ್ವಿನಿಯೋಗದ ನಂತರ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ)
5.	ದಕ್ಷಿಣ ಕನ್ನಡ	409	1900 ZZ0047	44,21,000
6.	ರಾಮನಗರ	452	0400 ZZ0001	14,16,000
			ಒಟ್ಟು ರೂ:	1,36,60,000

ಷರತ್ತುಗಳು:

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ಬಾಗಲಕೋಟೆ ಜಿಲ್ಲಾ ಪಂಚಾಯತಿಗೆ ಎಸ್‌ಜಿಎಸ್‌ವೈ ವಿಶೇಷ ಯೋಜನೆಯಡಿ ಬಿಡುಗಡೆ ಮಾಡಿರುವ ಅನುದಾನವನ್ನು skill based training for rural BPL families in Bagalkote and Bijapur Districts through BVS Sangha ಯೋಜನೆಗೆ ಕೇಂದ್ರ ಸರ್ಕಾರ ಮಂಜೂರಾತಿ ನೀಡಿ ಮೊದಲನೇ ಕಂತಿನ ಅನುದಾನ ರೂ.96,19,000 ಬಿಡುಗಡೆಗೊಳಿಸಿದ್ದು, ಅದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ.32,06,000 ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗೆ ಎಸ್‌ಜಿಎಸ್‌ವೈ ವಿಶೇಷ ಯೋಜನೆಯಡಿ ಬಿಡುಗಡೆ ಮಾಡಿರುವ ಅನುದಾನವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ income generation activities in farm and non farm sector ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ಮೂರನೇ ಹಾಗೂ ಅಂತಿಮ ಕಂತಿನ ಅನುದಾನ ರೂ.1,32,60,000 ಬಿಡುಗಡೆ ಮಾಡಿದ್ದು, ಅದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ರೂ.44,21,000 ಬಿಡುಗಡೆ ಮಾಡಲಾಗಿದೆ.

ಬಾಗಲಕೋಟೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳು ಬಿಡುಗಡೆ ಮಾಡುವ ಅನುದಾನವನ್ನು ಮಂಜೂರಾದ ಎಸ್‌ಜಿಎಸ್‌ವೈ ವಿಶೇಷ ಯೋಜನೆಯ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು. ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ:14.07.2005ರನ್ವಯ ಜಿಲ್ಲಾ ಪಂಚಾಯತ್ ನಿಧಿಗೆ ಜಮಾ ಮಾಡುವ ಬಿಳಿ ಬಣ್ಣದ ಸಹಾಯ ಅನುದಾನದ ಬಿಲ್ ಮೂಲಕ ಪಡೆದು ಎಸ್‌ಜಿಎಸ್‌ವೈ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ಚೆಕ್ ಮೂಲಕ ಸಂಬಂಧಪಟ್ಟ ವಿಶೇಷ ಯೋಜನೆ ಮಂಜೂರಾದ ಸಂಸ್ಥೆಗಳಿಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯು ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75:25ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501-ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು–01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6–ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2008–09 (2501–01–198–6–01) ಖಾತೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ:14.07.2005ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಬಾಗಲಕೋಟೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳನ್ನು ಹೊರತುಪಡಿಸಿ ಉಳಿದ 4 ಜಿಲ್ಲಾ ಪಂಚಾಯತಿಗಳು ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 14 ಎಸ್‌ಜಿವೈ 2007 ದಿನಾಂಕ:18.04.2007ರ ಸೂಚನೆಯಂತೆ ಕ್ರಮಕ್ಕೈಗೊಳ್ಳುವುದು.

ಬಿಡುಗಡೆ ಮಾಡುವ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಾಡುವುದು.

ಬಾಗಲಕೋಟೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳು ಆಯಾ ಮಾಹೆಯ ಪ್ರಗತಿ ವರದಿಯನ್ನು ವಿಶೇಷ ಯೋಜನೆ ಅನುಷ್ಠಾನಗೊಳಿಸುವ ಸಂಸ್ಥೆಯಿಂದ ಪಡೆದು ಹಾಗೂ ಉಳಿದ 4 ಜಿಲ್ಲಾ ಪಂಚಾಯತಿಗಳು ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ online ಗೆ upload ಮಾಡಿ ಪ್ರತಿಯನ್ನು ಸ್ವಉದ್ಯೋಗ ಕಾರ್ಯಕ್ರಮಗಳ ಕೋಶಕ್ಕೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ: ಗ್ರಾಅಪ 94 ಪಿಜಿಎಸ್ 2009 ದಿನಾಂಕ:11.03.2009ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಪಿ.ಆರ್.877

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೧೮, ೨೦೦೯ (ಜ್ಯೇಷ್ಠ ೨೮, ಶಕ ವರ್ಷ ೧೯೩೧)	ಸಂಚಿಕೆ ೨೫

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 101 ಎಸ್‌ಎಫ್‌ಸಿ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಶ್ರೀಮತಿ ಮಧುಶರ್ಮ, ಐಎಫ್‌ಎಸ್., ಅರಣ್ಯ ಸಂರಕ್ಷಣಾಧಿಕಾರಿಗಳು-। ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಖಾಸಗಿ ವಿದೇಶ ಪ್ರವಾಸ ಕೈಗೊಳ್ಳಲು ದಿನಾಂಕ:25.5.2009 ರಿಂದ 6.6.2009ರ ವರೆಗೆ ಒಟ್ಟು 13 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ಶ್ರೀಮತಿ ಮಧು ಶರ್ಮ, ಐಎಫ್‌ಎಸ್., ಇವರು ರಜೆ ಮೇಲೆ ಹೋಗಿರದಿದ್ದರೆ ಅರಣ್ಯ ಸಂರಕ್ಷಣಾಧಿಕಾರಿಗಳು- । ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಹುದ್ದೆಯಲ್ಲಿಯೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 642

ಅಶೋಕ್. ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-4)

ಅಧಿಸೂಚನೆ

ಸಂಖ್ಯೆ: ಸಿಆಸುಇ 492 ಸಅಸೇ 2008, ಬೆಂಗಳೂರು, ದಿನಾಂಕ: 21ನೇ ಮೇ 2009

ಡಾ: ಕೆ.ವಿ ರಾಜು, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರು ಇವರ ಗುತ್ತಿಗೆ ಆಧಾರದ ನೇಮಕಾತಿಯನ್ನು ದಿನಾಂಕ:10.6.2009 ರಿಂದ ಮುಖ್ಯಮಂತ್ರಿಯವರ ಪದಾವಧಿಯವರೆಗೆ ಅಥವಾ ಅವರ ಸೇವೆಯು ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಅಗತ್ಯವಿರುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಸಲು ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 492 ಸಅಸೇ 2008, ದಿನಾಂಕ:23.8.2008ರಲ್ಲಿ ನಿಗಧಿಪಡಿಸಿರುವ ಸೇವಾ ಷರತ್ತು ಮತ್ತು ನಿಬಂಧನೆಗಳೇ ಮುಂದುವರಿದ ಅವಧಿಗೂ ಅನ್ವಯವಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 643

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

II -F1-B/B

ಅಧಿಸೂಚನೆ

ಸಂಖ್ಯೆ: ಸಿಆಸುಇ 596 ಸಅಸೇ 2007, ಬೆಂಗಳೂರು, ದಿನಾಂಕ: 20ನೇ ಮೇ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಸೇವೆಗೆ ಸೇರಿದ ಶ್ರೀ ಬಿ.ಡಿ. ಓಬಪ್ಪ, ಉಪ ಕಾರ್ಯದರ್ಶಿ, ಇವರಿಗೆ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯವರಾದ ಶ್ರೀ ಎಸ್.. ಚಂದ್ರಶೇಖರಪ್ಪ ಇವರಿಗೆ ಉಪ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿದ ದಿನಾಂಕ:26.5.2007 ರಿಂದಲೇ ಪೂರ್ವಾನ್ವಯವಾಗಿ ಕರ್ನಾಟಕ ನಾಗರೀಕ ಸೇವಾ (ಆರ್‌ಪಿಪಿ) ನಿಯಮಾವಳಿ 1957 ನಿಯಮ 2(ಎ) ರನ್ವಯ ಬಡ್ತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 644

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಸೇರ್ಪಡೆ ಆದೇಶ

ಸಂಖ್ಯೆ: ಸಿಆಸುಇ 492 ಸಅಸೇ 2008, ಬೆಂಗಳೂರು, ದಿನಾಂಕ: 21ನೇ ಮೇ 2009

ಡಾ: ಕೆ.ವಿ. ರಾಜು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಗುತ್ತಿಗೆ ಆಧಾರದ ನೇಮಕಾತಿ ಕುರಿತ ಷರತ್ತು ಮತ್ತು ನಿಬಂಧನೆಗಳನ್ನು ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ:ಡಿಪಿಎಆರ್ 492 ಎಸ್ ಜಿಓ 2008, ದಿನಾಂಕ:23.8.2008ರ ಐಟಂ ಮೂರಕ್ಕೆ ಈ ಕೆಳಕಂಡ ವಾಕ್ಯವೃಂದವನ್ನು ದಿನಾಂಕ:23.8.2008 ರಿಂದಲೇ ಜಾರಿಗೆ ಬರುವಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

> He shall also be entitled to get Rs .7,350/- treating as interim relief temporarily till the revision of UGC pay scale, The difference of pay shall be adjusted after revision of UGC pay scale.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 645

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

PERSONNEL AND ADMINISTRATIVE REFORMS SECRETARIAT

NOTIFICATION

No: DPAR 390 SAS 2008, Bangalore, dated: 22nd May, 2009

Consequent upon retrospective promotion to the Junior Administrative Grade of IAS viz., in the scale of pay Band-3 Rs 15600-39100+GP 7600, w.e.f. 1-1-2008 vide Government Order of even number dated:5-5-2009, the post of Deputy Secretary to Government in Revenue Department held by Dr. V. Chandrasekar,m IAS (KN 99) is redesignated as Joint Secretary to Government, Revenue Department.

By order and in the name of the Governor of Karnataka

K.G. ANANTHA

P.R. 646

Under Secretary to Government

Department of Personnel and Administrative Reforms (Services-I)

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 218 ಪಿಪಿಇ 2009, ಬೆಂಗಳೂರು, ದಿನಾಂಕ.14ನೇ ಮೇ 2009

ಈ ಕೆಳಕಂಡ ತ:ಖ್ತೆಯ ಅಂಕಣ (2)ರಲ್ಲಿ ಸೂಚಿಸಿರುವ ನ್ಯಾಯಾಲಯಗಳಲ್ಲಿ ತ:ಖ್ತೆಯ ಅಂಕಣ (3) ಮತ್ತು (4)ರಲ್ಲಿ ನಮೂದಿಸಿರುವ ಪ್ರಕರಣ ಮತ್ತು ಪ್ರತಿಪ್ರಕರಣಗಳು ದಾಖಲಾಗಿರುತ್ತವೆ. ಆದ ಕಾರಣ ಅಂಕಣ (4)ರಲ್ಲಿ ನಮೂದಿಸರುವ ಪ್ರತಿ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಅಂಕಣ (5)ರಲ್ಲಿ ಸೂಚಿಸಿರುವ ಅಭಿಯೋಜಕರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಿದೆ.

ಕ್ರ.ಸಂ	ನ್ಯಾಯಾಲಯದ ಹೆಸರು	ಪ್ರಕರಣ ಸಂಖ್ಯೆ Sc/ cc/Spl.cc	ಪ್ರತಿ ಪ್ರಕರಣ ಸಂಖ್ಯೆ Sc/ cc/ Spl.cc	ಪ್ರತಿ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು
1	ಅಪರ ಜೆಎಂಎಫ್‌ಸಿ ನ್ಯಾಯಾಲಯ, ದೇವನಹಳ್ಳಿ.	856/07	543/07	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ,ಹೊಸಕೋಟೆ
2	ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕನಕಪುರ	986/03	985/03	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ರಾಮನಗರ
3	ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬಾಗೇಪಲ್ಲಿ.	248/08	249/08	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ,ಗೌರಿಬಿದನೂರು
4	ಜೆಎಂಎಫ್‌ಸಿ ನ್ಯಾಯಾಲಯ, ನವಲಗುಂದ	101/07	200/07	ಸಹಾಯಕ ಸರ್ಕಾರಿ ಅಭಿಯೋಜಕರು,4ನೇ ಜೆಎಂಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
5	ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ,ಸೋಮವಾರಪೇಟೆ	213/08	224/08	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಮಡಿಕೇರಿ
6	2ನೇ ಜೆಎಂಎಫ್‌ಸಿ ನ್ಯಾಯಾಲಯ, ಚಿತ್ರದುರ್ಗ.	1574/06	1532/06	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು,ಸಿಜೆಎಂ ನ್ಯಾಯಾಲಯ, ಚಿತ್ರದುರ್ಗ
		1183/08	1184/08	
7	4ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು.	782/08	785/08	ಸಹಾಯಕ ಸರ್ಕಾರಿ ಅಭಿಯೋಜಕರು,3ನೇ ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು
8	ಜೆಎಂಎಫ್‌ಸಿ ನ್ಯಾಯಾಲಯ, ಸಿಂಧಗಿ.	92/08	16/08	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಇಂಡಿ
9	ಜೆಎಂಎಫ್‌ಸಿ ನ್ಯಾಯಾಲಯ, ರಾಮದುರ್ಗ	40/08	66/08	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಸವದತ್ತಿ.
		83/08	84/08	
10	ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ.	474/08	29/09	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಹಿರಿಯೂರು.
11	ಜೆಎಂಎಫ್‌ಸಿ ನ್ಯಾಯಾಲಯ, ಗೋಕಾಕ್	983/05	1193/05	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಹುಕ್ಕೇರಿ.
12	3ನೇ ತ್ವರಿತ ವಿಲೇವಾರಿ ನ್ಯಾಯಾಲಯ, ಮಂಡ್ಯ.	120/06	121/08	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಮಂಡ್ಯ
13	ಜೆಎಂಎಫ್‌ಸಿ ನ್ಯಾಯಾಲಯ, ಸಿಂಧನೂರು.	69/08	68/08	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಮಾನ್ವಿ
		196/07	191/07	

14	ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ	32/05	2/06	ಅಭಿಯೋಗ ಉಪ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು.
15	ಅಪರ ಜೆಎಂಎಫ್‌ಸಿ ನ್ಯಾಯಾಲಯ, ಮಡಿಕೇರಿ	2085/08	2107/08	ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ, ಮಡಿಕೇರಿ.
16	ಜೆಎಂಎಫ್‌ಸಿ ನ್ಯಾಯಾಲಯ, ಚಾಮರಾಜನಗರ.	63/08	65/08	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಗುಂಡ್ಲುಪೇಟೆ.
17	3ನೇ ಜೆಎಂಎಫ್‌ಸಿ ನ್ಯಾಯಾಲಯ, ಬೆಳಗಾವಿ.	120/08	106/08	ಸಹಾಯಕ ಸರ್ಕಾರಿ ಅಭಿಯೋಜಕರು,4ನೇ ಜೆಎಂಎಫ್‌ಸಿ ನ್ಯಾಯಾಲಯ, ಬೆಳಗಾವಿ
18	2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಳಗಾವಿ	121/08	278/08	1ನೇ ಅಧಿಕ ಸರ್ಕಾರಿ ಅಭಿಯೋಜಕರು, 1ನೇ ಆಧಿಕ ಜಿಲ್ಲಾ ಮತ್ತು ಸತ ನ್ಯಾಯಾಲಯ, ಬೆಳಗಾವಿ
19	ಜೆಎಂಎಫ್‌ಸಿ ನ್ಯಾಯಾಲಯ, ಶಿಕಾರಿಪುರ	113/05	242/05	ಸಹಾಯಕ ಸರ್ಕಾರಿ ಅಭಿಯೋಜಕರು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ
		204/05	205/05	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 634

ಕೆ.ಸಿ.ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಕಾ ಮತ್ತು ಸು ಕಾಫಿಪೋಸ ಮತ್ತು ಅಭಿ)

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 175 ಎನ್‌ಸಿಇ 2008, ಬೆಂಗಳೂರು, ದಿನಾಂಕ: 26ನೇ ಮೇ 2009

ಶ್ರೀ ಸತೀಶ್ ಜೆ. ಕಶ್ಯಪ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಮತ್ತು ಅನ್ಯಕರ್ತವ್ಯದ ಮೇಲೆ ಮಾನ್ಯ ಇಂಧನ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ಇವರು ಇಂಧನ ಇಲಾಖೆಯಲ್ಲಿ ದಿನಾಂಕ:5.11.2008 ರಿಂದ ದಿನಾಂಕ:19.12.2008ರ ವರೆಗೆ ಸ್ಥಳ ನಿರೀಕ್ಷಣೆಗೆ ಕಾಯ್ದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 8(15)(ಎಫ್) ರನ್ವಯ ಕಡ್ಡಾಯ ನಿರೀಕ್ಷಣಾ ಅವಧಿಯೆಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 649

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 25 ಅಪಸೇ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಸಾಮಾಜಿಕ ಅರಣ್ಯ ಉಪ ವಿಭಾಗ ಅರಸೀಕೆರೆ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಂ.ಆರ್. ಮಂಜುನಾಥ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಇವರಿಗೆ ದಿನಾಂಕ:31.5.2009 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 285(1)ಎ(2) ಪ್ರಕಾರ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಸರ್ಕಾರದ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 650

ವಡಗಾವೆ ಬಸವರಾಜ್

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಸೇವೆಗಳು)

ಅಧಿಸೂಚನೆ

ಸಂಖ್ಯೆ: ಅಪಜೀ 49 ಅಪಸೇ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಸಾಮಾಜಿಕ ಅರಣ್ಯ ಉಪ ವಿಭಾಗ ಗುಲ್ಬರ್ಗಾ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಂ. ಪುಟ್ಟಸ್ವಾಮಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶ್ರೀ ಕೆ.ಬಿ. ಗುರುಬಸವರಾಜ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರ ನಿಧನದಿಂದ ತೆರವಾಗಿರುವ ಹುದ್ದೆಯಲ್ಲಿ ನೇಮಿಸಲು ಇವರ ಸೇವೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 651

ವಡಗಾವೆ ಬಸವರಾಜ್

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಸೇವೆಗಳು)

HIGH COURT OF KARNATAKA

NOTIFICATION

NO. HCE 220/2009, Bangalore, Dated:20th May 2009

Sri Angisigiriyappa, Assistant Registrar of this office is permitted to retire from service voluntarily w.e.f. the afternoon of 20.5.2009 under Rule 285 (1) (a) of KCSRs.

By order of Hon'ble the Chief Justice

P.R. 652

R.B. BUDIHAL

Registrar Genaral

HIGH COURT OF KARNATAKA

NOTIFICATION

NO. HCE 1095/2008, Bangalore, Dated:7th May 2009

Sri P.M. Ananda krishna Setty, Deputy Registrar of this office is permitted to retire from service voluntarily w.e.f. the afternoon of 30.4.2009 under Rule 285 (1) (a) of KCSRs.

By order of Hon'ble the Chief Justice

P.R. 653

R.B. BUDIHAL

Registrar Genaral

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 184 ಎಂಎಸ್‌ಎಸ್ 2008(i), ಬೆಂಗಳೂರು, ದಿನಾಂಕ: 20ನೇ ಮೇ 2009

ಡಾ॥ ವಿ.ಡಿ. ಹಳಕಟ್ಟಿ, ಜಂಟಿ ನಿರ್ದೇಶಕರು (ಉಪ ಯೋಜನಾಡಳಿತಾಧಿಕಾರಿ) ಕೆ.ಹೆಚ್.ಎಸ್.ಆರ್.ಡಿ.ಪಿ. ಬೆಂಗಳೂರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಜಂಟಿ ನಿರ್ದೇಶಕರು (ಆಪ್ತ ಮಾಲಜಿ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಗೆ ವರ್ಗಾಯಿಸಿ ನೇಮಿಸಿದೆ.

ಸದರಿ ವೈದ್ಯಾಧಿಕಾರಿಗಳು ನೇಮಿಸಲಾದ ಸ್ಥಳದಲ್ಲಿ ಕೂಡಲೇ ಕಾರ್ಯ ವರದಿ ಮಾಡಿಕೊಂಡು ಸರ್ಕಾರವನ್ನೊಳಗೊಂಡಂತೆ ಸಂಬಂಧಪಟ್ಟವರೆಲ್ಲರಿಗೂ ಪ್ರಭಾರ ವರ್ಗಾವಣೆಪತ್ರವನ್ನು (ಸಿಟಿಸಿ) ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 654

ಪದ್ಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 16 ಆಸೇನಿ 2009, ಬೆಂಗಳೂರು, ದಿನಾಂಕ: 18ನೇ ಮೇ 2009

ಅಧಿಸೂಚನೆ ಸಂಖ್ಯೆ:ಸಿಆಸುಇ 28 ಆಅಸೇನಿ 2006 ದಿ:25.9.06 ರನ್ವಯ ದಿನಾಂಕ:31.7.07 ರಂದು 58 ವರ್ಷಗಳ ವಯೋಮಿತಿ ತಲುಪಿ ನಿವೃತ್ತಿ ಹೊಂದಿರುವ ಶ್ರೀ ಅಬ್ದುಲ್ ರಹೀಂ ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಇವರಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ :ಆಇ 15 ಎಸ್ಆರ್ಎಸ್ 97 ದಿ:20.9.1997 ರನ್ವಯ ನಿವೃತ್ತಿ ದಿನಾಂಕದಂದು ಅವರ ಹಕ್ಕಿನಲ್ಲಿರುವ 228 ದಿನಗಳು (ಇನ್ನೂರು ಇಪ್ಪತ್ತೆಂಟು ದಿನಗಳು) ಗಳಿಕೆ ರಜೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 118ಎ(1) ಹಾಗೂ, ಉಪ ನಿಯಮ (ಎ)(4) ರನ್ವಯ ನಗಧೀಕರಣಗೊಳಿಸಲು ಮಂಜೂರು ನೀಡಿದೆ.

ಶ್ರೀ ಅಬ್ದುಲ್ ರಹೀಂ ನಿವೃತ್ತ ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಇವರ ವಿರುದ್ಧ ಇದ್ದ ಎರಡು ಇಲಾಖಾ ವಿಚಾರಣೆಗಳಲ್ಲಿ ಆರೋಪ ಮುಕ್ತರಾಗಿದ್ದು, ಈಗ ಇವರ ವಿರುದ್ಧ ಯಾವುದೇ ಇಲಾಖೆ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲವೆಂದು ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 637

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-2)

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 414 ಪೊಸಿಪ 2008, ಬೆಂಗಳೂರು, ದಿನಾಂಕ: 18ನೇ ಮೇ 2009

ಸ್ಥಳ ನೇಮಕಾತಿ ನಿರೀಕ್ಷಣೆಯಲ್ಲಿರುವ ಶ್ರೀ ಬಿ.ಎಂ., ಪ್ರಸಾದ್, ಸಹಾಯಕ ಕಮಾಂಡೆಂಟ್, ಇವರನ್ನು 8ನೇ ಪಡೆ, ಕೆ.ಎಸ್.ಆರ್.ಪಿ., ಶಿವಮೊಗ್ಗ ಇಲ್ಲಿ ಖಾಲಿ ಇರುವ ಸಹಾಯಕ ಕಮಾಂಡೆಂಟ್ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಈ ಅಧಿಸೂಚನೆಯನ್ನು ಚುನಾವಣಾ ಆಯೋಗವು ದಿನಾಂಕ:14.5.2009ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 638

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 97 ಎಸ್ಎಫ್ಪಿ 2009, ಬೆಂಗಳೂರು, ದಿನಾಂಕ: 18ನೇ ಮೇ 2009

ಡಾ: ಎಂ.ಎಚ್. ಸ್ವಾಮಿನಾಥ್, ಐ.ಎಫ್.ಎಸ್. ಸರ್ಕಾರದ ಕಾರ್ಯದರ್ಶಿ (ಅರಣ್ಯ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಇವರಿಗೆ ವೈಯಕ್ತಿಕ ಕಾರಣಗಳ ನೆಲೆಯಲ್ಲಿ ದಿನಾಂಕ:18.5.2009 ರಿಂದ ಅಥವಾ ರಜೆ ಉಪಯೋಗಿಸಿಕೊಂಡ ದಿನಾಂಕದಿಂದ ಅನ್ವಯಿಸುವಂತೆ 11 ದಿನಗಳ ಗಳಿಕೆ ರಜೆಯನ್ನು ಸರ್ಕಾರವು ಮಂಜೂರು ಮಾಡಿದೆ.

ಸದರಿ ರಜಾ ಅವಧಿಯಲ್ಲಿ ಶ್ರೀ ಕನ್ವರ್ ಪಾಲ್, ಐ.ಎಫ್.,ಎಸ್. ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಇವರನ್ನು ಸರ್ಕಾರದ ಕಾರ್ಯದರ್ಶಿ "(ಅರಣ್ಯ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಈ ಹುದ್ದೆಯ ಅಧಿಕ ಪ್ರಭಾರದಲ್ಲಿ ನೇಮಿಸಲಾಗಿದೆ.

ಡಾ:ಎಂ.ಎಚ್. ಸ್ವಾಮಿನಾಥ್ ಐ.ಎಫ್.ಎಸ್. ಇವರು ರಜೆ ಮೇಲೆ ಹೋಗಿರದಿದ್ದರೆ, ಸರ್ಕಾರದ ಕಾರ್ಯದರ್ಶಿ, (ಅರಣ್ಯ), ಅರಣ್ಯ. ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು, ಹುದ್ದೆಯಲ್ಲಿಯೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 639

ಅಶೋಕ್ ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-IV)

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 101 ಎಸ್‌ಎಫ್‌ಸಿ 2009, ಬೆಂಗಳೂರು, ದಿನಾಂಕ: 23ನೇ ಮೇ 2009

ಶ್ರೀ ರಾಜೀವ್ ರಂಜನ್, ಐಎಫ್‌ಎಸ್., ಅರಣ್ಯ ಸಂರಕ್ಷಣಾಧಿಕಾರಿಗಳು–II ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಖಾಸಗಿ ವಿದೇಶ ಪ್ರವಾಸ ಕೈಗೊಳ್ಳಲು ದಿನಾಂಕ:25.5.2009 ರಿಂದ 10.6.2009ರ ವರೆಗೆ ಒಟ್ಟು 17 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ಶ್ರೀ ರಾಜೀವ್ ರಂಜನ್, ಐಎಫ್ ಎಸ್., ಇವರು ರಜೆ ಮೇಲೆ ಹೋಗಿರದಿದ್ದರೆ ಅರಣ್ಯ ಸಂರಕ್ಷಣಾಧಿಕಾರಿಗಳು– II ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಹುದ್ದೆಯಲ್ಲಿಯೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 641

ಅಶೋಕ್ .ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–4)

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 95 ಎಸ್‌ಎಫ್‌ಪಿ 2009, ಬೆಂಗಳೂರು, ದಿನಾಂಕ: 25ನೇ ಮೇ 2009

ಶ್ರೀ ರಾಜ್ ಕಿಶೋರ್ ಸಿಂಗ್, ಐಎಫ್‌ಎಸ್., ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯಕಾರಿ ನಿರ್ದೇಶಕರು (ಯೋಜನೆ ಮತ್ತು ವ್ಯಾಪಾರಾಭಿವೃದ್ಧಿ)., ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಬೆಂಗಳೂರು ಇವರಿಗೆ ಖಾಸಗಿ ವಿದೇಶ ಪ್ರವಾಸ ಕೈಗೊಳ್ಳಲು ದಿನಾಂಕ:25.5.2009ರಿಂದ 6.6.2009ರವರೆಗೆ ಒಟ್ಟು 13 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದೆ.

ಶ್ರೀರಾಜ್ ಕಿಶೋರ್ ಸಿಂಗ್, ಐಎಫ್‌ಎಸ್, ಇವರು ರಜೆ ಮೇಲೆ ಹೋಗಿರದಿದ್ದರೆ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕಾರ್ಯಕಾರಿ ನಿರ್ದೇಶಕರು (ಯೋಜನೆ ಮತ್ತು ವ್ಯಾಪಾರಾಭಿವೃದ್ಧಿ), ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಬೆಂಗಳೂರು ಹುದ್ದೆಯಲ್ಲಿಯೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 655

ಅಶೋಕ್ .ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–4)

ಅಧಿಸೂಚನೆ

ಸಂಖ್ಯೆ: ಸಿಆಸುಇ 76 ಎಸ್‌ಎಫ್‌ಪಿ 2009, ಬೆಂಗಳೂರು, ದಿನಾಂಕ: 26ನೇ ಮೇ 2009

ದಿನಾಂಕ:29.4.2009ರ ಅಧಿಸೂಚನೆ ಸಂಖ್ಯೆ:ಸಿಆಸುಇ 76 ಎಸ್‌ಎಫ್‌ಪಿ 2009 ನ್ನು ಮುಂದುವರೆಸಿ ಶ್ರೀ ಕೆ.ಎಸ್ ಅರಳೀಕಟ್ಟಿ, ಐ.ಎಫ್.ಎಸ್., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾವೇರಿ ಇವರಿಗೆ ವೈಯಕ್ತಿಕ ಕಾರಣಗಳ ನೆಲೆಯಲ್ಲಿ ದಿನಾಂಕ:17.5.2009ರಿಂದ 23.5.2009 ರವರೆಗೆ 17 ದಿನಗಳ ವಿಸ್ತರಿಸಿದ ಗಳಿಕೆ ರಜೆಯನ್ನು ಘಟನೋತ್ತರವಾಗಿ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 656

ಅಶೋಕ್ .ಪಿ. ಅತ್ರೆ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–4)

PERSONNEL AND ADMINISTRATIVE REFORMS SECRETARIAT

NOTIFICATION

No: DPAR 145 SPS 2008(II), Bangalore, dated: 25th May, 2009

The following IPS officers of 1996 batch borne on karnavtaka Cadre are promoted to officiate in the Selection Grade of IPS viz.,in the scale of pay of Rs. 37400-67000 plus Grade Pay Rs .8700/- with immediate effect and they are continued in the posts presently held by them.

Sl.No.	Name of the officer and present post held	Reference to the vacancy against which promotion is accorded
1	Sri Seemant Kumar Singh Superintendent of Police, Bellary District, Bellary	Promoted in regular line in the cadre post of Superintendent of Police, Bellary District, Bellary
2	Sri R. Hitendra Superintendent of Police, C.B.I. Bangalore (on central deputation)	He is accorded proforma promotion to the Selection Grade of IPS with reference to promotion of his junior Sri Bijay Kumar Singh, IPS.
3	Sri Bijay Kumar Sigh Deputy Commissioner of Police, East Division Bangalore City	Promoted in regular line in the cadre post of Deputy Commissioner of Police, East Division Bangalore City
4	Sri. P. Harishekaran Assistant Inspector General of Police, Crimes, Bangalore	Promoted in regular line in the cadre post of Assistant Inspector General of Police, Crimes Bangalore.

By order and in the name of the Governor of Karnataka

ASHOK P. ATRE

P.R. 660

Under Secretary to Government

Department of Personnel and Administrative Reforms (Services-IV)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 5 ಎಲ್‌ಎಜಿ 2009, ಬೆಂಗಳೂರು, ದಿನಾಂಕ: 25ನೇ ಮೇ 2009

ಅಡ್ವೋಕೇಟ್ ಜನರಲ್ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿಗಳಿಗೆ ರೂ 14,050–25,050 ವೇತನ ಶ್ರೇಣಿಯಲ್ಲಿ ಸಹಾಯಕ ಆಡಳಿತ ಅಧಿಕಾರಿ, ಹುದ್ದೆಗೆ ಮುಂಬಡ್ತಿ ನೀಡಿ, ಈ ಕೆಳಕಂಡಂತೆ ವರ್ಗಾಯಿಸಿ, ಬೆಂಗಳೂರು (ಮುಖ್ಯ ಕಛೇರಿ) ಹಾಗೂ ಘಟಕ ಕಛೇರಿ ಧಾರವಾಡ, ಇಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಿ ನೇಮಿಸಲಾಗಿದೆ.

ಕ್ರ.ಸಂ	ಹೆಸರು ಮತ್ತು ಪದನಾಮ ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ	ಮುಂಬಡ್ತಿ ನೀಡಿ ನಿಯೋಜಿಸಲಾದ ಸ್ಥಳ
1	ಶ್ರೀ ಎನ್. ಧ್ರುವ, ಶಾಖಾಧಿಕಾರಿ, ಅಡ್ವೋಕೇಟ್ ಜನರಲ್ ಘಟಕ ಕಛೇರಿ, ಧಾರವಾಡ	ಸಹಾಯಕ ಆಡಳಿತಾಧಿಕಾರಿ, ಅಡ್ವೋಕೇಟೆ ಜನರಲ್ ಘಟಕ ಕಛೇರಿ, ಧಾರವಾಡ (ಶ್ರೀ ಬಿ.ವಿ. ಚಲಪತಿ, ಇವರು ಸ್ವಯಂ ನಿವೃತ್ತಿ ಹೊಂದಿ ತೆರವಾದ ಖಾಲಿ ಹುದ್ದೆಗೆ)
2	ಶ್ರೀ ಪಿ. ತಿಪ್ಪೇರುದ್ರಪ್ಪ ಶಾಖಾಧಿಕಾರಿ, ಅಡ್ವೋಕೇಟ್ ಜನರಲ್ ಘಟಕ ಕಛೇರಿ, ಧಾರವಾಡ	ಸಹಾಯಕ ಆಡಳಿತಾಧಿಕಾರಿ, ಅಡ್ವೋಕೇಟ್ ಜನರಲ್ ಮುಖ್ಯ ಕಛೇರಿ, ಬೆಂಗಳೂರು (ಶ್ರೀ ಆರ್.ಎಸ್. ಅಬ್ಬಿಗೆರೆ ಇವರು ವರ್ಗಾವಣೆ ಯಿಂದ ತೆರವಾದ ಖಾಲಿ ಹುದ್ದೆಗೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 662

ಇ. ಶಿವಾನಂದ

ಸರ್ಕಾರದ ಅಧೀನ ಕಾರ್ಯದರ್ಶಿ, (ಆಡಳಿತ–1)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಜೂನ್ ೧೮, ೨೦೦೯ (ಜೇಷ್ಠ ೨೮, ಶಕ ವರ್ಷ ೧೯೩೧)	ಸಂಚಿಕೆ ೨೫

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಪೊಲೀಸ್ ಇಲಾಖೆ

ಪೊಲೀಸ್ ಕಮೀಷನರ್‌ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

ಅಧಿಸೂಚನೆ

ಸಂಖ್ಯೆ: 1/ಡಿಸಿಪಿ/ಸಂ.ಪೂ/2009, ಬೆಂಗಳೂರು, ದಿನಾಂಕ:8ನೇ ಫೆಬ್ರವರಿ, 2009

ಬೆಂಗಳೂರು ನಗರ-ಸಂಚಾರ ಆಡುಗೋಡಿ ಉಪವಿಭಾಗ ವ್ಯಾಪ್ತಿಗೆ ಬರುವಂತೆ ಇತ್ತೀಚಿಗೆ ನೂತನವಾಗಿ ತೆರೆಯಲಾಗಿರುವ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯು ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ಈ ಠಾಣಾ ವ್ಯಾಪ್ತಿಯಲ್ಲಿ 7ನೇ ರಾಷ್ಟ್ರೀಯ ಹೆದ್ದಾರಿ ಹೊಸೂರು ರಸ್ತೆ ಇರುವುದರಿಂದ ಸಂಚಾರ ದಟ್ಟಣೆ ಅತ್ಯಧಿಕವಾಗಿರುವುದಲ್ಲದೆ ಸಹಜವಾಗಿಯೇ ಈ ರಸ್ತೆಯ ಆಜುಬಾಜುಗಳಲ್ಲಿ ಬಡಾವಣೆಗಳು, ಬೃಹತ್ ಹಾಗೂ ಸಣ್ಣ ಪ್ರಮಾಣದ ಕಾರ್ಖಾನೆಗಳು, ಮಾಹಿತಿ ತಂತ್ರಜ್ಞಾನ ಕಂಪನಿಗಳು, ಸರ್ಕಾರಿ ಹಾಗೂ ಸರ್ಕಾರೇತರ ಕಛೇರಿಗಳು ಇರುವುದರಿಂದ ಹಾಗೂ ಹೊರರಾಜ್ಯಗಳಿಗೆ ಈ ಭಾಗದಿಂದಲೇ ಬಾರೀ ಪ್ರಮಾಣದ ಟ್ರಕ್‌ಗಳು ಸಂಚರಿಸಬೇಕಾಗಿರುತ್ತದೆ. ಈ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಸಂಚಾರದ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿದಾಗ ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುವ ಟೆಕ್‌ನಿಕ್ ರಸ್ತೆ, ಪಿಲಿಕಾನ್ ರಸ್ತೆ ಮತ್ತು ಪಲ್ಲವಿ ಗ್ರಾಂಡ್ ಹೋಟೆಲ್ ಮುಂಭಾಗದ ರಸ್ತೆಗಳಲ್ಲಿ ಸಂಚಾರದಲ್ಲಿ ತೀವ್ರತರನಾದ ಸ್ಥಗಿತ, ಹೆಚ್ಚಿನ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಸುಗಮ ಸಂಚಾರ ಹಾಗೂ ಅಪಘಾತಗಳನ್ನು ತಡೆಗಟ್ಟುವಲ್ಲಿ ಈ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೆ ತರುವುದು ಅತ್ಯವಶ್ಯಕವಾಗಿ ಕಂಡುಬಂದಿರುತ್ತೆ.

ಆದ್ದರಿಂದ ಕಲಂ 115 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಂಕರಬಿದರಿ, ಐಪಿಎಸ್, ಪೊಲೀಸ್ ಕಮೀಷನರ್, ಬೆಂಗಳೂರು ನಗರ ಆದ ನಾನು ಸಂಚಾರ ಪೂರ್ವ ವಿಭಾಗದ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಸಂಬಂಧ ಕೆಳಕಂಡಂತೆ ಸಂಚಾರ ಮಾರ್ಪಾಡುಗಳನ್ನು ಮಾಡಿ ಆದೇಶಿಸಿರುತ್ತೇನೆ.

1) **ಟೆಕ್‌ನಿಕ್ ರಸ್ತೆ-5ನೇ ಕ್ರಾಸ್ ರಸ್ತೆ:** ಈ ರಸ್ತೆಯು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ಜಂಕ್ಷನ್‌ನಿಂದ ಟೆಕ್‌ನಿಕ್ ಜಂಕ್ಷನ್‌ವರೆಗೆ ಪೂರ್ವ ಪಶ್ಚಿಮಾಭಿಮುಖವಾಗಿ ಹಾದು ಹೋಗಿದ್ದು ಈ ರಸ್ತೆಯು ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುತ್ತೆ. ಈ ದ್ವಿಮುಖ ಸಂಚಾರ ವ್ಯವಸ್ಥೆಯಲ್ಲಿ ಟೆಕ್ನಿಕ್ ಜಂಕ್ಷನ್‌ನಿಂದ ಪೊಲೀಸ್ ಠಾಣೆ ರಸ್ತೆ ಜಂಕ್ಷನ್‌ವರೆಗಿನ ಸಂಚಾರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ವಿರುದ್ಧ ದಿಕ್ಕಿನ ಸಂಚಾರವನ್ನು ಅಂದರೆ ಪೊಲೀಸ್ ಠಾಣೆ ರಸ್ತೆ ಜಂಕ್ಷನ್‌ನಿಂದ ಟೆಕ್‌ನಿಕ್ ಜಂಕ್ಷನ್‌ವರೆಗೆ ಸಾಗುವ ಸಂಚಾರವನ್ನು ನಿಷೇಧಿಸಿದೆ.

2) **ಪಿಲಿಕಾನ್ ರಸ್ತೆ:** ಈ ರಸ್ತೆಯು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ರಸ್ತೆ ಜಂಕ್ಷನ್‌ನಿಂದ ಪಿಲಿಕಾನ್ ಮಾರ್ಗವಾಗಿ 3 ಎಂ ಜಂಕ್ಷನ್‌ವರೆಗೆ ಪೂರ್ವ ಪಶ್ಚಿಮಾಭಿಮುಖವಾಗಿ ಹಾದು ಹೋಗಿದ್ದು ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುತ್ತೆ.

ಈ ದ್ವಿಮುಖ ಸಂಚಾರ ವ್ಯವಸ್ಥೆಯಲ್ಲಿ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ರಸ್ತೆ ಜಂಕ್ಷನ್‌ನಿಂದ 3 ಎಂ ಜಂಕ್ಷನ್‌ವರೆಗಿನ ಸಂಚಾರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ವಿರುದ್ಧ ದಿಕ್ಕಿನ ಸಂಚಾರವನ್ನು ಅಂದರೆ 3ಎಂ ಜಂಕ್ಷನ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ರಸ್ತೆ ಜಂಕ್ಷನ್‌ವರೆಗೆ ಸಾಗುವ ಸಂಚಾರವನ್ನು ನಿಷೇಧಿಸಿದೆ.

3) **ಪಲ್ಲವಿ ಗ್ರಾಂಡ್ ಹೋಟೆಲ್ ಮುಂಭಾಗದ ರಸ್ತೆ:** ಎಲೆಕ್ಟ್ರಾನಿಕ್ ಸಿಟಿ ಒಳಭಾಗದಲ್ಲಿರುವ ಯಲ್ಸಿಯಾ ರಸ್ತೆ ಯಕೋಗೋವಾ ಜಂಕ್ಷನ್‌ನಿಂದ ಪಲ್ಲವಿ ಗಾರ್ಡನ್ ಮುಖಾಂತರ ಇನ್‌ಫೋಸಿಸ್ ರಸ್ತೆ- ಸಿಮನ್ಸ್ ಜಂಕ್ಷನ್‌ವರೆಗೆ ದ್ವಿಮುಖ ಸಂಚಾರ ವ್ಯವಸ್ಥೆಯಿಂದ ಕೂಡಿರುತ್ತೆ. ಈ ದ್ವಿಮುಖ ಸಂಚಾರ ವ್ಯವಸ್ಥೆಯಲ್ಲಿ ಯಕೋಗೋವಾ ಜಂಕ್ಷನ್‌ನಿಂದ ಸಿಮನ್ಸ್ ಜಂಕ್ಷನ್‌ವರೆಗಿನ ಸಂಚಾರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡು ವಿರುದ್ಧ ದಿಕ್ಕಿನ ಸಂಚಾರವನ್ನು ಅಂದರೆ ಸಿಮನ್ಸ್ ಜಂಕ್ಷನ್‌ನಿಂದ ಯಕೋಗೋವಾ ಜಂಕ್ಷನ್‌ವರೆಗೆ ಸಾಗುವ ಸಂಚಾರವನ್ನು ನಿಷೇಧಿಸಿದೆ.

ಅಂತೆಯೇ ಕಲಂ 116 ಮೋಟಾರ್ ವಾಹನ ಕಾಯ್ದೆ 1988 ಹಾಗೂ ಕಲಂ 4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ಮೇಲ್ಕಂಡ ನಿರ್ಬಂಧನೆಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಸ್ಥಳೀಯ ಅಧಿಕಾರಿಗಳಿಗೆ ಆದೇಶಿಸಿರುತ್ತೇನೆ.

ಈ ಮೇಲ್ಕಂಡ ಸಂಚಾರ ಮಾರ್ಪಾಡುಗಳನ್ನು ದಿನಾಂಕ:09.02.2009 ರಿಂದ ಜಾರಿಗೆ ಬರುವಂತೆ ಆದೇಶಿಸಿರುತ್ತೇನೆ.

ಈ ಆದೇಶವನ್ನು ನಾನು ಈ ದಿನ ಅಂದರೆ ದಿನಾಂಕ:08.02.2009 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಿರುತ್ತೇನೆ.

ಶಂಕರ ಬಿದರಿ

ಪಿ.ಆರ್.199 ಪೊಲೀಸ್ ಕಮೀಷನರ್, ಬೆಂಗಳೂರು ನಗರ.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ

ಅಧಿಸೂಚನೆ

ಸಂಖ್ಯೆ: ಎ3-ಸಿಓಎನ್-ಸಿಆರ್-10/2008-09, ದಿನಾಂಕ:16ನೇ ಫೆಬ್ರವರಿ, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದ ಕೆಳಕಂಡ ವಾಹನವನ್ನು ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ. ಸಂ.	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1.	ವಲಯ ಅರಣ್ಯಾಧಿಕಾರಿ, ತರೀಕೆರೆ ಅರಣ್ಯ ಮೊಕದ್ದಮೆ ನಂ.132/2008-09 ದಿನಾಂಕ:06.02.2008	ಮಾರುತಿ ಓಮಿನಿ ವ್ಯಾನ್ ಸಂ:ಕೆಎ-18-ಎಂಬಿ-4748	ಇಂಜಿನ್ ನಂ. F8BIN2024935	ST91IN400299
2.	ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಅರಣ್ಯ ಮೊಕದ್ದಮೆ ನಂ.78/2008-09, ದಿನಾಂಕ:09.02.2008	ಮೋಟಾರ್ ಬೈಕ್ ಸುಜುಕಿ ಮ್ಯಾಕ್ಸ್ 100 ಆರ್.ಸಂ.ಕೆಎ-14-ಜೆ-3577	ಇಂಜಿನ್ ನಂ. 1610M748233	1610F703013

ಈ ಮೇಲ್ಕಂಡ ವಾಹನದ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾಧ್ಯತೆಗಳನ್ನು ಈ ಕೆಳಸಹಿ ಮಾಡಿರುವವರ ಸಮ್ಮುಖದಲ್ಲಿ ಈ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳ ಸಾಗಾಣಿಕೆ ಮಾಡಲು ಉಪಯೋಗಿಸಿದಕ್ಕಾಗಿ ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ಈ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಎರಡನೇ ತಿದ್ದುಪಡಿ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಟಿ. ಹೀರಾಲಾಲ್

ಪಿ.ಆರ್.247

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ ವಿಭಾಗ, ಭದ್ರಾವತಿ

ಅಧಿಸೂಚನೆ

ಸಂಖ್ಯೆ: ಎ3-ಸಿಓಎನ್-ಸಿಆರ್-12/2008-09, ದಿನಾಂಕ:25ನೇ ಫೆಬ್ರವರಿ, 2009

ಭದ್ರಾವತಿ ವಿಭಾಗದ ವ್ಯಾಪ್ತಿಯಲ್ಲಿ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದ ಕೆಳಕಂಡ ವಾಹನವನ್ನು ವಲಯ ಅರಣ್ಯಾಧಿಕಾರಿ, ಚನ್ನಗಿರಿ ವಲಯದ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್-71(ಎ)ರ ಪ್ರಕಾರ ಕ್ರಮ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

ಕ್ರ. ಸಂ.	ಮೊಕದ್ದಮೆ ಸಂಖ್ಯೆ	ವಾಹನಗಳ ವಿವರ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1.	ವಲಯ ಅರಣ್ಯಾಧಿಕಾರಿ, ಚನ್ನಗಿರಿ ಅರಣ್ಯ ಮೊಕದ್ದಮೆ ನಂ.144/2008-09 ದಿನಾಂಕ:02.02.2008	ಒಂದು ನೀಲಿ ಬಣ್ಣದ ಮಾರುತಿ ಓಮಿನಿ ವ್ಯಾನ್ ಸಂ:ಜಿಎ-02-ಸಿ-5770	ಇಂಜಿನ್ ನಂ.9692	ಕಂಡು ಬಂದಿರುವುದಿಲ್ಲ

ಡಿಕ್ಕಿಯಲ್ಲಿ 7 ಕಾರ್ಡ್ ಬೋರ್ಡ್ ಪೆಟ್ಟಿಗೆಗಳಿದ್ದು ಅವುಗಳಲ್ಲಿ ಮದ್ಯ ತುಂಬಿರುವುದು ಕಂಡುಬಂದಿದ್ದು, ಕಾರನ್ನು ಚಾಲನೆ ಮಾಡುತ್ತಿದ್ದವರನ್ನು ಹೆಸರು ಕೇಳಲಾಗಿ ಎಲಿಯಣ್ಣ ರೈ ಎಂಬುದಾಗಿದ್ದು, ಹಿಂಭಾಗದ ಸೀಟಿನಲ್ಲಿ ಕೆ.ಪಿ. ಪ್ರವೀಣ್, ತಂದೆ ಸೋಮಪ್ಪ, ಬೆಟ್ಟಗೇರಿ ಗ್ರಾಮ ಮತ್ತು ವಿ.ಪಿ. ಲೋಕೇಶ್ ತಂದೆ ಚೆನ್ನಪ್ಪ ಕಣ್ಣಂಡಬಾಣೆ ಎಂಬುವವರು ಕುಳಿತಿದ್ದರು, ವಾಹನದ ಡಿಕ್ಕಿಯನ್ನು ತೆರೆದು ನೋಡಲಾಗಿ ಅದರಲ್ಲಿ 4 ಕಾರ್ಡ್‌ಬೋರ್ಡ್ ಪೆಟ್ಟಿಗೆಗಳಲ್ಲಿ 180 ಎಂಎಲ್‌ನ 48 ಅಂದರೆ ಒಟ್ಟು 196 New Janatha Brandy ಮದ್ಯದ ಬಾಟಲಿಗಳಿದ್ದವು ಹಾಗೂ ಇನ್ನು 3 ಪೆಟ್ಟಿಗೆಗಳಲ್ಲಿ 180 Ml x 144 New Janatha Rum ಇರುವುದು ಕಂಡು ಬಂದಿರುತ್ತದೆ. ಸದರಿ ಮದ್ಯ ಬಾಟಲಿಗಳನ್ನು ಸಾಗಿಸಲು ಸರ್ಕಾರದ ಪರವಾನಗಿ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ತಿಳಿಸಿದ ಮೇರೆಗೆ 15+15 x 180ml ಸೀಸೆಗಳನ್ನು ರಸಾಯನಿಕ ಪರೀಕ್ಷೆಗೆ ಮಾದರಿ ತೆಗೆಯಲಾಗಿರುತ್ತದೆ. ತದನಂತರ ರಹದಾರಿ ಇಲ್ಲದೆ ಮದ್ಯ ಸಾಗಾಣಿಕೆ ಮಾಡುತ್ತಿದ್ದದ್ದು ಅಬಕಾರಿ ಕಾನೂನಿಗೆ ವಿರೋಧವಾಗಿ ಕಂಡು ಬಂದಿದ್ದರಿಂದ ಆರೋಪಿಗಳನ್ನು ಮತ್ತು ಅಂಬಾಸಿಡರ್ ಕಾರನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡು ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965ರ ನಿಬಂಧನೆ 11, 13, 14, R/w 34, 38 ರಂತೆ ಮೊ.ಸಂ.34/2002-03, ದಿನಾಂಕ:29.01.2003 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮದ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

ತದನಂತರ ದಿನಾಂಕ:31.01.2003ರಂದು ವಾಹನದ ಮಾಲೀಕರೆಂದು ಶ್ರೀ ಪುರುಷೋತ್ತಮ, ಮಂಗಳಾದೇವಿನಗರ, ಮಡಿಕೇರಿ, ಕೊಡಗು ಜಿಲ್ಲೆ ಇವರು ಅರ್ಜಿಯನ್ನು ಸಲ್ಲಿಸಿ ವಾಹನವನ್ನು ಬಿಡುಗಡೆಗೊಳಿಸಿ ಕೊಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ದಿನಾಂಕ:06.02.2003ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಪತ್ರ ಬರೆದು ವಾಹನದ ಮಾಲೀಕತ್ವದ ವಿವರ ಕೇಳಲಾಗಿರುತ್ತದೆ. ಮತ್ತೊಮ್ಮೆ ಸದರಿಯವರು ಅವರ ವಕೀಲರ ಮೂಲಕ ದಿನಾಂಕ:06.02.2003ರಂದು ಪ್ರಸ್ತಾವನೆಯನ್ನು ಸಲ್ಲಿಸಿ ವಾಹನವು ಅಬಕಾರಿ ಕಾಯ್ದೆ ಉಲ್ಲಂಘನೆಯ ಪ್ರಕರಣದಲ್ಲಿ ಬಾಗಿಯಾಗಿದ್ದು ಚಾಲಕನು ಮಾಲೀಕರ ಗಮನಕ್ಕೆ ಬಾರದಂತೆ ಮಾಡಿದ ಅಪರಾಧವಾಗಿರುತ್ತದೆ. ಕಾರನ್ನು ಬಾಡಿಗೆಗೆಂದು ಚಾಲಕನಿಗೆ ನೀಡಿದ್ದು, ಬಾಡಿಗೆಯಿಂದ ಬಂದ ಹಣದಿಂದ ಅವರ ಸಂಸಾರದ ಜೀವನ ನಿರ್ವಹಣೆ ನಡೆಯಬೇಕಾಗಿರುವುದರಿಂದ ಮತ್ತು ವಾಹನವನ್ನು ತೆರೆದ ಪ್ರದೇಶದಲ್ಲಿ ನಿಲ್ಲಿಸಿರುವುದರಿಂದ ಚಾಲನೆಯಿಲ್ಲದೇ ವಾಹನದ ಬಿಡಿಭಾಗಗಳು, ಹಾಳಾಗಿ ವಾಹನ ಕೆಡುವ ಸಂಭವವಿರುವುದರಿಂದ ವಾಹನವಿಲ್ಲದೇ ಜೀವನ ನಿರ್ವಹಣೆ ಕಷ್ಟಸಾಧ್ಯವಾದ್ದರಿಂದ ಸದರಿ ವಾಹನವನ್ನು ಮಧ್ಯಂತರಿಕವಾಗಿ ಬಿಡುಗಡೆ ಮಾಡಿಕೊಡಬೇಕಾಗಿ ಮನವಿ ಮಾಡಿಕೊಂಡಿರುತ್ತಾರೆ.

ದಿನಾಂಕ:13.02.2003ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನದ ಮಾಲೀಕತ್ವಕ್ಕೆ ಸಂಬಂಧಿಸಿದ ಬಿ ಎಕ್ಸ್‌ಟ್ರಾಕ್ಟ್‌ನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವಂತೆ ದಿನಾಂಕ:01.07.1994 ರಿಂದ ಪ್ರಕರಣ ದಾಖಲಾಗುವವರೆಗೂ ಕೆ.ಪುರುಷೋತ್ತಮ ಗೌಡ, ತಂದೆ ಶೇಷಪ್ಪ ಗೌಡ, ಮಂಗಳಾದೇವಿನಗರ, ಮಡಿಕೇರಿ ಇವರು ವಾಹನ ಸಂಖ್ಯೆ: ಸಿಎನ್‌ಒ-1017ರ ಅಧಿಕೃತ ಮಾಲೀಕರೆಂದು ತಿಳಿದುಬಂದಿರುತ್ತದೆ.

ಆದುದರಿಂದ ವಾಹನದ ಮಾಲೀಕರ ಮತ್ತು ವಕೀಲರ ಕೋರಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಚರ್ಚಿಸಿ ಸರ್ಕಾರದ ಆದಾಯದ ಭದ್ರತೆಯ ಹಿತ ದೃಷ್ಟಿಯಿಂದ ಮತ್ತು ವಾಹನವು ಕೊಡಗಿನ ಹವಾಮಾನದ ವೈಪರೀತ್ಯಕ್ಕೆ ಮಳೆ ಬಿಸಿಲಿನಿಂದ ಹಾಳಾಗುವ ಸಂಭವವಿರುವುದರಿಂದ ವಾಹನಕ್ಕೆ ಮೌಲ್ಯವನ್ನು ನಿಗದಿಪಡಿಸುವ ಬಗ್ಗೆ ವರದಿ ಪಡೆಯಲು ತೀರ್ಮಾನಿಸಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:06.02.2003 ರಂದು ಪತ್ರ ಬರೆದು ಸದರಿ ವಾಹನವನ್ನು ಪರಿಶೀಲಿಸಿ ಅಂದಿನ ಮಾರ್ಕೆಟ್ ಮೌಲ್ಯವನ್ನು ನಿಗದಿಪಡಿಸುವಂತೆ ಕೋರಲಾಗಿತ್ತು. ಕೋರಿಕೆಯ ಮೇರೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪರಿಶೀಲಿಸಿ ದಿನಾಂಕ:22.02.2003 ರಂದು ವಶಪಡಿಸಿಕೊಂಡ ವಾಹನಕ್ಕೆ ರೂ.20,000/- (ರೂಪಾಯಿ ಇಪ್ಪತ್ತು ಸಾವಿರ) ಮೌಲ್ಯ ನಿಗದಿಪಡಿಸಿ ದೃಢೀಕರಣ ಪತ್ರ ನೀಡಿರುತ್ತಾರೆ. ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಸದರಿ ವಾಹನಕ್ಕೆ ನಿಗದಿಪಡಿಸಿದ ಮೌಲ್ಯದ ಆಧಾರದ ಮೇಲೆ ಶ್ರೀ ಪುರುಷೋತ್ತಮ ಗೌಡ ತಂದೆ ಶೇಷಪ್ಪ ಗೌಡ ಅಂದಿನ ವಿಳಾಸ ರವಿಕಲಾ ಪ್ರೆಸ್, ಸುಳ್ಯ ಇವರಿಗೆ ಅಬಕಾರಿ ಕಾನೂನಿನಂತೆ ಕೆಲವು ಷರತ್ತುಗಳನ್ನು ವಿಧಿಸಿ, ಷರತ್ತುಗಳ ಆಧಾರದ ಹಿನ್ನೆಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಿಧಿಸಿದ ವಾಹನದ ಮೌಲ್ಯಕ್ಕೆ ಸಮನಾಗಿ ರೂ.20,000/-ಗಳ 2 ವರ್ಷ ಅವಧಿಯುಳ್ಳ ಬ್ಯಾಂಕ್ ಗ್ಯಾರಂಟಿ ಸಂ:01/03, ದಿನಾಂಕ:27.02.2003ನ್ನು ವಿಜಯ ಬ್ಯಾಂಕ್, ಗದ್ದೆಹಳ್ಳ ಶಾಖೆ, ಸುಂಟಿಕೊಪ್ಪ, ಇವರಿಂದ ಭದ್ರತೆಯಾಗಿ ಪಡೆದುಕೊಂಡು ದಿನಾಂಕ:28.02.2003 ರಂದು ಆದೇಶ ಸಂ:ಇಎಕ್ಸ್‌ಇ:3:ಡಿಟಿಸಿಆರ್‌ಎಂ:361:2002-03 ರಂತೆ ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಲಾಯಿತು.

ಸದರಿ ಪ್ರಕರಣದ ತನಿಖಾಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು, ಉಪವಿಭಾಗ, ಮಡಿಕೇರಿ ಇವರು ತನಿಖೆಯನ್ನು ಪ್ರಾರಂಭಿಸಿ ಸದರಿ ವಶಪಡಿಸಿಕೊಂಡ ಮದ್ಯದಿಂದ ತೆಗೆದ ಮಾದರಿಯನ್ನು ಮಂಗಳೂರಿನ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳಿಸಲಾಗಿದ್ದು, ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರಕಾರ ಸದರಿ ಮದ್ಯವು ಮಾನವ ಸೇವನೆಗೆ ಯೋಗ್ಯವಿರುವುದಾಗಿ ದೃಢೀಕರಣ ಪತ್ರ ನೀಡಿ ತನಿಖೆಯನ್ನು ಮುಕ್ತಾಯಗೊಳಿಸಿ ಅಬಕಾರಿ ಉಪ ನಿರೀಕ್ಷಕರು, ಉಪವಿಭಾಗ, ಮಡಿಕೇರಿ ಇವರು ವರದಿ ಮ.ಉ.ವ.ಕ್ರೈಂ.ಸಂ:47/02-03, ದಿನಾಂಕ:24.03.2003ರ ಮೂಲಕ ವರದಿಯನ್ನು ಸಲ್ಲಿಸಿ ಸದರಿ ರಾಸಾಯನಿಕ ಪರೀಕ್ಷೆ ಹೊರತುಪಡಿಸಿ ಉಳಿದ 55.080 ಲೀಟರ್ ಮದ್ಯವನ್ನು ವಿಲೇವಾರಿ ಮಾಡಲು ಆದೇಶ ನೀಡಬೇಕಾಗಿ

ಕೋರಿಕೊಂಡ ಮೇರೆಗೆ ದಿನಾಂಕ:24.03.2003ರಂದು ಸದರಿ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಆದೇಶ ನೀಡಲಾಗಿರುತ್ತದೆ.

ಬ್ಯಾಂಕ್ ಗ್ಯಾರೆಂಟಿ ವಾಯಿದೆ ಅವಧಿ ದಿನಾಂಕ:27.02.2005ಕ್ಕೆ ಮುಕ್ತಾಯವಾಗುವುದರಿಂದ ಅವಧಿಯನ್ನು ವಿಸ್ತರಿಸಿ ಸಲ್ಲಿಸುವಂತೆ ದಿನಾಂಕ:10.02.2005ರಂದು ವಾಹನದ ಮಾಲೀಕರಿಗೂ, ಮ್ಯಾನೇಜರ್, ವಿಜಯಬ್ಯಾಂಕ್, ಗದ್ದೆಹಳ್ಳ ಶಾಖೆ, ಸುಂಟಿಕೊಪ್ಪ ಇವರಿಗೆ ಪತ್ರ ಬರೆಯಲಾಗಿತ್ತು. ಅಲ್ಲದೆ ಸದರಿ ಪತ್ರವನ್ನು ಅಬಕಾರಿ ನಿರೀಕ್ಷಕರು, ಮಡಿಕೇರಿ ವಲಯ ಇವರು ಖುದ್ದಾಗಿ ಜಾರಿ ಮಾಡುವಂತೆ ಸೂಚಿಸಲಾಗಿತ್ತು. ವಾಹನದ ಮಾಲೀಕರು ಬ್ಯಾಂಕ್ ಗ್ಯಾರೆಂಟಿ ವಾಯಿದೆಯನ್ನು ಕಾಲಕಾಲಕ್ಕೆ ಸರಿಯಾಗಿ ಅವಧಿಯನ್ನು ವಿಸ್ತರಿಸದೆ ಹಾಗೂ ವಿಚಾರಣೆಗೆ ಹಾಜರಾಗದೇ ವಾಹನದ ಮಧ್ಯಂತರ ಬಿಡುಗಡೆಯ ಸಮಯದಲ್ಲಿ ವಿಧಿಸಿದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸದರಿ ಬ್ಯಾಂಕ್ ಗ್ಯಾರೆಂಟಿ ಹಣವನ್ನು ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಕೊಡಗು ಜಿಲ್ಲೆ, ಮಡಿಕೇರಿ ಇವರ ಹೆಸರಿಗೆ ಕಳುಹಿಸಿಕೊಡಲು ದಿನಾಂಕ:16.02.2005ರಂದು ಕೋರಿ ಮತ್ತೊಮ್ಮೆ ಪತ್ರ ಬರೆಯಲಾಗಿರುತ್ತದೆ. ಅದಕ್ಕೆ ಬ್ಯಾಂಕ್ ಮ್ಯಾನೇಜರ್‌ರವರು ಹಣವನ್ನು ಕಳುಹಿಸಿಕೊಡದ ಕಾರಣ, ದಿನಾಂಕ:27.02.2003ರಂದು ನೀಡಲಾದ ಬ್ಯಾಂಕ್ ಗ್ಯಾರಂಟಿ ಹಣವನ್ನು ಇನ್‌ವೋಕ್ ಮಾಡಿಕೊಳ್ಳಲಾಗಿರುತ್ತದೆ. ಅಲ್ಲದೆ ಸದರಿ ಹಣವನ್ನು ಡಿ.ಡಿ. ಮುಖಾಂತರ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ರವರ ಹೆಸರಿಗೆ ಕಳುಹಿಸಿಕೊಡುವ ಬಗ್ಗೆ ಸದರಿ ಪತ್ರವನ್ನು ಬ್ಯಾಂಕ್ ಮ್ಯಾನೇಜರ್ ರವರಿಗೆ ನೋಂದಣಿ ಅಂಚೆ ಮುಖಾಂತರ ಕಳುಹಿಸಲಾಗಿರುವುದಲ್ಲದೆ ಖುದ್ದಾಗಿ ಜಾರಿ ಮಾಡಲು ಸಂಬಂಧಪಟ್ಟ ಮಡಿಕೇರಿ ವಲಯದ ಅಬಕಾರಿ ನಿರೀಕ್ಷಕರಿಗೆ ನಿರ್ದೇಶಿಸಲಾಗಿರುತ್ತದೆ. ಅದರಂತೆ ಅವರು ಜಾರಿ ಮಾಡಿ ಅವರಿಂದ ಸ್ವೀಕೃತಿಯನ್ನು ಪಡೆದ ಪತ್ರವನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ತದನಂತರ ಈ ಪತ್ರಕ್ಕೆ ಸಂಬಂಧಿಸಿದ ಬ್ಯಾಂಕಿನಿಂದ ಬ್ಯಾಂಕ್ ಗ್ಯಾರೆಂಟಿ ಸಂ:1/03, ದಿನಾಂಕ:27.02.2003ರ ಬಾಬ್ತು ರೂ.20,000 ಹಣವನ್ನು ಡಿ.ಡಿ. ಸಂ:340428 ಮೂಲಕ ಕಳುಹಿಸಿದ್ದು, ಈ ಪ್ರಾಧಿಕಾರಕ್ಕೆ ತಲುಪಿರುವ ಮೇರೆಗೆ ಸದರಿ ಹಣವನ್ನು ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಕೊಡಗು ಜಿಲ್ಲೆ, ಮಡಿಕೇರಿ ರವರ ಹೆಸರಿನ ಖಾತೆ ಸಂ:10599751835 ರಲ್ಲಿ ಭದ್ರತೆಯಾಗಿ ಇರಿಸಲಾಗಿರುತ್ತದೆ.

ದಿನಾಂಕ:24.03.2005 ರಂದು ಪುರುಷೋತ್ತಮ, ಸುಳ್ಯರವರು ಅರ್ಜಿ ಸಲ್ಲಿಸಿರುವುದಲ್ಲದೆ ಬಳಕೆದಾರರ ಹಿತರಕ್ಷಣಾ ವೇದಿಕೆ, ಸುಳ್ಯ ರವರಿಂದಲೂ ಕೂಡ ಅರ್ಜಿಯನ್ನು ಸಲ್ಲಿಸಿ ಫಿರ್ಯಾದುದಾರರ ಠೇವಣಿಯನ್ನು ಹಿಂದಿರುಗಿಸಲು ಮತ್ತು ಪ್ರಕರಣವನ್ನು ತ್ವರಿತಗತಿಯಲ್ಲಿ ಇತ್ಯರ್ಥಗೊಳಿಸಲು ಪತ್ರದ ಮೂಲಕ ಕೋರಿರುತ್ತಾರೆ.

ದಿನಾಂಕ:07.01.2005ರಂದು ಪ್ರಕರಣದ ವಿಚಾರಣೆಗಾಗಿ ನೋಟೀಸ್ ನೀಡಲಾಗಿತ್ತು. ಸದರಿ ಪ್ರತಿಯನ್ನು ಶ್ರೀ ಪುರುಷೋತ್ತಮ ರವರ ಪರವಾಗಿ ದಿನಾಂಕ:24.03.2005ರಂದು ಅರ್ಜಿ ಸಲ್ಲಿಸಿರುವಂತಹ ಅಧ್ಯಕ್ಷರು, ಬಳಕೆದಾರರ ಹಿತರಕ್ಷಣಾ ವೇದಿಕೆ, ಶ್ರೀರಾಮಪೇಟೆ, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ, ಇವರಿಗೂ ಕೂಡ ನೋಂದಾಣಿ ಅಂಚೆ ಮೂಲಕ ಕಳಿಸಲಾಗಿರುತ್ತದೆ. ಸದರಿ ದಿನಾಂಕದಂದು ಶ್ರೀ ಪುರುಷೋತ್ತಮ ರಾಗಲೀ ಅಥವಾ ಸಂಬಂಧಿಸಿದ ವೇದಿಕೆಯ ಅಧ್ಯಕ್ಷರಾಗಲೀ ಹಾಜರಾಗಿರುವುದಿಲ್ಲ. ದಿನಾಂಕ:06.05.2005ರಂದು ಮತ್ತೆ ವಿಚಾರಣೆಯನ್ನು ಈ ಪ್ರಾಧಿಕಾರದಲ್ಲಿ ನಿಗದಿಪಡಿಸಿ ಶ್ರೀ ಪುರುಷೋತ್ತಮ ರವರಿಗೆ ನೋಂದಾಣಿ ಅಂಚೆ ಮೂಲಕ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಲಾಗಿರುತ್ತದೆ. ಸದರಿಯವರಿಗೆ ಸ್ವೀಕೃತಿಯಾದ ಬಗ್ಗೆ ಸ್ವೀಕೃತಿ ಪತ್ರ ಬಂದಿರುತ್ತದೆ. ಆದರೆ ಸದರಿಯವರು ಹಾಜರಾಗಿರುವುದಿಲ್ಲ. ದಿನಾಂಕ:25.01.2007, 08.02.2007, 22.11.2008, 02.12.2008, 20.12.2008ರಂದು ವಿಚಾರಣೆಯನ್ನು ನಿಗದಿಪಡಿಸಿ ಪುರುಷೋತ್ತಮ ರವರು ನೀಡಿರುವ ವಿಳಾಸಕ್ಕೆ ನೋಂದಾಣಿ ಅಂಚೆ ಮತ್ತು ಸ್ವೀಕೃತಿ ಮೂಲಕ ಪತ್ರ ಕಳುಹಿಸಲಾಗಿದ್ದು, ಸದರಿಯವರು ಪತ್ರ ಪಡೆದುಕೊಂಡ ಬಗ್ಗೆ ಸ್ವೀಕೃತಿ ಬಂದಿರುತ್ತದೆ. ಆದರೂ ಕೂಡ ಪ್ರಾಧಿಕಾರದಲ್ಲಿ ನಡೆಯುವ ವಿಚಾರಣೆಗೆ ಅವರಾಗಲೀ ಅವರ ಪರ ವಕೀಲರಾಗಲಿ ಯಾರೂ ಹಾಜರಾಗಿರುವುದಿಲ್ಲ.

ಸದರಿ ವಾಹನದ ಮಾಲೀಕರು ಅಬಕಾರಿ ಅಕ್ರಮ ವ್ಯವಹಾರದಲ್ಲಿ ತೊಡಗಿರುವುದಲ್ಲದೇ ಸರ್ಕಾರಕ್ಕೆ ವಂಚನೆ ಮಾಡಿ ನಷ್ಟ ಉಂಟುಮಾಡುವ ಕೃತ್ಯದಲ್ಲಿ ಬಾಗಿಯಾಗಿರುವುದು ಹಾಗೂ ಶ್ರೀ ಪುರುಷೋತ್ತಮ ರವರು ವಾಹನವನ್ನು ಮಧ್ಯಂತರ ಬಿಡುಗಡೆಯ ಸಮಯದಲ್ಲಿ ವಿಧಿಸಲಾದ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದರಿಂದ ಸದರಿಯವರು ಕಾನೂನಿನ ಅರಿವಿದ್ದರೂ ಅಕ್ರಮ ಮದ್ಯ ಸಾಗಾಣಿಕೆಯಲ್ಲಿ ವಾಹನವನ್ನು ಉಪಯೋಗಿಸಿರುವುದು ಅವರ ಲಾಭಕ್ಕಾಗಿ ಮಾಡಿರುವಂತಹ ಕೃತ್ಯವಾಗಿರುವುದಾಗಿ ಈ ಪ್ರಾಧಿಕಾರವು ಅಭಿಪ್ರಾಯಕ್ಕೆ ಬಂದಿರುವುದರಿಂದ ಮತ್ತು ಆರ್.ಸಿ. ಮಾಲೀಕರು, ತಕ್ರೀರು ನಡೆಸಲು ಉತ್ಸುಕರಿಲ್ಲ ಎಂಬುದಾಗಿ ಪ್ರಾಧಿಕಾರದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ. ಪ್ರಕರಣದ ಸಂಬಂಧವಾಗಿ ಆರ್.ಸಿ. ಮಾಲೀಕರು ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಲು ವಿಫಲರಾಗಿರುವುದರಿಂದ ಸರ್ಕಾರದ ಪರ ಸಾಕ್ಷಿಗಳ ವಿಚಾರಣೆಯನ್ನು ಕೈಬಿಟ್ಟು ವಶಪಡಿಸಿಕೊಳ್ಳಲಾಗಿದ್ದ ಸದರಿ ವಾಹನದ ಮೌಲ್ಯಕ್ಕೆ ಸಂಬಂಧಪಟ್ಟ ಬ್ಯಾಂಕ್ ಗ್ಯಾರೆಂಟಿ ಹಣ ರೂ.20,000 ಸಾವಿರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ರಡಿಯಲ್ಲಿ ಪ್ರಕರಣಗಳನ್ನು ದಾಖಲು ಮಾಡುವಲ್ಲಿ ಆರೋಪಿಗಳು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಗಳು ಇಲ್ಲದಿದ್ದಲ್ಲಿ ಹಾಗೂ ಜಪ್ತು ಮಾಡಲಾದ ವಾಹನವನ್ನು ಜಪ್ತುಪಡಿಸಿದ

ಒಂದು ತಿಂಗಳೊಳಗೆ ಯಾವುದೇ ವ್ಯಕ್ತಿಯು ವಾಹನಕ್ಕೆ ಸಂಬಂಧಿಸಿದ ಕಾನೂನುಬದ್ಧವಾದ ದಾಖಲಾತಿಗಳೊಂದಿಗೆ ಮಾಲೀಕತ್ವವನ್ನು ಕೋರಿ ಪ್ರಾಧಿಕಾರದ ಮುಂದೆ ಬಾರದಿದ್ದಲ್ಲಿ ಹಾಗೂ ವಾಹನದ ಮಾಲೀಕನು ಸದರಿ ಪ್ರಕರಣಕ್ಕೆ ಸಂಬಂಧಿಸಿ ತಾನು ನಿರಾಪರಾಧಿ ಎಂಬುದನ್ನು ಸಾಕ್ಷ್ಯಾಧಾರದೊಂದಿಗೆ ಸೂಕ್ತ ದಾಖಲಾತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಲು ವಿಫಲರಾದ ಪಕ್ಷದಲ್ಲಿ ಅಂತಹ ಸ್ವತ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ರಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದಂತಹ ಸ್ವತ್ತುಗಳಾಗಿದ್ದಲ್ಲಿ ಈ ಪ್ರಾಧಿಕಾರವು ಅಕ್ರಮ ಮದ್ಯ ಸಾಗಾಣಿಕೆಗೆ ಒಳಪಡಿಸಿದ ಸ್ವತ್ತು/ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ಪ್ರಸ್ತುತ ಪ್ರಕರಣದಲ್ಲಿ ವಾಹನದ ಮಾಲೀಕರು ತಮ್ಮ ನಿರಾಪರಾಧಿತ್ವವನ್ನು ಸಾಬೀತುಪಡಿಸಲು ವಿಚಾರಣೆಗೆ ಹಾಜರಾಗಿರುವುದಿಲ್ಲ ಮತ್ತು ಈ ಬಗ್ಗೆ ಸಾಕ್ಷ್ಯಧಾರವನ್ನು ಒದಗಿಸುವಲ್ಲಿ ವಿಫಲರಾಗಿರುವುದು ದೃಢೀಕೃತವಾಗಿರುತ್ತದೆ. ಆದುದರಿಂದ ವಾಹನದ ಆರ್.ಸಿ. ಮಾಲೀಕರು ಅಬಕಾರಿ ಕಾಯಿದೆ ಕಾನೂನನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ವಾಹನ ಸಂಖ್ಯೆ: ಸಿಎನ್‌ಓ-1017 ನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗಿದ್ದು, ವಾಹನ ಮೌಲ್ಯಕ್ಕೆ ಸಮನಾದ ರೂ.20.000-(ಇಪ್ಪತ್ತು ಸಾವಿರ) ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವಾದ್ದರಿಂದ ಈ ಕೆಳಗಿನಂತೆ ಆದೇಶ.

ಆದೇಶ

ಈ ಮೇಲ್ಕಂಡಂತೆ ಪ್ರಕರಣದ ಮುಖ್ಯಾಂಶಗಳ ವಿವರಣೆಯ ಹಿನ್ನೆಲೆಯಲ್ಲಿ ಸಿ.ಎಲ್. ಜಯರಾಮ್, ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ, 1965ರ ಕಲಂ 43(ಎ)ನಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಉಪವಿಭಾಗ, ಮಡಿಕೇರಿ ಇವರು ಮೊಕದ್ದಮೆ ಸಂಖ್ಯೆ:34/2002-03, ದಿನಾಂಕ:29.01.2003ರಂದು ಜಪ್ತುಪಡಿಸಲಾಗಿರುವ ಅಂಬಾಸಿಡರ್ ಕಾರ್ ಸಂಖ್ಯೆ: ಸಿಎನ್‌ಓ-1017ರ ವಾಹನವನ್ನು ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶ ಇಂದು ಅಂದರೆ ದಿನಾಂಕ:23.12.2008ರಂದು ಬೆರಳಚ್ಚು ಮಾಡಿ ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಸಿ.ಎಲ್. ಜಯರಾಂ
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್.65

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಶಿವಮೊಗ್ಗ ವಿಭಾಗ ಶಿವಮೊಗ್ಗ

ಸುತ್ತೋಲೆ ಸಂಖ್ಯೆ: ಕಾಅ:ಲೋಇ:ಸಿಬ್ಬಂದಿ-4 ಮಾಹಿತಿ ಹಕ್ಕು 2005:2009-10 368 ದಿನಾಂಕ:26ನೇ ಮೇ, 2009

ಸರ್ಕಾರದ ಅಧಿಸೂಚನೆ ಸಂಖ್ಯೆ.ಲೋಇ:64:ಸ್ವೀಮರಃ05:ದಿನಾಂಕ:23-09-2005 ಹಾಗೂ ಲೋಇ.16: ಐಟಿಸಿ:08: 2750 ದಿನಾಂಕ:25-02-08 ಮತ್ತು ಮುಖ್ಯ ಇಂಜಿನಿಯರ್, ಸಂಕದ ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ. ಸಿಬಿಎಸ್: ಮಾಹಿತಿಹಕ್ಕು:ಕೈಪಿಡಿ:2005:ಇಎಸ್‌ಎಫ್:05-06 ದಿನಾಂಕ:19-09-2005 ಹಾಗೂ ಮುಖ್ಯ ಇಂಜಿನಿಯರ್ ಸಿಬಿಎಸ್:ಮಹಕಾ: 208:07-08: ದಿನಾಂಕ:20-03-2008ರ ಪರಿಷ್ಕೃತ ನಿರ್ದೇಶನದಂತೆ 2005ರ ಮಾಹಿತಿಹಕ್ಕು ಅಧಿನಿಯಮ-2ರ ಅಡಿಯಲ್ಲಿ ಲೋ.ಇ. ಮುಖ್ಯಸ್ಥರನ್ನು ಸಾರ್ವಜನಿಕ ಪ್ರಾಧಿಕಾರಿ ಎಂದು ನಾಮಾಂಕಿತ ಮಾಡಿ ಸರ್ಕಾರವು ನೇಮಿಸಿದೆ.

ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 5(2)ರ ಅಡಿಯಲ್ಲಿ ಇಲಾಖಾ ಮುಖ್ಯಸ್ಥರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರ ಕಛೇರಿಗಳಲ್ಲಿನ ಕಾರ್ಯ ವಿಧಾನದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಇಲಾಖಾ ಮುಖ್ಯಸ್ಥರು ಎಲ್ಲಾ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ಮತ್ತು ಸದರಿ ನಿಯಮ 5(1)ರ ಅಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದೂ ನೇಮಕ ಮಾಡಿರುತ್ತಾರೆ.

ಈ ಸಂಬಂಧ ಶಿವಮೊಗ್ಗ ಲೋ.ಇ ವಿಭಾಗದ ವ್ಯಾಪ್ತಿಗೆ ಸಂಬಂಧಿಸಿದಂತೆ ವಿಭಾಗ ಕಛೇರಿಯ ತಾಂತ್ರಿಕ ಸಹಾಯಕರನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ.) ಎಂದು ಕಾರ್ಯಪಾಲಕ ಇಂಜಿನಿಯರ್ ಇವರನ್ನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ.ಐ.ಓ.) ಎಂದು ಈ ಮೂಲಕ ನಾಮಾಂಕಿತ ಮಾಡಲಾಗಿದೆ. ಈ ಬಗ್ಗೆ ಈ ಕಛೇರಿಯಿಂದ ಮಾಹಿತಿಹಕ್ಕು ಕೈಪಿಡಿ-2005 ನ್ನು ಪ್ರಕಟಿಸಿದ್ದು ಅಧೀನ ಕಛೇರಿಗಳಾದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿಗಳಲ್ಲಿ ಇದೇ ರೀತಿಯಲ್ಲಿ ತಮ್ಮ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿಹಕ್ಕು ಕೈಪಿಡಿ 2005ನ್ನು ಪ್ರಕಟಿಸಿ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವಂತೆ ಡಿಪಿಸಿ / ಎನ್‌ಪಿಸಿ ಇವರಿಗೆ ತಿಳಿಸಲು ಸೂಚಿಸಿದೆ. ಶಿವಮೊಗ್ಗ ಲೋ.ಇ. ವಿಭಾಗ ಕಛೇರಿಯ ಮಾಹಿತಿಯನ್ನು ಈ ಮೂಲಕ ಪರಿಷ್ಕರಿಸಿ ಪ್ರಕಟಿಸಿದೆ.

ಜಿ.ಆರ್. ಚಂದ್ರಶೇಖರಪ್ಪ
ಕಾರ್ಯಪಾಲಕ ಅಭಿಯಂತರು,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಶಿವಮೊಗ್ಗ ವಿಭಾಗ, ಶಿವಮೊಗ್ಗ

ನಮೂನೆ

ಮಾಹಿತಿಹಕ್ಕು ಅಧಿನಿಯಮ 2005

ಕಾರ್ಯಪಾಲಕ ಇಂಜಿನಿಯರ್ ಲೋ ಬಂ ಮತ್ತು ಒ ಜ ಸಾ ಇಲಾಖೆ ಶಿವಮೊಗ್ಗ ವಿಭಾಗ, ಶಿವಮೊಗ್ಗ

ಮಾಹಿತಿಹಕ್ಕು ಅಧಿನಿಯಮ 2005 ಸೆಕ್ಷನ್ 5(1)(2)ರ ಅಡಿಯಲ್ಲಿ ಈ ಕಛೇರಿಯಿಂದ ನೇಮಿಸಲಾದ ಅಧಿಕಾರಿಗಳು ಸಾರ್ವಜನಿಕ ಸಂಪರ್ಕ ಅಧಿಕಾರಿಗಳಾಗಿರುತ್ತಾರೆ.

ಈ ಕಛೇರಿಯಲ್ಲಿ ಮಾಹಿತಿ ದಾಖಲೆಗಳನ್ನು ನೀಡುವ ಅಧಿಕಾರಿಗಳು ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1)ರ ಪ್ರಕಾರ

ಅಧಿಕಾರಿ ಹೆಸರು	**ಪದನಾಮ**
ಶ್ರೀ ಜಿ.ಅರ್. ಚಂದ್ರಶೇಖರಪ್ಪ	ಕಾರ್ಯಪಾಲಕ ಇಂಜಿನಿಯರ್, ಲೋ ಬಂ ಮತ್ತು ಒ ಜ ಸಾ ಇಲಾಖೆ ಶಿವಮೊಗ್ಗ ವಿಭಾಗ, ಶಿವಮೊಗ್ಗ, ದೂರವಾಣಿ ಸಂಖ್ಯೆ.08182-274942

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(2)ರ ಪ್ರಕಾರ

ಅಧಿಕಾರಿ ಹೆಸರು	**ಪದನಾಮ**
ಶ್ರೀ ಡಿ.ಎಸ್. ನಾಗರಾಜ್	ತಾಂತ್ರಿಕ ಸಹಾಯಕರು, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ ಬಂ ಮತ್ತು ಒ ಜ ಸಾ ಇಲಾಖೆ ಶಿವಮೊಗ್ಗ ವಿಭಾಗ, ಶಿವಮೊಗ್ಗ, ದೂರವಾಣಿ ಸಂಖ್ಯೆ.08182-274942

ಮೇಲಿನ ಅಧಿಕಾರಿಗಳು ಮಾಹಿತಿಯನ್ನು 30 ದಿನಗಳೊಳಗಾಗಿ ನೀಡದಿದ್ದಲ್ಲಿ ಅಥವಾ ಸಹಕರಿಸದಿದ್ದಲ್ಲಿ ದೂರನ್ನು ಮತ್ತು ಮೇಲ್ಮನವಿಯನ್ನು ಸೆಕ್ಷನ್ 19(1)ರ ಪ್ರಕಾರ ಈ ಕೆಳಕಂಡ ಅಧಿಕಾರಿಗಳಿಗೆ ನೀಡಬಹುದು.

ಅಧೀಕ್ಷಕ ಅಭಿಯಂತರು, ಲೋ ಬಂ ಮತ್ತು ಒ ಜ ಸಾ ಇಲಾಖೆ, ಶಿವಮೊಗ್ಗ ವೃತ್ತ, ಶಿವಮೊಗ್ಗ

ಕರ್ತವ್ಯದ ಹಾಜರಾತಿ

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ – 2005ರ ಸೆಕ್ಷನ್ 5(1)ರ ಪ್ರಕಾರ ಶ್ರೀ ಜಿ.ಆರ್ ಚಂದ್ರಶೇಖರಪ್ಪ ಕಾರ್ಯಪಾಲಕ ಇಂಜಿನಿಯರ್, ಆದ ನಾನು ವಿಶೇಷ ಸಾರ್ವಜನಿಕ ಮಾಹಿತಿ ಅಧಿಕಾರಿ (ಎಸ್.ಪಿ.ಐ.ಓ)ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 30-08-2007 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಸಹಿ:

ಪದನಾಮ: ಕಾರ್ಯಪಾಲಕ ಇಂಜಿನಿಯರ್,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಕರ್ತವ್ಯದ ಹಾಜರಾತಿ

ಮಾಹಿತಿ ಪಡೆಯುವ ಹಕ್ಕು ಅಧಿನಿಯಮ – 2005ರ ಸೆಕ್ಷನ್ 5(2) ರ ಪ್ರಕಾರ ಶ್ರೀ ಡಿ.ಎಸ್. ನಾಗರಾಜ್, ತಾಂತ್ರಿಕ ಸಹಾಯಕರು, ಆದ ನಾನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ (ಎ.ಪಿ.ಐ.ಓ)ಯಾಗಿ ಕರ್ತವ್ಯ ನಿರ್ವಹಿಸಲು ದಿನಾಂಕ: 17-11-2008 ರಂದು ಹೊಣೆಗಾರಿಕೆಯನ್ನು ಒಪ್ಪಿಕೊಂಡಿರುತ್ತೇನೆ.

ಸಹಿ:

ಪದನಾಮ: ತಾಂತ್ರಿಕ ಸಹಾಯಕರು,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಸುವರ್ಣ ಕರ್ನಾಟಕ – 2005

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಇಲಾಖೆ)

ಮಾಹಿತಿ ಹಕ್ಕು ಕೈಪಿಡಿ 2005 ಸೆಕ್ಷನ್ 4(1) (ಬಿ) ಅನ್ವಯ

ಕಾರ್ಯಪಾಲಕ ಇಂಜಿನಿಯರ್,

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,

ಶಿವಮೊಗ್ಗ ವಿಭಾಗ,ಶಿವಮೊಗ್ಗ

ಸುವರ್ಣ ಕರ್ನಾಟಕ – 2005

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,

ಶಿವಮೊಗ್ಗ ವಿಭಾಗ, ಶಿವಮೊಗ್ಗ.

ಮಾಹಿತಿ ಹಕ್ಕು ಕೈಪಿಡಿ – 2005 ಸೆಕ್ಷನ್ 4(1) (ಬಿ) ಅನ್ವಯ

1. ಸಂಸ್ಥೆಯ ಬಗ್ಗೆ ವಿವರಗಳು, ಕಾರ್ಯಗಳು ಮತ್ತು ಕರ್ತವ್ಯಗಳು:–

ಅ) ಸಂಸ್ಥೆಯ ಹೆಸರು: ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಶಿವಮೊಗ್ಗ ವಿಭಾಗ ಶಿವಮೊಗ್ಗ ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ, ಶಿವಮೊಗ್ಗ.

ಆ) ರಚನೆ:

ಕಾರ್ಯಪಾಲಕ ಇಂಜಿನಿಯರ್

ತಾಂತ್ರಿಕ ಶಾಖೆ	**ಆಡಳಿತ ಶಾಖೆ**	**ಲೆಕ್ಕ ಪತ್ರ ಶಾಖೆ**	**ಉಗ್ರಾಣ ಶಾಖೆ**
ತಾಂತ್ರಿಕ ಸಹಾಯಕರು–1	ಅಧೀಕ್ಷಕರು–1	ಲೆಕ್ಕ ಪರಿಶೋಧನಾಧಿಕಾರಿ–1	ದ್ವಿತೀಯ ದರ್ಜೆ
ಸಹಾಯಕ ಇಂಜಿನಿಯರ್–2	ಪ್ರ.ದ.ಸಹಾಯಕರು–1	ಪ್ರ.ದ.ಲೆ.ಸಹಾಯಕರು–3	ಉಗ್ರಾಣ ಪಾಲಕರು–1
ಕಿರಿಯ ಇಂಜಿನಿಯರ್–3	ದ್ವಿ.ದ.ಸಹಾಯಕರು–4	ದ್ವಿ.ದ.ಲೆ.ಸಹಾಯಕರು–1	
ಸಾಂಖ್ಯಿಕ ನಿರೀಕ್ಷಕರು–1	ಶೀಘ್ರಲಿಪಿಗಾರರು–1		
ಪ್ರ.ದ.ಭೂ.ಮಾಪಕರು–1	ಬೆರಳಚ್ಚುಗಾರರು–2		
	ಚಾಲಕ–1		
	ಡಿ ದರ್ಜೆ ನೌಕರರು–2		

ನಿಯೋಜನೆಯ ಮೇಲೆ ಇರುವ ನೌಕರರು:

1) ಶ್ರೀಮತಿ ಜರೀನಾ ಬೇಗಂ ಉರುಫ್ ಜಯಂತಿ, ದ್ವಿ.ದ.ಸಹಾಯಕರು (ಮಂಗಳೂರು ಲೋಇ ಉಪವಿಭಾಗದಿಂದ)
2) ಶ್ರೀ ಎ.ಎಂ. ಲೋಕೇಶ್‌ರಾವ್, ಕ್ಲೀನರ್. (ನಂ.1 ಲೋಇ ಉಪವಿಭಾಗ ಶಿವಮೊಗ್ಗದಿಂದ)
3) ಶ್ರೀ ಗಂಗಯ್ಯ ಜವಾನರು. (ನಂ.3 ಲೋಇ ಉಪವಿಭಾಗ, ಭದ್ರಾವತಿ)
4) ಶ್ರೀ ಎಂ. ಶ್ರೀನಿವಾಸ್, ವಾಟರ್‌ಬಾಯ್. (ನಂ.5 ಲೋಇ ಉಪವಿಭಾಗ,ಸಾಗರ)

ಇ) ಕಾರ್ಯಗಳು ಮತ್ತು ಕರ್ತವ್ಯಗಳು

ಲೋಕೋಪಯೋಗಿ ಇಲಾಖೆಯ ಶಿವಮೊಗ್ಗ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು, ಕಟ್ಟಡಗಳು ಹಾಗೂ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ, ಆರ್ಥಿಕ ಹಾಗೂ ಸೇವೆಗಳಿಗೆ ಸಂಬಂಧಿಸಿದ ಕೆಲಸ–ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ. ಹಾಗೂ ಶಿವಮೊಗ್ಗ ವಿಭಾಗಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲೋಇ ಉಪವಿಭಾಗ ಸಾಗರ:ಶಿಕಾರಿಪುರ: ಸೊರಬ: ವಿಶೇಷ ಉಪವಿಭಾಗ ಶಿಕಾರಿಪುರ ಮತ್ತು ಹೊಸನಗರಗಳನ್ನು ಒಳಗೊಂಡಿರುತ್ತದೆ.

11. ಅಧಿಕಾರಿಗಳು ಮತ್ತು ಸಿಬ್ಬಂದಿ : ಅಧಿಕಾರ ಮತ್ತು ಕರ್ತವ್ಯಗಳು

1) ಕಾರ್ಯಪಾಲಕ ಅಭಿಯಂತರರು:– ಶಿವಮೊಗ್ಗ ವಿಭಾಗದ ಅಧಿಕೃತ ಮುಖ್ಯಸ್ಥರಾಗಿದ್ದು ಸರ್ಕಾರಿ ನಿಯಮಗಳ ಚೌಕಟ್ಟಿನಲ್ಲಿ ಹಾಗೂ ಕರ್ನಾಟಕ ಸರ್ಕಾರಿ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳಿಗೆ ಒಳಪಟ್ಟು ಪ್ರಕರಣಗಳ ವಿಲೇವಾರಿ ಮತ್ತು ಎಲ್ಲಾ ವ್ಯವಹಾರದ ಜವಾಬ್ದಾರಿ ಹೊಂದಿರುತ್ತಾರೆ ಹಾಗೂ ಅಧೀನ ಸಿಬ್ಬಂದಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ .

2) ತಾಂತ್ರಿಕ ಸಹಾಯಕರು:– ತಾಂತ್ರಿಕ ಶಾಖೆಯ ಸಂಪೂರ್ಣ ಉಸ್ತುವಾರಿ ಹಾಗೂ ವಿಷಯ ನಿರ್ವಾಹಕರು ಮಂಡಿಸಲಾದ ಪ್ರತಿಯೊಂದು ತಾಂತ್ರಿಕ ವಿಚಾರಗಳ ಪತ್ರ ಹಾಗೂ ಕಡತಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಮುಂದಿನ ಆದೇಶಕ್ಕಾಗಿ ಕಾರ್ಯಪಾಲಕ ಅಭಿಯಂತರವರಿಗೆ ಇವರಿಂದ ಮಂಡಿಸಲಾಗುತ್ತದೆ. ಹಾಗೂ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸಲಹೆ ಸಹಕಾರ ನೀಡುವರು.

3) ಸಹಾಯಕ ಅಭಿಯಂತರರು-1:- ಸೊರಬ ಮತ್ತು ಶಿಕಾರಿಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಲೆಕ್ಕಶೀರ್ಷಿಕೆ 3054,2216,2059ರಲ್ಲಿ ಅಂದಾಜುಪಟ್ಟಿಗಳ ಪರಿಶೀಲನೆ ಹಾಗೂ ಮಂಜೂರಾತಿ ಕಾಮಗಾರಿ ಆದೇಶ ನೀಡುವ ಬಗ್ಗೆ ಕಾರ್ಯನಿರ್ವಹಿಸುವರು ನೆರೆಹಾವಳಿ ವಿಷಯಗಳ ಪತ್ರ ವ್ಯವಹಾರ

4) ಸಹಾಯಕ ಅಭಿಯಂತರರು-2:- ಸಾಗರ ಲೋಇ ಉಪವಿಭಾಗಗಳಿಗೆ ಸಂಬಂಧಿಸಿದಂತೆ ಕೇಂದ್ರ ರಸ್ತೆನಿಧಿಯ ಕಾಮಗಾರಿಗಳ ನಿರ್ವಹಣೆ ಲೆಕ್ಕಶೀರ್ಷಿಕೆ 3054,2216,2059 ಯೋಜನೆ ಹಾಗೂ ಇತರೆ ಕಟ್ಟಡಗಳಿಗೆ ಸಂಬಂಧಿಸಿದಂತೆ ಅಂದಾಜುಪಟ್ಟಿಗಳ ಪರಿಶೀಲನೆ ಹಾಗೂ ಮಂಜೂರಾತಿಯ ಕಾಮಗಾರಿ ಆದೇಶ ನೀಡುವ ಬಗ್ಗೆ ಕಾರ್ಯನಿರ್ವಹಿಸುವರು. ರಾಜ್ಯಹೆದ್ದಾರಿ ಪ್ರಾಧಿಕಾರದ ಕಾಮಗಾರಿ ನಿರ್ವಹಣೆ (ಕೆ ಆರ್ ಡಿ ಸಿ ಎಲ್)ಪರಿಶೀಲಿಸಿ ತಾಂತ್ರಿಕ ಸಹಾಯಕರ ಮೂಲಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಅನುಮೋದನೆಗಾಗಿ ಮಂಡಿಸುವುದು.

5) ಕಿರಿಯ ಅಭಿಯಂತರರು-3:- ಶಿವಮೊಗ್ಗ ವಿಭಾಗದಲ್ಲಿ ಬರುವ ಕೆಲವು ತಾಲ್ಲೂಕುಗಳ ಕಾಮಗಾರಿಗಳ ಅಂದಾಜುಪಟ್ಟಿ ಅನುಮೋದನೆ ಬಗ್ಗೆ ಹಾಗೂ ತಾಂತ್ರಿಕ ಸಹಾಯಕರ ಮೂಲಕ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಕಡತ ಮಂಡಿಸುವುದು.

6) **ಸಾಂಖ್ಯಿಕ ನಿರೀಕ್ಷಕರು-1:-** ರಸ್ತೆ, ಸೇತುವೆ ಹಾಗೂ ಕಟ್ಟಡಗಳಿಗೆ ಸಂಬಂಧಿಸಿದಂತೆ ಅಂಕಿ-ಸಂಖ್ಯಾ ಮಾಹಿತಿ ಸಲ್ಲಿಸುವುದು. ವಾರ್ಷಿಕ ರಸ್ತೆ ಸಂಚಾರ ಸಮೀಕ್ಷೆ: ಗಣತಿ ಕ್ರೂಢೀಕರಣದ ವರದಿ ಸಲ್ಲಿಸುವುದು. ಕಟ್ಟಡ ವಹಿ ರಸ್ತೆ ಬಾರ್‌ಚಾರ್ಟ್, ಸ್ಥಿರ ಆಸ್ತಿ ವಹಿಗಳಿಗೆ ಖಾಲಿ ಜಮೀನು ವಹಿಗಳ ನಿರ್ವಹಣೆ, ತಪಾಸಣಾ ವರದಿಗಳ ಸಂಗ್ರಹಣೆ ಮೇಲಾಧಿಕಾರಿಗಳಿಗೆ ಸಲ್ಲಿಕೆ.

7) **ಪ್ರಥಮ ದರ್ಜೆ ಭೂ-ಮಾಪಕರು-1:-** ರಾಜ್ಯಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅತಿಕ್ರಮಣದ ಬಗ್ಗೆ ನ್ಯಾಯಾಲಯದ ಪ್ರಕರಣಗಳ ವಿಲೇವಾರಿ, ರಾಜ್ಯಹೆದ್ದಾರಿ , ಜಿಲ್ಲಾ ಮುಖ್ಯ ರಸ್ತೆಯ ಅಗಲೀಕರಣದ ಭೂ-ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ 1964ರ ಕಾಯಿದೆ ಪ್ರಕಾರ ರಾಜ್ಯ ಹಾಗೂ ಜಿಲ್ಲಾ ಮುಖ್ಯ ರಸ್ತೆಯ ಅಗಲೀಕರಣದ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ 1964ರ ಕಾಯಿದೆ ಪ್ರಕಾರ ರಾಜ್ಯ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಘೋಷ್ವಾರೆ ಬಗ್ಗೆ ರಾಜ್ಯದ ಗೆಜೆಟ್‌ನಲ್ಲಿ ಪ್ರಕಟಿಸುವುದು. ರಸ್ತೆಗಳ ಅತಿಕ್ರಮಣ ತೆರವುಗೊಳಿಸುವ ಬಗ್ಗೆ ಪತ್ರ ವ್ಯವಹಾರದ ಕಾರ್ಯನಿರ್ವಹಿಸುವುದು.

8) **ಅಧೀಕ್ಷಕರು** :- ಆಡಳಿತ ಶಾಖೆಗೆ ಸಂಬಂಧಿಸಿದಂತೆ, ಎಲ್ಲಾ ಪತ್ರ ಕಡತಗಳನ್ನು ನಿರ್ವಹಿಸುವುದು ಕಛೇರಿಯ ಎಲ್ಲಾ ಶಾಖೆ ನೌಕರರುಗಳ ಚಲನವಲನವನ್ನು ಪರಿಶೀಲಿಸುವುದು ರಹಸ್ಯ ವರದಿಗಳು ಹಾಗೂ ಆಸ್ತಿ ಹೊಣೆಗಾರಿಕೆಯ ಪಟ್ಟಿಗಳನ್ನು ನಿರ್ವಹಿಸುವುದು. ಕಡತಗಳನ್ನು ವಿಷಯ ನಿರ್ವಾಹಕರಿಂದ ಸಕಾಲದಲ್ಲಿ ವಿಲೇವಾರಿಯಾಗುವಂತೆ ಸಹಕರಿಸಿ ಮೇಲ್ವಿಚಾರಣೆ ಮಾಡುವರು ಕಾರ್ಯಪಾಲಕ ಇಂಜಿನಿಯರ್‌ರವರ ಅನುಮೋದನೆಗೆ ಕಡತಗಳನ್ನು ಸಕಾಲದಲ್ಲಿ ಸಲ್ಲಿಸಲು ಕ್ರಮ ಕೈಗೊಳ್ಳುವುದು.

9) **ಪ್ರಥಮ ದರ್ಜೆ ಸಹಾಯಕರು -1:-** (ಸಿಬ್ಬಂದಿ-1) ಕಛೇರಿಯ ಎಲ್ಲಾ ಅಧಿಕಾರಿ: ಸಿಬ್ಬಂದಿ ವರ್ಗದವರ ಸಂಬಳದ ಬಿಲ್ಲು ತಯಾರಿಸುವುದು. ಸೇವಾ ವಹಿಗಳ ನಿರ್ವಹಣೆ, ಪತ್ರ ವ್ಯವಹಾರ ತಪಾಸಣಾ ವರದಿಗಳ ನಿರ್ವಹಣೆ, ವಿಭಾಗ ಹಾಗೂ ಉಪವಿಭಾಗ ನೌಕರರ ಹಾಗೂ ಅಧಿಕಾರಿಗಳ ಸಾಂದರ್ಭಿಕ ರಜೆ ಕಡತ ನಿರ್ವಹಣೆ, ಬಜೆಟ್ ತಯಾರಿಕೆ , ಅನ್ಯ ಸೇವಾ ನೌಕರರ ಸೇವಾ ನಿರ್ವಹಣೆ.

10) **ದ್ವಿತೀಯ ದರ್ಜೆ ಸಹಾಯಕರು-** 1(ಸಿ-2):- 4ನೇ ದರ್ಜೆ ಗುತ್ತಿಗೆದಾರರ ನೊಂದಣಿ ಇಲಾಖಾ ವಿಚಾರಣೆಗಳು, ನಿಯತಕಾಲಿಕೆಗಳು, ಎಇಇಗಳ ಪತ್ರವ್ಯವಹಾರ ಇತ್ಯಾದಿ ನಿರ್ವಹಣೆ, ಕಾರ್ಮಿಕ ನ್ಯಾಯಾಲಯ ಪ್ರಕರಣಗಳು ಡಿ ಗ್ರೂಪ್ ನೌಕರರ ಪತ್ರ ವ್ಯವಹಾರ ಮತ್ತು ಸಿಬ್ಬಂದಿ ಖರ್ಚು ವೆಚ್ಚದ ತಃಖ್ತೆಯನ್ನು ತಯಾರಿಸುವುದು.

11) **ದ್ವಿತೀಯ ದರ್ಜೆ ಸಹಾಯಕರು-** 2(ಸಿ-3):- ಕಿರಿಯ ಇಂಜಿನಿಯರ್ ಹೊರತುಪಡಿಸಿ ಎಲ್ಲಾ ಸಿ ಗುಂಪಿನ ನೌಕರರ ಪತ್ರ ವ್ಯವಹಾರ, ವೈದ್ಯಕೀಯ ಮರುಪಾವತಿ ಬಿಲ್ಲುಗಳ ಮೇಲುಸಹಿ ನಿರ್ವಹಣೆ, ದಿನಗೂಲಿ ನೌಕರರ ಎಲ್ಲಾ ಪತ್ರ ವ್ಯವಹಾರ, ಸಾಗರ ಮತ್ತು ಶಿಕಾರಿಪುರ ಉಪವಿಭಾಗದ ಪ್ರವಾಸ ಭತ್ಯೆಗಳ ಹಾಗೂ ವಾಹನ ಭತ್ಯೆ ಮೇಲುಸಹಿ ಮತ್ತು ಅಭಿಲೇಖಾಲಯದ ನಿರ್ವಹಣೆ, ಕಛೇರಿಯ ರವಾನೆ ಶಾಖೆಯ ನಿರ್ವಹಣೆ, ಅಂಚೆ ಸೇವಾ ಚೀಟಿಗಳ ಲೆಕ್ಕ ಇತ್ಯಾದಿ.

12) **ದ್ವಿತೀಯ ದರ್ಜೆ ಸಹಾಯಕರು-3(ಸಿಬ್ಬಂದಿ-4):-** ಸಹಾಯಕ ಇಂಜಿನಿಯರ್ / ಕಿರಿಯ ಇಂಜಿನಿಯರ್ ಗೆ ಸಂಬಂಧಿಸಿದ ಪತ್ರ ವ್ಯವಹಾರ, ಸಾರ್ವಜನಿಕ ಕುಂದು ಕೊರತೆ ಹಾಗೂ ಮಾಹಿತಿ ಹಕ್ಕು ಸಂಬಂಧ ಪತ್ರ ವ್ಯವಹಾರ ಉಪವಿಭಾಗದ ಪ್ರವಾಸ ಭತ್ಯೆ ಬಿಲ್ಲುಗಳ ನಿರ್ವಹಣೆ ಕೆ.ಎ.ಟಿ ನ್ಯಾಯಾಲಯ ಪ್ರಕರಣಗಳ ಪತ್ರ ವ್ಯವಹಾರ.

13) **ದ್ವಿತೀಯ ದರ್ಜೆ ಸಹಾಯಕರು-4** :-ವಿಭಾಗ ಕಛೇರಿಯ ಅಧಿಕಾರಿ ಮತ್ತು ಸಿಬ್ಬಂದಿಯವರ ಪ್ರಯಾಣ ಭತ್ಯೆಯ ಬಿಲ್ಲುಗಳ ತಯಾರಿಸುವುದು ನಗದೀಕರಣ, ತಾಂತ್ರಿಕ ಶಾಖೆಯಲ್ಲಿ ವಿಭಾಗದ ಎಂ.ಎಂ.ಆರ್ ಸಭಾ ನಡವಳಿಗಳನ್ನು ತಯಾರಿಸುವುದು ಹಾಗೂ ಎಇ-1 ಮತ್ತು ಎಇ-2 ಇವರಿಗೆ ಕಛೇರಿ ಕೆಲಸದಲ್ಲಿ ನೆರವಾಗುವುದು. ಭೂಮಾಪಕ ಹುದ್ದೆಯ ಮತ್ತು ಅಂಕಿ ಸಂಖ್ಯೆ ವಿಭಾಗದ ಕೆಲಸಗಳ ನಿರ್ವಹಣೆ.

14) **ಶೀಘ್ರಲಿಪಿಗಾರರು:–** ಕಾರ್ಯಪಾಲಕ ಇಂಜನಿಯರ್ ರವರಿಗೆ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸುವುದು ಹಾಗೂ ತಾಂತ್ರಿಕ ಕಾಮಗಾರಿಗಳ ತಪಾಸಣಾ ವರದಿಯನ್ನು ನಿರ್ವಹಿಸುವುದು, ದೂರವಾಣಿ, ಫ್ಯಾಕ್ಸ್‌ಗಳ ನಿರ್ವಹಣೆ, ದೂರವಾಣಿ ವಹಿಗಳ ನಿರ್ವಹಣೆ, ಐ.ಬಿ ಹಾಗೂ ಸರ್ಕಿಟ್ ಹೌಸ್‌ನಲ್ಲಿನ ರೂಂಗಳನ್ನು ಕಾಯ್ದಿರಿಸುವುದು. ವಸತಿ ಗೃಹಗಳಿಗೆ ಸಂಬಂಧಿಸಿದಂತೆ ಪತ್ರ ವ್ಯವಹಾರ .

15) **ಬೆರಳಚ್ಚುಗಾರರು–2:–** ಈ ಕಛೇರಿಯಿಂದ ಮೇಲಾಧಿಕಾರಿಯವರಿಗೆ ಮತ್ತು ಅಧೀನ ಕಛೇರಿಗಳಿಗೆ ಹೋಗುವ ಪತ್ರಗಳನ್ನು ಬೆರಳಚ್ಚು ಮಾಡುವುದು ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತಾರೆ.

16) **ಡಿ ದರ್ಜೆ ನೌಕರರು–2** :– ಕಡತ:ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಹಾಗೂ ಹೊರಗೆ ಸಂಬಂಧಪಟ್ಟವರಿಗೆ ತಲುಪಿಸುವುದು.

17) **ಲೆಕ್ಕ ಪರಿಶೋಧನಾಧಿಕಾರಿಗಳು:–** ಕಛೇರಿ ಲೆಕ್ಕ ಪತ್ರ ಶಾಖೆಯ ಸಂಪೂರ್ಣ ಮೇಲು ಉಸ್ತುವಾರಿ ಮಾಡುವುದು, ವಿಭಾಗ ಹಾಗೂ ಉಪವಿಭಾಗ ಕಛೇರಿಯ ಲೆಕ್ಕ ಪತ್ರಗಳು ಹಾಗೂ ಉಪವಿಭಾಗ ಕಛೇರಿಯ ಕಾಮಗಾರಿ ಬಿಲ್ಲುಗಳ ಪಾಸ್ ಮಾಡುವ ಬಗ್ಗೆ ಸಂಪೂರ್ಣ ಉಸ್ತುವಾರಿ ಹಾಗೂ ಮಾಸಿಕ ಸಭೆಗಳಿಗೆ ಹಾಜರಾಗುವುದು.

18) **ಪ್ರಥಮ ದರ್ಜೆ ಲೆಕ್ಕ ಸಹಾಯಕರು–1** (ನಗದು ಶಾಖೆ):– ಕಾಮಗಾರಿ ನಗದು ಪುಸ್ತಕ ಸಾಮಾನ್ಯ ನಗದು ಪುಸ್ತಕ ನಿರ್ವಹಣೆ ಚೆಕ್ ಬರೆಯುವುದು. ಡಿ.ಸಿ ಬಿಲ್ ತಯಾರಿಸಿ ಸಿಬ್ಬಂದಿ ಸಂಬಳ ವಿತರಣೆ, ಗುತ್ತಿಗೆದಾರರ ಇ.ಎಂ.ಡಿ ಬ್ಯಾಂಕ್ ಗ್ಯಾರಂಟಿಗಳ ನವೀಕರಣ ಮತ್ತು ಪತ್ರ ವ್ಯವಹಾರ ಟೆಂಡರ್ ಫಾರಂ ವಿತರಣೆ, ಎಸ್.ಎಸ್.ಟಿ ತಯಾರಿಕೆ ಎಲ್.ಓ.ಸಿ ಬೇಡಿಕೆ ಪತ್ರ ತಯಾರಿಕೆ ಯು.ಸಿ ಸಲ್ಲಿಸುವುದು. ಎ.ಜಿ ತಪಾಸಣೆ ವರದಿ ರಿಜಾಯಿಂಡರ್ಸ್ ಸಿ.ಎ.ಜಿ ವರದಿಗಳಿಗೆ ಕೇಂದ್ರ ಮತ್ತು ವೃತ್ತ ಕಛೇರಿಯ ಆಡಿಟ್ ಮತ್ತು ಅಕೌಂಟ್ಸ್ ಸಭೆಗೆ ವಿವರ ಒದಗಿಸುವುದು.

19) **ಪ್ರ.ದ.ಲೆ ಸಹಾಯಕರು–2(ಲೆಸ–1):–** ಶಿಕಾರಿಪುರ, ಸೊರಬ ಉಪವಿಭಾಗಗಳ ಲೆಕ್ಕ ಪತ್ರ ನಿರ್ವಹಣೆ ಹಾಗೂ ಬಿಲ್ಲುಗಳ ತಪಾಸಣೆ, ಎಂ.ಎ.ಎಸ್, ಆರ್.ಎಂ.ಎಸ್ ಲೆಕ್ಕ ವಸತಿಗೃಹ ಬಾಡಿಗೆ ಸಿಸಿಬಿ ನಿರ್ವಹಣೆ ವಿಭಾಗದ ಮಾಸಿಕ ಲೆಕ್ಕಪತ್ರಗಳ ಸಂಕಲನ ಮಾಡಿ ಮಹಾಲೇಖಪಾಲರಿಗೆ ಸಲ್ಲಿಸುವುದು. ನಬಾರ್ಡ್ ಮರುಪಾವತಿ ಬಗ್ಗೆ ರಿಜಿಸ್ಟರ್ ನಿರ್ವಹಣೆ ಮತ್ತು ಪತ್ರ ವ್ಯವಹಾರ.

20) **ಪ್ರ.ದ.ಲೆ ಸಹಾಯಕರು–3 (ಲೆಸ–2):–** ವಿಭಾಗದ ಬಜೆಟ್ (ರೆವಿನ್ಯೂ ಬಜೆಟ್ ಸೇರಿದಂತೆ) ತಯಾರಿಕೆ ಕಾಮಗಾರಿ ಪ್ರಗತಿ ಪತ್ರ ತಯಾರಿಕೆ ಅನುದಾನ ಮತ್ತು ವೆಚ್ಚ ತಯಾರಿಕೆ, ರಿಪ್ರಾಪ್ರಿಯೇಷನ್ ತ:ಖ್ತೆ ತಯಾರಿಕೆ ಆದಾಯ ತೆರಿಗೆ, ಮಾರಾಟ ತೆರಿಗೆ ಸರ್ಟಿಫಿಕೇಟ್ ತಯಾರಿಕೆ ಮತ್ತು ವಿತರಣೆ ವಿಧಾನ ಮಂಡಲ ಪ್ರಶ್ನೆಗಳಿಗೆ ಉತ್ತರ ತಯಾರಿಕೆ ಉಗ್ರಾಣ ಬಿಲ್ಲುಗಳ ನಿರ್ವಹಣೆ ಟಿ & ಪಿ ಅರ್ಧವಾರ್ಷಿಕ ದಾಸ್ತಾನು ಸ್ಟಾಕ್ ರಶೀದಿ ಮಾಸಿಕ ವೋಚರ್ ಬಂಡಲ್ ನಿರ್ವಹಣೆ ಸಿ.ಎಸ್.ಎಸ್.ಎ, ಎಂ.ಪಿ.ಡಬ್ಲ್ಯು.ಎ ಪತ್ರ ವ್ಯವಹಾರ.

21) **ದ್ವಿತೀಯ ದರ್ಜೆ ಲೆಕ್ಕ ಸಹಾಯಕರು– 1(ಲೆಸ–3):–** ಸಾಗರ, ಹೊಸನಗರ ಉಪವಿಭಾಗಗಳ ಲೆಕ್ಕಪತ್ರ ನಿರ್ವಹಣೆ ಹಾಗೂ ಬಿಲ್ಲುಗಳ ತಪಾಸಣೆ ಎಂ.ಎ.ಎಸ್, ಆರ್ ಎಂಎಸ್ ಲೆಕ್ಕ , ವಸತಿಗೃಹ ಬಾಡಿಗೆ ಡಿ.ಸಿ.ಬಿ ನಿರ್ವಹಣೆ ಠೇವಣಿ ಹಣ, ಮಾಸಿಕ ಲೆಕ್ಕದ ಜೊತೆ ಸಲ್ಲಿಸಬೇಕಾದ ಷೆಡ್ಯೂಲ್‌ಗಳ ತಯಾರಿಕೆ ಇತ್ಯಾದಿ ಕೆಲಸ ನಿರ್ವಹಣೆ.

22) **ದ್ವಿತೀಯ ದರ್ಜೆ ಉಗ್ರಾಣಪಾಲಕರು:–** ಬಿ.ಆರ್ ವಹಿ ನಿರ್ವಹಣೆ ವಿಭಾಗದ ಬಾಕಿ ಬಿಲ್ಲುಗಳ ಪಟ್ಟಿ ತಯಾರಿಕೆ ವಸತಿಗೃಹ ಬಾಡಿಗೆ, ಡಿಸಿಬಿ ತ:ಖ್ತೆಯನ್ನು ತಯಾರಿಕೆ. ವಾಹನ ಬಾಡಿಗೆ ತ:ಖ್ತೆ ಮತ್ತು ವಹಿಗಳ ನಿರ್ವಹಣೆ ರೆವಿನ್ಯೂ ರಿಸೀಟ್ ತಯಾರಿಕೆ ಮತ್ತು ಉಗ್ರಾಣಕ್ಕೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳ ನಿರ್ವಹಣೆ. ಮೆಕ್ಯಾನಿಕಲ್ ಶಾಖೆಯಲ್ಲಿನ ಪತ್ರ ವ್ಯವಹಾರ, ಠೇವಣಿವಂತಿಕೆ ಕಾಮಗಾರಿಗಳ ಷೆಡ್ಯೂಲ್ ತಯಾರಿಸಿ ಸಲ್ಲಿಸುವುದು. ಭದ್ರತಾ ಠೇವಣಿ ಮತ್ತು ಠೇವಣಿ ವಂತಿಕೆ ಕಾಮಗಾರಿಗಳ ಅನುದಾನ ವಹಿ ನಿರ್ವಹಣೆ ಮತ್ತು ಗುತ್ತಿಗೆದಾರರ ಭವಿಷ್ಯನಿಧಿ ನಿರ್ವಹಣೆ.

ನಿಯೋಜನೆಯ ಮೇಲೆ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು

1) **ದ್ವಿತೀಯ ದರ್ಜೆ ಸಹಾಯಕರು (ಸಿ–5):–** (ಮಂಗಳೂರು ಲೋಇ ಉಪವಿಭಾಗದಿಂದ) ಕಛೇರಿಗೆ ಬರುವ ಇನ್‌ವರ್ಡ್ ಪತ್ರಗಳ ನಿರ್ವಹಣೆ ಇತ್ಯಾದಿ

2) **ಕ್ಲೀನರ್**: (ನಂ:1 ಲೋ.ಇ ಉಪವಿಭಾಗ ಶಿವಮೊಗ್ಗದಿಂದ ನಿಯೋಜನೆಯಲ್ಲಿದ್ದಾರೆ)
ಕಡತಗಳು: ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಹೊರಗೆ ಸಂಬಂಧಪಟ್ಟವರಿಗೆ ತಲುಪಿಸುವುದು.

3) **ಡಿ ದರ್ಜೆ ನೌಕರರು:–** (ಭದ್ರಾವತಿ ಲೋ.ಇ ಉಪವಿಭಾಗದಿಂದ ನಿಯೋಜನೆಯ ಮೇಲಿದ್ದಾರೆ)
ನೌಕರರು ಕಛೇರಿಯ ರಾತ್ರಿ ಕಾವಲುಗಾರರಾಗಿ ಕೆಲಸ ನಿರ್ವಹಿಸುತ್ತಾರೆ.

4) **ಡಿ ದರ್ಜೆ ನೌಕರರು:–** (ಲೋ.ಇ ಉಪವಿಭಾಗ ಸಾಗರದಿಂದ ನಿಯೋಜನೆಯಲ್ಲಿದ್ದಾರೆ)
ಕಡತಗಳು: ಟಪಾಲು ಇತ್ಯಾದಿಗಳನ್ನು ಶಾಖೆಯ ಒಳಗೆ ಹೊರಗೆ ಸಂಬಂಧಪಟ್ಟವರಿಗೆ ತಲುಪಿಸುವುದು.

3. ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ, ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:

1) **ಕಾರ್ಯಪಾಲಕ ಇಂಜಿನಿಯರ್**:- ಸರ್ಕಾರದಿಂದ ಲಭ್ಯವಾದ ಅಧಿಕಾರ ಪ್ರತ್ಯಾ ಯೋಜನೆಯ ಅನುಸಾರ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವುದು. ವಿಭಾಗ ವ್ಯಾಪ್ತಿಯ ಕಾಮಗಾರಿಯ ಕಾರ್ಯ ನೀತಿಯ ಬಗ್ಗೆ ಪ್ರಸ್ತಾವನೆಗಳನ್ನು ವೃತ್ತ ಹಾಗೂ ಕೇಂದ್ರ ಕಛೇರಿಗೆ ಸಲ್ಲಿಸುವುದು.

2) **ತಾಂತ್ರಿಕ ಸಹಾಯಕರು**: ತಾಂತ್ರಿಕ ವಿಷಯಗಳ ಬಗ್ಗೆ ಹಾಗೂ ಇಲಾಖಾ ಕಾಮಗಾರಿಗಳ ಬಗ್ಗೆ ನಕ್ಷೆ ಅಂದಾಜು ಪತ್ರಗಳನ್ನು ಪರಿಶೀಲಿಸುವುದು, ಅಧಿಕಾರ ಪ್ರತ್ಯಾ ಯೋಜನೆಯ ಪ್ರಕಾರ ಕಾರ್ಯಪಾಲಕ ಇಂಜಿನಿಯರ್‌ರವರ ಅನುಮೋದನೆಗೆ ಮಂಡಿಸುವುದು. ಕಾರ್ಯಪಾಲಕ ಇಂಜಿನಿಯರ್ ರವರಿಗೆ ತಾಂತ್ರಿಕ ವಿಷಯಗಳ ಬಗ್ಗೆ ಮಾಹಿತಿ ಒದಗಿಸುವುದು.

3) **ಸಹಾಯಕ ಇಂಜಿನಿಯರ್**: ಕಿರಿಯ ಇಂಜಿನಿಯರ್:- ವಿಭಾಗ ವ್ಯಾಪ್ತಿಯ ಟೆಂಡರ್, ನಕ್ಷೆ, ಅಂದಾಜು ಪತ್ರಗಳ ಪರಿಶೀಲನೆ, ಕಡತ ಮಂಡಿಸುವುದು ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ ಮಾಹಿತಿ ಒದಗಿಸುವುದು.

4) **ಸಾಂಖ್ಯಿಕ ನಿರೀಕ್ಷಕರು**:- ಶಿವಮೊಗ್ಗ ವಿಭಾಗದ ವ್ಯಾಪ್ತಿ ರಸ್ತೆ, ಸೇತುವೆ, ಕಟ್ಟಡಗಳ ಅಂಕಿ ಅಂಶ ಸಂಗ್ರಹಣೆ ಮತ್ತು ವರದಿ ಸಲ್ಲಿಸುವುದು.

5) **ಪ್ರಥಮ ದರ್ಜೆ ಭೂ-ಮಾಪಕರು**:- ಜಿಲ್ಲಾ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳ ಅತಿಕ್ರಮಣ, ಅಗಲೀಕರಣದ ನ್ಯಾಯಾಲಯ ಪ್ರಕರಣಗಳ ಇತ್ಯರ್ಥ ಹಾಗೂ ಜಿಲ್ಲಾ ಹಾಗೂ ರಾಜ್ಯ ರಸ್ತೆಗಳ ಘೋಷಣೆ ಮತ್ತು ಗೆಜೆಟ್ ನಲ್ಲಿ ಪ್ರಕಟಿಸುವ ಪ್ರಕ್ರಿಯೆ.

6) **ಅಧೀಕ್ಷಕರು** :- ಕಚೇರಿಯ ಎಲ್ಲಾ ಸಿಬ್ಬಂದಿಗಳ ನಿರ್ವಹಣೆ ಆಡಳಿತ ಶಾಖೆಯ ಮೇಲ್ವಿಚಾರಣೆ, ಕಡತಗಳ ವಿಲೇವಾರಿಗೆ ಕ್ರಮ ಕೈಗೊಳ್ಳುವುದು.

7) **ಪ್ರಥಮ ದರ್ಜೆ ಮತ್ತು ದ್ವಿತೀಯ ದರ್ಜೆ ಸಹಾಯಕರು** :- ಪ್ರಸ್ತಾವನೆಗಳು ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ, ಶಿಫಾರಸ್ಸಿನೊಂದಿಗೆ ಆದೇಶಕ್ಕಾಗಿ ಮೇಲಾಧಿಕಾರಿಗಳಿಗೆ ಮಂಡಿಸುವುದು.

8) **ಶೀಘ್ರಲಿಪಿಗಾರರು** :- ಕಾರ್ಯಪಾಲಕ ಇಂಜಿನಿಯರ್‌ರವರ ಆಪ್ತ ಸಹಾಯಕರಾಗಿದ್ದು ಕಡತಗಳ ವಿಲೇವಾರಿ ಬಗ್ಗೆ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸಹಕರಿಸುವುದು, ದೂರವಾಣಿ, ಫ್ಯಾಕ್ಸ್‌ಗಳ ನಿರ್ವಹಣೆ ಟಿ.ಬಿ. ಯಲ್ಲಿನ ರೂಂಗಳ ಕಾಯ್ದಿರಿಸುವಿಕೆ. ವಸತಿಗೃಹಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರ .

9) **ಬೆರಳಚ್ಚುಗಾರರು** :- ಕಡತಗಳ ಶುದ್ಧಪ್ರತಿ ತಯಾರಿಸುವುದು.

10) **ಚಾಲಕ** :- ಕಾರ್ಯಪಾಲಕ ಇಂಜಿನಿಯರ್‌ರವರ ವಾಹನ ಚಾಲನೆಯ ಕೆಲಸ ಮತ್ತು ವಾಹನದ ಉಸ್ತುವಾರಿ ನಿರ್ವಹಿಸುವುದು.

11) **ಡಿ ದರ್ಜೆ ನೌಕರರು** :- ಕಛೇರಿಯ ಎಲ್ಲಾ ಕೊಠಡಿಗಳ ಶುಚಿತ್ವದ ನಿರ್ವಹಣೆ, ಕಡತ , ಟಪಾಲು ಇತ್ಯಾದಿಗಳನ್ನು ಶಾಖೆಯೊಳಗೆ ಮತ್ತು ಹೊರಗೆ ಸಂಬಂಧಿಸಿದವರಿಗೆ ತಲುಪಿಸುವುದು.

12) **ಲೆಕ್ಕ ಪರಿಶೋಧನಾಧಿಕಾರಿಗಳು** :- ಲೆಕ್ಕಪತ್ರ ಶಾಖೆಯ ಮೇಲ್ವಿಚಾರಣೆ ಕಡತಗಳ ವಿಲೇವಾರಿಗೆ ಕ್ರಮಕೈಗೊಳ್ಳುವುದು.

13) **ಪ್ರಥಮ ದರ್ಜೆ ಲೆಕ್ಕ ಸಹಾಯಕರು-ದ್ವಿ.ದ.ಲೆ.ಸಹಾಯಕರು** :- ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ಶಿಫಾರಸ್ಸಿನೊಂದಿಗೆ ಆದೇಶಕ್ಕಾಗಿ ಮೇಲಾಧಿಕಾರಿಗಳಿಗೆ ಮಂಡಿಸುವುದು.

14) **ದ್ವಿತೀಯ ದರ್ಜೆ ಉಗ್ರಾಣ ಪಾಲಕರು** :- ಉಗ್ರಾಣ ಶಾಖೆಯ ಮೇಲ್ವಿಚಾರಣೆ ಕಡತಗಳ ವಿಲೇವಾರಿಗೆ ಕ್ರಮಕೈಗೊಳ್ಳುವುದು ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ಶಿಫಾರಸ್ಸಿನೊಂದಿಗೆ ಆದೇಶಕ್ಕಾಗಿ ಮೇಲಾಧಿಕಾರಿಗಳಿಗೆ ಮಂಡಿಸುವುದು.

4) **ಕಾರ್ಯನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು** :- ಕೆ ಪಿ ಡಬ್ಲ್ಯು ಡಿ ಕೋಡ್ ಮತು ಕೆ ಪಿ ಡಬ್ಲ್ಯು ಎ ಕೋಡ್ ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಆಕ್ಟ್ 2002ನಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಅನುಸರಿಸುವುದು.

5. **ಕಾರ್ಯಗಳನ್ನು ನಿರ್ವಹಿಸುವಲ್ಲಿ ಇಲಾಖೆಯ ಸಿಬ್ಬಂದಿ ಹೊಂದಿರುವ ಅಥವಾ ಉಪಯೋಗಿಸುವ ನಿಯಮಗಳು: ನಿಬಂಧನೆಗಳು ಸೂಚನೆಗಳು ಕೈಪಿಡಿ ಮತ್ತು ದಾಖಲೆಗಳು :**

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958

ಆ) ಕರ್ನಾಟಕ ಆರ್ಥಿಕ ಸಂಹಿತೆ ನಿಯಮ

ಇ) ಖಜಾನೆ ಸಂಹಿತೆ.

ಈ) ಸಾದಿಲ್ವಾರು ವೆಚ್ಚದ ಕೈಪಿಡಿ

ಉ) ಕೆ ಪಿ ಡಬ್ಲ್ಯು ಡಿ 'ಎ' ಕೋಡ್

ಊ) ಕೆ ಪಿ ಡಬ್ಲ್ಯು ಡಿ 'ಡಿ' ಕೋಡ್

ಋ) ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966

ಎ) ಕರ್ನಾಟಕ ನಾಗರೀಕ ಸೇವೆಗಳು (ಸಿ ಸಿ ಎ) ನಿಯಮಗಳು 1957

ಏ) ಕರ್ನಾಟಕ ಸರ್ಕಾರ ಸರ್ಕಾರಿ ವಸತಿಗೃಹಗಳ ಹಂಚಿಕೆ ನಿಯಮಗಳು 1986

ಐ) ಕಾರ್ಯಾಲಯದ ಕೈಪಿಡಿ

ಒ) ಉಗ್ರಾಣದ ಕೈಪಿಡಿ

ಓ) ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ನಿಯಮಗಳು(ಆದೇಶ ದಿನಾಂಕ:02-02-2001)

ಔ) ಲೋಇ ಮತ್ತು ನೀರಾವರಿ ಇಲಾಖಾ ಅಧಿಕಾರ ಪ್ರತ್ಯಾಯೋಜನೆಯ ನಿಯಮಗಳು(ಆದೇಶ ದಿ:15-12-1994)

ಅಂ) ಸೇವಾ ವಿಷಯಗಳು ಇತ್ಯಾದಿ ವಿಚಾರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ : ಆರ್ಥಿಕ ಇಲಾಖೆ: ಲೋಇ ಹೊರಡಿಸಿದ ಆದೇಶದ ಸುತ್ತೋಲೆ , ಸೂಚನೆಗಳು

6. ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪಟ್ಟಿ :-

1) ವಿಷಯ ವಹಿ, ಸಿಬ್ಬಂದಿ ವಹಿ
2) ವಿಧಾನಸಭೆ : ವಿಧಾನಪರಿಷತ್ ಪ್ರಶ್ನೆಗಳಿಗೆ ಸಂಬಂಧಿಸಿದ ರಿಜಿಸ್ಟರ್
3) ನ್ಯಾಯಾಲಯದ : ಕೆಎಟಿ : ಕಾರ್ಮಿಕ ಪ್ರಕರಣಗಳ ರಿಜಿಸ್ಟರ್
4) ಟೆಂಡರ್ ಅನುಮೋದನೆ ರಿಜಿಸ್ಟರ್
5) ಆಯವ್ಯಯ ಅಂದಾಜುಪಟ್ಟಿ ಅನಮೋದನೆ ರಿಜಿಸ್ಟರ್
6) ಖರೀದಿ ಸಮಿತಿ ಅನುಮೋದನೆ ರಿಜಿಸ್ಟರ್
7) ಇಲಾಖಾ ರಸ್ತೆ, ಕಟ್ಟಡ, ಸೇತುವೆಗಳ ಅಂಕಿ-ಅಂಶದ ರಿಜಿಸ್ಟರ್
8) ಇತರೆ ರಿಜಿಸ್ಟರ್‌ಗಳು

7. ನೀತಿ-ನಿಯಮಗಳನ್ನು ರೂಪಿಸಲು ಸಾರ್ವಜನಿಕರೊಂದಿಗೆ ಸಮಾಲೋಚಿಸಲು ಅಸ್ತಿತ್ವದಲ್ಲಿರುವ ಕಾರ್ಯ ವಿಧಾನದ ವಿವರಗಳು:

ಸಹಾಯಕ ಮಾಹಿತಿ ಅಧಿಕಾರಿಯನ್ನಾಗಿ ವಿಭಾಗ ಕಛೇರಿಯ ತಾಂತ್ರಿಕ ಸಹಾಯಕರನ್ನು ನೇಮಕ ಮಾಡಲಾಗಿದೆ. ಇವರು ಸಂಬಂಧಿಸಿದ ಸಾರ್ವಜನಿಕ ವ್ಯಕ್ತಿಗಳಿಂದ ದೂರು ಆಕ್ಷೇಪಣೆಗಳನ್ನು ಸ್ವೀಕರಿಸಿ ಪರಿಶೀಲಿಸಿ ಅಂತಿಮ ಆದೇಶವನ್ನು ಹೊರಡಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಗಳಾದ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸಹಕಾರ ನೀಡುವರು.

8. ಸರ್ಕಾರದ ಒಂದು ಭಾಗವಾಗಿ ಅಥವಾ ಸಲಹೆಗಳನ್ನು ಪಡೆಯಲು ರಚಿತವಾದ 2 ಮತ್ತು ಹೆಚ್ಚು ವ್ಯಾಪ್ತಿಗಳನ್ನೊಳಗೊಂಡ ಮಂಡಳಿ, ಪರಿಷತ್ತು ಸಮಿತಿ ಮತ್ತು ಇತರೆ ಅಂಗಗಳು ಮತ್ತು ಅವುಗಳ ಸಭೆಗಳು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದೆಯೆ ಅಥವಾ ಈ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತಿದೆಯೆ ಎಂಬ ಬಗ್ಗೆ ವಿವರಣೆ.

- ಯಾವುದೂ ಇರುವುದಿಲ್ಲ -

9. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ಕಛೇರಿ ವಿಳಾಸ	ದೂರವಾಣಿ ಸಂಖ್ಯೆ (ಕಛೇರಿ)
1	ಜಿ.ಆರ್. ಚಂದ್ರಶೇಖರಪ್ಪ , ಕಾರ್ಯಪಾಲಕ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	274942
2	ಡಿ.ಎಸ್. ನಾಗರಾಜ್, ತಾಂತ್ರಿಕ ಸಹಾಯಕರು	ಲೋಇ ವಿಭಾಗ, ಶಿವಮೊಗ್ಗ	274942
3	ಪಿ.ಹೆಚ್. ಫಜಲುಲ್ಲಾ, ಸಹಾಯಕ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	274942
4	ಜೆ.ಎ. ಜಯಪ್ರಕಾಶ್, ಸಹಾಯಕ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	274942
5	ಎಂ.ಆರ್. ಮೂರ್ತಿ, ಕಿರಿಯ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	274942
6	ಜೆ. ಶ್ರೀಪಾದ್, ಕಿರಿಯ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	272319
7	ಲತಾಮಂಜರಿ, ಕಿರಿಯ ಇಂಜಿನಿಯರ್	ಲೋಇ ವಿಭಾಗ, ಶಿವಮೊಗ್ಗ	274942
8	ವೇದಾವತಿ, ಅಧೀಕ್ಷಕರು	ಲೋಇ ವಿಭಾಗ, ಶಿವಮೊಗ್ಗ	274942
9	ವಿಕ್ಟೋರಿಯಾ ಮೇರಿ, ಪ್ರ.ದ.ಸ.	ಲೋಇ ವಿಭಾಗ, ಶಿವಮೊಗ್ಗ	274942
10	ಎಂ.ಎಸ್. ಆನಂದ್, ದ್ವಿ.ದ.ಸ.	ಲೋಇ ವಿಭಾಗ, ಶಿವಮೊಗ್ಗ	274942
11	ಹೆಚ್.ಆರ್. ಕುಮಾರ್, ದ್ವಿದ.ಸ.	ಲೋಇ ವಿಭಾಗ, ಶಿವಮೊಗ್ಗ	274942
12	ಕೆ.ಆರ್. ನಾಗೇಶ್, ದ್ವಿ.ದ.ಸ.	ಲೋಇ ವಿಭಾಗ, ಶಿವಮೊಗ್ಗ	274942
13	ಸಿ.ಆರ್. ರಾಜ್‌ಕುಮಾರ್, ದ್ವಿ.ದ.ಸ.	ಲೋಇ ವಿಭಾಗ, ಶಿವಮೊಗ್ಗ	274942
14	ಪಿ. ಮಾಲತಿ, ಟೈಪಿಸ್ಟ್	ಲೋಇ ವಿಭಾಗ, ಶಿವಮೊಗ್ಗ	274942

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ಕಛೇರಿ ವಿಳಾಸ	ದೂರವಾಣಿ ಸಂಖ್ಯೆ (ಕಛೇರಿ)
15	ವಿ. ರಾಜೇಶ್ವರಿ, ಟೈಪಿಸ್ಟ್	ಲೋಇ ವಿಭಾಗ, ಶಿವಮೊಗ್ಗ	274942
16	ಖತೀಜ, ಡಿ ದರ್ಜೆ	ಲೋಇ ವಿಭಾಗ, ಶಿವಮೊಗ್ಗ	274942
17	ಹೆಚ್.ಎಸ್. ಗಂಗಮ್ಮ, ಡಿ ದರ್ಜೆ	ಲೋಇ ವಿಭಾಗ, ಶಿವಮೊಗ್ಗ	274942
18	ನಾರಾಯಣಪ್ಪ, ಲೆಕ್ಕಪರಿಶೋಧನಾಧಿಕಾರಿ	ಲೋಇ ವಿಭಾಗ, ಶಿವಮೊಗ್ಗ	274942
19	ರವಿಸುತ, ದ್ವಿ.ದ.ಲೆ.ಸ.	ಲೋಇ ವಿಭಾಗ, ಶಿವಮೊಗ್ಗ	274942
20	ಜಿ.ಟಿ. ಬಸವರಾಜಪ್ಪ ಪ್ರ.ದ.ಲೆ.ಸ.	ಲೋಇ ವಿಭಾಗ, ಶಿವಮೊಗ್ಗ	274942
21	ಎನ್.ವಿ. ಜಗದೀಶ್, ಪ್ರ.ದ.ಲೆ.ಸ.	ಲೋಇ ವಿಭಾಗ, ಶಿವಮೊಗ್ಗ	274942
22	ಸಿ. ನಾಗರಾಜ, ಪ್ರ.ದ.ಲೆ.ಸ.	ಲೋಇ ವಿಭಾಗ, ಶಿವಮೊಗ್ಗ	274942
23	ಎಸ್. ವಸಂತ್, ದ್ವಿ.ದ.ಉ.ಪಾಲಕರು	ಲೋಇ ವಿಭಾಗ, ಶಿವಮೊಗ್ಗ	274942
24	ಗೌಸ್‌ಪೀರ್ ಚಾಲಕ	ಲೋಇ ವಿಭಾಗ, ಶಿವಮೊಗ್ಗ	274942

ನಿಯೋಜನೆ ಮೇಲಿನ ಸಿಬ್ಬಂದಿ

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ / ಶ್ರೀಮತಿ	ಕಛೇರಿ ವಿಳಾಸ	ದೂರವಾಣಿ ಸಂಖ್ಯೆ (ಕಛೇರಿ)
1	ಜರೀನಾ ಬೇಗಂ ಉರುಫ್ ಜಯಂತಿ, ದ್ವಿ.ದ.ಸ.	ಲೋಇ ವಿಭಾಗ, ಶಿವಮೊಗ್ಗ	274942
2	ಎ.ಎಂ. ಲೋಕೇಶ್‌ರಾವ್, ಕ್ಲೀನರ್	ಲೋಇ ವಿಭಾಗ, ಶಿವಮೊಗ್ಗ	274942
3	ಎಂ.ಶ್ರೀನಿವಾಸ್ ಡಿ ದರ್ಜೆ	ಲೋಇ ವಿಭಾಗ, ಶಿವಮೊಗ್ಗ	274942
4	ಗಂಗಯ್ಯ, ಡಿ ದರ್ಜೆ	ಲೋಇ ವಿಭಾಗ, ಶಿವಮೊಗ್ಗ	274942

10. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನ ವಿವರಗಳು

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ : ಶ್ರೀಮತಿ	ವೇತನ ಶ್ರೇಣಿ	ಮೂಲ ವೇತನ
1	ಜಿ.ಆರ್. ಚಂದ್ರಶೇಖರಪ್ಪ, ಕಾರ್ಯಪಾಲಕ ಇಂಜಿನಿಯರ್	18150–26925	26925
2	ಡಿ.ಎಸ್. ನಾಗರಾಜ್, ತಾಂತ್ರಿಕ ಸಹಾಯಕರು	14050–25050	25650
3	ಪಿ.ಹೆಚ್. ಫಜಲುಲ್ಲಾ, ಸಹಾಯಕ ಇಂಜಿನಿಯರ್	14050–25050	24450
4	ಜೆ.ಎ. ಜಯಪ್ರಕಾಶ್, ಸಹಾಯಕ ಇಂಜಿನಿಯರ್	11400–21600	18600
5	ಎಂ.ಆರ್.ಮೂರ್ತಿ, ಕಿರಿಯ ಇಂಜಿನಿಯರ್	8825–16000	13000
6	ಜೆ. ಶ್ರೀಪಾದ್, ಕಿರಿಯ ಇಂಜಿನಿಯರ್	8825–16000	11700
7	ಲತಾಮಂಜರಿ, ಕಿರಿಯ ಇಂಜಿನಿಯರ್	8825–16000	9500
8	ವೇದಾವತಿ, ಅಧೀಕ್ಷಕರು	10000–18150	14400
9	ವಿಕ್ಟೋರಿಯಾ ಮೇರಿ, ಪ್ರ.ದ.ಸ.	8825–16000	11100
10	ಎಂ.ಎಸ್. ಆನಂದ್, ದ್ವಿ.ದ.ಸ.	6800–13000	9050
11	ಹೆಚ್.ಆರ್. ಕುಮಾರ್, ದ್ವಿ.ದ.ಸ.	6250–12000	7625
12	ಕೆ.ಆರ್. ನಾಗೇಶ್, ದ್ವಿ.ದ.ಸ.	5800–10500	7100
13	ಸಿ.ಆರ್. ರಾಜ್‌ಕುಮಾರ್, ದ್ವಿ.ದ.ಸ.	7275–13350	10000
14	ಪಿ. ಮಾಲತಿ, ಟೈಪಿಸ್ಟ್	7275–13350	9275
15	ವಿ. ರಾಜೇಶ್ವರಿ, ಟೈಪಿಸ್ಟ್	6800–13000	9050
16	ಗೌಸ್‌ಫೀರ್, ಚಾಲಕ	5800–10500	9600
17	ಖತೀಜ, ಡಿ ದರ್ಜೆ	5200–8200	6375
18	ಹೆಚ್.ಎಸ್. ಗಂಗಮ್ಮ, ಡಿ ದರ್ಜೆ	5200–8200	7625

ಕ್ರಮ ಸಂಖ್ಯೆ	ಹೆಸರು ಮತ್ತು ಹುದ್ದೆ ಶ್ರೀ : ಶ್ರೀಮತಿ	ವೇತನ ಶ್ರೇಣಿ	ಮೂಲ ವೇತನ
19	ನಾರಾಯಣಪ್ಪ ಲೆಕ್ಕಪರಿಶೋಧನಾಧಿಕಾರಿ	11400–21600	18150
20	ರವಿಸುತ, ದ್ವಿ.ದ.ಲೆ.ಸ.	5800–10500	9500
21	ಜಿ.ಟಿ. ಬಸವರಾಜಪ್ಪ ಪ್ರ.ದ.ಲೆ.ಸ.	7275–13350	9750
22	ಎನ್.ವಿ. ಜಗದೀಶ್, ಪ್ರ.ದ.ಲೆ.ಸ.	7275–13350	8825
23	ಸಿ. ನಾಗರಾಜ, ಪ್ರ.ದ.ಲೆ.ಸ.	7275–13350	8000
24	ಎಸ್. ವಸಂತ್, ದ್ವಿ.ದ.ಉ. ಪಾಲಕರು	6250–12000	12000

ನಿಯೋಜನೆಯ ಮೇಲೆ ಇರುವ ನೌಕರರು

1	ಜರೀನಾ ಬೇಗಂ ಉರುಫ್ ಜಯಂತಿ, ದ್ವಿ.ದ.ಸ.	6800–13000	8200
2	ಎ.ಎಂ. ಲೋಕೇಶ್‌ರಾವ್, ಕ್ಲೀನರ್	5200–8200	7625
3	ಎಂ. ಶ್ರೀನಿವಾಸ್, ಡಿ ದರ್ಜೆ	4800–7275	5300
4	ಗಂಗಯ್ಯ	4800–7275	6900

1. 2008–09ನೇ ಸಾಲಿನ ಆಯವ್ಯಯದಲ್ಲಿ ಲೋಇ ವಿವಿಧ ಯೋಜನಾವಾರು ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ನಿಗದಿಪಡಿಸಲಾದ ಅನುದಾನದ ವಿವರಗಳು.

2008–09ನೇ ಸಾಲಿನಲ್ಲಿ ಶಿವಮೊಗ್ಗ ಲೋಇ ವಿಭಾಗಕ್ಕೆ ಆಯವ್ಯಯ ಕಟ್ಟಡ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ	2008–09ರ ಅನುದಾನ (ರೂ.ಲಕ್ಷಗಳಲ್ಲಿ)
1	4059 ನ್ಯಾಯಾಂಗ ಆಡಳಿತ (ಕೇಂದ್ರ ಪುರಸ್ಕೃತ ಯೋಜನೆ)	181.64
2	4059 ನ್ಯಾಯಾಂಗ ಆಡಳಿತ (ರಾಜ್ಯವಲಯ ಯೋಜನೆ)	77.62
3	4059 ಮಿನಿ ವಿಧಾನಸೌಧ	60.63
4	4059 ನ್ಯಾಯಾಲಯ ಕಟ್ಟಡ	33.00
5	4059 ಕಾರಾಗೃಹ	–
6	4059 ಲೋಕೋಪಯೋಗಿ	791.69
7	4059 ಅಗ್ನಿಶಾಮಕ ಮತ್ತು ರಕ್ಷಣೆ	98.78
8	4059 ಜಿಲ್ಲಾಡಳಿತ	373.50
9	4059 ಅಬಕಾರಿ	–
10	4059 ವಾಣಿಜ್ಯ ತೆರಿಗೆ	162.30
11	4059 ಕಾಲೇಜು ಶಿಕ್ಷಣ	459.00
12	4059 ಪ್ರೌಢ ಶಿಕ್ಷಣ	675.00
13	4059 ತಾಂತ್ರಿಕ ಶಿಕ್ಷಣ	322.50
14	4059 ಇತರೆ	796.15
15	4059 ಆರ್.ಟಿ.ಓ.	180.73
16	4216 ನ್ಯಾಯಾಂಗ ಆಡಳಿತ (ಕೇಂದ್ರ ಪುರಸ್ಕೃತ ಯೋಜನೆ)	10.66
17	4216 ಇತರೆ	411.52
18	4216 ಅಗ್ನಿಶಾಮಕ ಮತ್ತು ನಿಯಂತ್ರಣ	90.00
19	4216 ನ್ಯಾಯಾಲಯ ಕಟ್ಟಡ (ರಾಜ್ಯ ಪುರಸ್ಕೃತ)	165.00
20	4202 ಉನ್ನತ ಶಿಕ್ಷಣ	259.98
21	4202 ಪದವಿಪೂರ್ವ ಕಾಲೇಜು ಶಿಕ್ಷಣ	128.05
22	4202 ತಾಂತ್ರಿಕ ಶಿಕ್ಷಣ	28.04
23	2216 ಇತರೆ	119.26

ಕ್ರಮ ಸಂಖ್ಯೆ	ಲೆಕ್ಕಶೀರ್ಷಿಕೆ	2008-09ರ ಅನುದಾನ (ರೂ.ಲಕ್ಷಗಳಲ್ಲಿ)
24	2216 12ನೇ ಹಣಕಾಸು	
25	2059 ಯೋಜನೆ	235.00
26	2059 12ನೇ ಹಣಕಾಸು	27.38

2008-09ನೇ ಸಾಲಿನಲ್ಲಿ ಶಿವಮೊಗ್ಗ ಲೋಇ ವಿಭಾಗಕ್ಕೆ ಆಯವ್ಯಯ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಒದಗಿಸಲಾದ ಅನುದಾನದ ವಿವರ .

1	ಇತರೆ ರಸ್ತೆ ನಿರ್ಮಾಣ ಹಾಗೂ ಡಾಂಬರೀಕರಣ	8708.54
2	5054 ಸೇತುವೆಗಳ ನಿರ್ಮಾಣ	490.41
3	5054 ಇತರೆ ರಸ್ತೆ ನಿರ್ಮಾಣ	-
4	5054 ಕೇಂದ್ರ ರಸ್ತೆನಿಧಿ	1400.80
5	ವಿಶೇಷ ಘಟಕ ಯೋಜನೆ (ರಸ್ತೆ)	181.13
6	ವಿಶೇಷ ಘಟಕ ಯೋಜನೆ (ಸೇತುವೆ)	7.00
7	ಗಿರಿಜನ ಉಪಯೋಜನೆ (ರಸ್ತೆ)	25.00
8	5054 ನಬಾರ್ಡ್ ಯೋಜನೆ (ಸೇತುವೆ)	50.00
9	5054 ನಬಾರ್ಡ್ ಯೋಜನೆ (ರಸ್ತೆ)	1828.35
10	3054 ಯೋಜನೆ	1354.16
11	3054 12ನೇ ಹೆಣಕಾಸು	525.19

12. ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ವಿಧಾನ ಅದಕ್ಕಾಗಿ ನಿಗದಿಗೊಳಿಸಲಾದ ಮೊತ್ತ ಮತ್ತು ಫಲಾನುಭವಿಗಳ ವಿವರ .

- ಯಾವುದೂ ಇರುವುದಿಲ್ಲ -

13. ರಿಯಾಯಿತಿಗಳನ್ನು ಪಡೆದವರ : ಅಧಿಕಾರ ಪತ್ರಗಳನ್ನು ಮಂಜೂರು ಮಾಡಿದ ಬಗ್ಗೆ ವಿವರಗಳು .

-ಯಾವುದೂ ಇರುವುದಿಲ್ಲ-

14. ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಲಭ್ಯವಿರುವ ಮಾಹಿತಿಗಳ ವಿವರ.

Web site No.eesmg@kpwd.gov.in.

15. ಸಾರ್ವಜನಿಕ ಉಪಯೋಗಕ್ಕಾಗಿ ಪುಸ್ತಕ ಭಂಡಾರ ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಅಲ್ಲಿ ದೊರೆಯುವ ಸೌಲಭ್ಯಗಳು ಮತ್ತು ಕೆಲಸದ ಅವಧಿಯ ವಿವರಗಳು :

-ಯಾವುದೂ ಇರುವುದಿಲ್ಲ-

16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಹುದ್ದೆ ಇತ್ಯಾದಿ ವಿವರಗಳು :

ಮಾಹಿತಿಹಕ್ಕು ಅಧಿನಿಯಮ 2005 (ಕೇಂದ್ರ ಅಧಿನಿಯಮ ಸಂ.22)ರ ಸೆಕ್ಷನ್ 5(1),5(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಲೋ.ಇ.ಗೆ ಸಂಬಂಧಿಸಿದ ವಿಭಾಗ ಕಛೇರಿಯ ಕೆಳಕಂಡ ಅಧಿಕಾರಿಗಳನ್ನು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕಾತಿ ಮಾಡಲಾಗಿದೆ .

1) ಕಾರ್ಯಪಾಲಕ ಇಂಜನಿಯರ್, ಶಿವಮೊಗ್ಗ ವಿಭಾಗ ಸಾರ್ವಜನಿಕ ಮಾಹಿತಿ ಅಧಿಕಾರಿ.

2) ಡಿ.ಎಸ್. ನಾಗರಾಜ್, ತಾಂತ್ರಿಕ ಸಹಾಯಕರು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ.

17. ನಿಗದಿಗೊಳಿಸಲಾಗುವ ಇತರೆ ಮಾಹಿತಿಗಳು :-

ಸರ್ಕಾರವು ಮಾಹಿತಿ ಪಡೆಯುವ ಹಕ್ಕು ಅಧಿನಿಯಮಗಳನ್ನು ರಚಿಸಿದ ನಂತರ ಅದರಲ್ಲಿ ಬೇರೆ ಯಾವುದಾದರೂ ಮಾಹಿತಿಗಳನ್ನು ನಿಗದಿಗೊಳಿಸಿದಲ್ಲಿ ಅದನ್ನು ಅಳವಡಿಸಲಾಗುವುದು.

ಜಿ.ಆರ್. ಚಂದ್ರಶೇಖರಪ್ಪ
ಕಾರ್ಯಪಾಲಕ ಅಭಿಯಂತರು,
ಲೋ ಬಂ ಮತ್ತು ಒ ಜ ಸಾ ಇಲಾಖೆ,
ಶಿವಮೊಗ್ಗ ವಿಭಾಗ, ಶಿವಮೊಗ್ಗ

ಪಿ.ಆರ್.459

OFFICE OF THE 10TH A.C.M.M. COURT, BANGALORE

DRAFT NOTIFICATION DATED:20TH MARCH, 2009

It is hereby to the general public that the following unclaimed vehicles are in the custody of Mahadevapura Police Station, Bangalore. which are seized under various C.Miss Cases.

Sl. No.	C.Miss No. and P.F. No.	Type of Vehicles	Registration No. Chasis No. & Engine No.of Vehicle
1.	559/07 PF No.141/07	Bajaj Super Scooter, Blue Colour	No.CAP-4091 Eng No.053206701
2.	560/07 PF No.142/07	TVS Victor Silver Colour	KA-03-EH-9229, Eng No. N3303M478451
3.	561/07 PF No.143/07	TVS Victor Silver & Blue Colour	KA-05-EW-1049, Eng No.0F4C51088008
4.	562/07 PF No.144/07	Sujuki Samurai Black Colour	KA-03-W-4779 Eng No.780M144401
5.	563/07 PF No.148/07	TVS Champ	AP-09, A-6392 Chasis No.D006F366403
6.	564/07 PF No.149/07	LML Verpa Scooter	KL-08-J-2261, Cha No.C4JD682602
7.	565/07 PF No.150/07	Kinetic Honda	KA-01-E-7080 Eng No.201464NIEGG
8.	584/07 PF No.154/07	Kinetic Honda Red Colour	KA-03-V-8687 Eng No.850960NIE08
9.	585/07 PF No.155/07	TVS-50 Green Colour	KA-03-K-2715 Eng No.A303F7330048
10.	586/07 PF No.156/07	TVS-50 Green Colour	CAE-1038, Eng No.113880781 Cha No.11330781
11.	587/07 PF No.157/07	Suzuki Samurai Red Colour	KA-03-, 1616, Eng No.7408M481407 Cha No.7408F439196
12.	589/07 PF No.158/07	Bajaj Pulsar Black Colour	KA-03-EK-4248 Eng No. BHERDKE56307
13.	590/07 PF No.159/07	Premier Car White Colour	CTO-8008
14.	598/07 PF No161/07	Hero Honda Motor Cycle	TN-31, B-5817, Eng No.98E10684 Chasis No.98E2F00535

Any person's having right to claim the above vehicle shall approach the Mahadevapura Police Station with necessary documents with in Two months from the date of this publication any failing which the above vehicle will be confiscated to Government.

Any claims received after the due date will no be emtertained.

Inspector of Police,
Mahadevapura Police Station, Bangalore-560048.

PR-464

PROCEEDINGS OF ASSISTANT COMMISSIONER OF COMMERCIAL TAXES, LOCAL VAT OFFICE-025, BANGALORE

Present: Narasappa, Asst. Commissioner of Commercial Taxes.

Subject: Loss of "C" Form in case of M/s Westfalia Separator India Pvt Ltd., #7B, Bommasandra Industrial Area, Hebbagodi, Bangalore-560100.

Read: Letter Dated: 19.02.2009 of M/s Westfalia Separator India Pvt Ltd., Bangalore.

Preamble:

M/s Westfalia Separator India Pvt Ltd., Bangalore-560099 is a registered dealer born on the files of this office bearing TIN 29050219932. The company in its letter cited at read above has intimated that the following "C" Form issued by the department have been lost in transit.

1) TCK-R 3668588

The company has adduced the proof for having filed the complaint to police authorities for loss of above "C" Form and executed Indemnity Bond in favour of the Government as laid down under Rule 12(2) and 12(9) of CST Act, 1956.

In the instant case since the 'C' Forms mentioned as above, is stated to be lost in transit, the forms so lost is treated as invalid. Hence this order.

ORDER NO.ACCT/LVO-025/2008-09, DATED:28TH MARCH, 2009

In view of the circumstances explained as above, the following "C" form are treated as invalid with immediate effect.

C Forms No.	Date of Issue
1) TCK-R 3668588	18.09.2008

Assistant Commissioner of Commercial Taxes,
L.V.O-025, Bangalore.

STATEMENT SHOWING LOSS OF "C" FORMS IN THE FOLLOWING CASES IN THE OFFICE OF THE A.C.C.T, L.V.O.-025, BANGALORE

Sl. No.	Number (Including Code No.) of declaration Forms Lost destroyed or stolen	Name and address of the dealer to whom declaration Forms/is/are issued by the department with date of C form issue	Registration Certificate No.of the dealer under CST Act, 1956	The address of the dealer to whom the declaration is/are sent	Date of issue of Form/s by the dealer	Whether Lost/ Stolen destroyed	Remarks
1.	TCK-R 3668588	M/s Westfalia Separator India Pvt Ltd., # 7B, Bommasandra Industrial Area, Hebbagodi, Bangalore-560099	TIN-29050219932	M/s GEA Ecoflex Private Limited-A/7, Sector-10, Noida-201301	18.09.2008	Lost	Value Rs.26,28,763-00

Assistant Commissioner of Commercial Taxes,
L.V.O-025, Bangalore.

POLICE DEPARTMENT

PROCEEDINGS OF THE COMMISSIONER OF POLICE BANGALORE CITY

Sub: Controlling of places of public amusements.

Preamble:

Whereas, a large number of theatres, multiplexes and video theatres exhibiting cinematographic films admitting members of the public for consideration are functioning within the limits of Commissionerate of Police, Bangalore City.

2. Whereas, the theatres and multiplexes exhibiting cinematograph films to which members of the public are admitted for a consideration are included in the definition of Places of Public Amusements as defined in Sub Section 14 of Section 2 of The Karnataka Police Act, 1963, and the Commissionerate of Police, Bangalore City has not insisted so far, that these places of public amusement being run in the form of theatres and multiplexes should obtain a licence under the Karnataka Licencing and Controlling of Places of Public Amusements (Bangalore City) Order, 2002, as these theatres and multiplexes exhibiting cinematographic films are obtaining licences under the Cinemotograph Act, 1952 and the rules made thereunder and The Karnataka Cinemas (Regulation) Act, 1964 and the Commissioner of Police, Bangalore City is vested with the responsibility of maintaining law and order in the limits of the Commissionerate of Police, Bangalore City.

3. Whereas it is observed that different theatres and multiplexes exhibiting cinematograph films are following different times for exhibition of films and that there is no uniformity in the timings of the film shows and many of the cinema theatres and multiplexes situated in the limits of Commissionerate of Police, Bangalore City are exhibiting films up to 1.30 A.M., and the Karnataka Cinemas (Regulation) Act, 1964 Rule 41-A provides that cinematograph shows shall not commence before 10 A.M. and after 10 P.M. The observance of different timings for cinematograph shows by different theatres and multiplexes and in many cases, conducting the cinematograph shows up to 1.30 A.M. has given scope for incidents having a bearing on public order and also has given scope for problems in regulation of traffic, prevention of untoward incidents, prevention of crime and also has given scope for serious problems in effectively policing the city and ensuring smooth and fe flow of traffic. Therefore, in view of the need for preservation of public order and prevention of crime, it is necessary to prescribe uniform timings for exhibition of cinematograph shows in respect of the theatres and multiplexes situated in the limits of Commissionerate of Police, Bangalore City. This matter has been discussed in detail with the representatives of the Karnataka Film Chamber of Commerce at a meeting held in Vidhana Soudha under the Chairmanship of the Hon. Home Minister on 19.05.2009. After detailed deliberations, the Government were pleased to prescribed that all cinematograph shows shall start everyday, not before 10 A.M. and shall close not later than 11 P.M.

4. Therefore, it is necessary to control the period during which the theatres and multiplexes will exhibit cinematograph film shows, in the interest of preservation of public order prevention of untoward incidents, prevention of crime and smooth and safe traffic.

Hence the following order.

Order No. MAG(1)/AM/2/2009-10, Dated:21st May, 2009

I Shankar Bidari, Commissioner of Police, Bangalore City, in exercise of powers vested with me under section 31, Sub Section 1 of the Karnataka Police Act, 1963 hereby order that, all the theatres and multiplexes situated in the limits of the Commissionerate of Police, Bangalore City, will exhibit cinematograph film shows between 10 A.M. and 11 P.M. everyday. The theatres and multiplexes exhibiting cinematograph film shows are at liberty to adjust their show timings within the permitted period i.e., from 10 A.M. to 11 P.M.

2. This order will be applicable to all theatres and multiplexes exhibiting cinematograph film shows within the limits of the Commissionerate of Police, Bangalore City.

3. Any person owning or having any interest in running of any theatre or multiplex, violating this order, will be liable for prosecution and penalty u/s 103 of The Karnataka Police Act, 1963.

4. This Order will be effective from the date of publication in the Official Gazette.

5. This Order is issued with the previous sanction of the Government of Karnataka.

Given under my signature and seal this day, the 21st May, 2009.

SHANKAR BIDARI

PR-457 Commissioner of Police, Bangalore City.

ನೋಂದಣಿ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ), ಯಶವಂತಪುರ ಬೆಂಗಳೂರು-22, ಇವರ ಕಛೇರಿ ನಡವಳಿ

ಉಪಸ್ಥಿತರು: ಶ್ರೀ ಅಶ್ಫಾಕ್ ಅಹಮದ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರ, ಬೆಂಗಳೂರು (ಉತ್ತರ).

ವಿಷಯ: ವಾಹನ ಸಂಖ್ಯೆ: ಕೆಎ-04-ಎಂಎಫ್-2081 (ಮೋ.ಕಾರ್)ರ ನೋಂದಣಿ ರದ್ಧತಿ ಬಗ್ಗೆ.

ಉಲ್ಲೇಖ: 1) ಮಾಲೀಕರ ಅರ್ಜಿ ದಿನಾಂಕ:18.04.2009.

2) ಮೋ.ವಾ.ನಿ. ರವರ ವರದಿ ದಿನಾಂಕ:25.04.2009.

ಪ್ರಸ್ತಾವನೆ:

ವಾಹನ ಸಂಖ್ಯೆ: ಕೆಎ-04-ಎಂಎಫ್-2081 (ಲ.ಮೋ.ವಾ)ರ ಮಾಲೀಕರಾದ ಶ್ರೀ ಮೊಹಮ್ಮದ್ ಸಿದ್ಧಿಕ್, ನಂ.195, ನೇ ಮೇನ್, ಟೆಲಿಕಾಂ ಲೇಔಟ್, ಅಶ್ವಥ್ ನಗರ, ಬೆಂಗಳೂರು ರವರು ದಿನಾಂಕ:15.05.2008 ರಂದು ಈ ಕಛೇರಿಗೆ ಅರ್ಜಿ ಲ್ಲಿಸಿ ವಾಹನವು ಅಪಘಾತಗೊಳಗಾಗಿದ್ದು, ಸಂಪೂರ್ಣವಾಗಿ ಜಖಂಗೊಂಡಿದ್ದು, ದುರಸ್ತಿ ಮಾಡಲಾರದ ತಿಯಲ್ಲಿರುವುದರಿಂದ ನೋಂದಣಿಯನ್ನು ರದ್ದುಪಡಿಸಲು ಅನುಮತಿ ಕೋರಿರುತ್ತಾರೆ. ಈ ಕಛೇರಿಯ ಮೋಟಾರು ವಾಹನ ರೀಕ್ಷಕರು ವಾಹನವನ್ನು ಪರೀಕ್ಷಿಸಿ ದಿನಾಂಕ:25.04.2009 ರಂದು ವರದಿ ಸಲ್ಲಿಸಿದ್ದು, ವಾಹನವು ಅಪಘಾತಗೊಳಗಾಗಿದ್ದು, ಂಪೂರ್ಣವಾಗಿ ಜಖಂಗೊಂಡಿದ್ದು, ದುರಸ್ತಿ ಮಾಡಲಾಗದ ಸ್ಥಿತಿಯಲ್ಲಿದ್ದು, ರಸ್ತೆಯಲ್ಲಿ ಓಡಾಡಲು ಯೋಗ್ಯವಾಗಿಲ್ಲದ ಕಾರಣ ಾಹನದ ನೋಂದಣಿಯನ್ನು ರದ್ಧುಪಡಿಸಬಹುದು ಎಂದು ಶಿಫಾರಸ್ಸು ಮಾಡಿರುತ್ತಾರೆ. ವಾಹನದ ತೆರಿಗೆಯು ೀವಾವಧಿವರೆಗೆ ಪಾವತಿಯಾಗಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಮೋಟಾರು ವಾಹನ ಸಂಖ್ಯೆ: ಕೆಎ-04-ಎಂಎಫ್-081 (ಲ.ಮೋ.ವಾ) ರ ನೋಂದಣಿಯನ್ನು ರದ್ದುಮಾಡಿ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

ಆದೇಶ ಸಂಖ್ಯೆ: ಪ್ರಾ.ಸಾ.ಅ./ಬೆಂ(ಉ)/ ಕೆಎ-04-ಎಂಎಫ್-2081/09-10, ದಿನಾಂಕ:30ನೇ ಏಪ್ರಿಲ್, 2009

ಕೇಂದ್ರ ಮೋಟಾರು ವಾಹನ ಕಾಯ್ದೆ 1988ರ ವಿಧಿ 55(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ಫಾಕ್ ಅಹಮದ್ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರಿ ಆದ ನಾನು, ಮೇಲ್ಕಂಡ ರಣಗಳಿಂದಾಗಿ, ಮೋಟಾರು ವಾಹನ ಸಂಖ್ಯೆ: ಕೆಎ-04-ಎಂಎಫ್-2081 (ಲ.ಮೋ.ವಾ)ರ ಮೇಲೆ ಏನಾದರೂ ತೆರಿಗೆ, ಡಿಟ್ ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡು ಬಂದರೆ ಅದನ್ನು ವಾಹನದ ಮಾಲೀಕರೇ ಕಟ್ಟಬೇಕೆಂಬ ಬಂಧನೆಯೊಂದಿಗೆ ಸದರಿ ವಾಹನದ ನೋಂದಣಿಯನ್ನು ರದ್ದು ಮಾಡಿರುತ್ತೇನೆ.

ವಾಹನದ ವಿವರಗಳು

1.	ಮೋಟಾರು ವಾಹನ ಸಂಖ್ಯೆ	ಕೆಎ-04-ಎಂಎಫ್-2081
2.	ವಾಹನದ ನೋಂದಣಿ ದಿನಾಂಕ	06.05.2008
3.	ವಾಹನದ ತಯಾರಕನ ಹೆಸರು	Mahindra Renault Pvt. Ltd.,
4.	ವಾಹನದ ಮಾದರಿ	Saloon
5.	ವಾಹನ ತಯಾರಿಕೆ ವರ್ಷ	2008
6.	ಚಾಸೀಸ್ ಸಂಖ್ಯೆ	MAILSR4CB8ZD20339
7.	ಇಂಜಿನ್ ಸಂಖ್ಯೆ	UE 39588
8.	ಅಶ್ವಶಕ್ತಿ	48.8
9.	ಆಸನ ಸಾಮರ್ಥ್ಯ	5 in all
10.	ಮಾಲೀಕರ ಹೆಸರು ಮತ್ತು ವಿಳಾಸ	ಶ್ರೀ ಮೊಹಮ್ಮದ್ ಸಿದ್ಧಿಕ್, ನಂ.195, 6ನೇ ಮೇನ್, ಟೆಲಿಕಾಂ ಲೇಔಟ್, ಅಶ್ವಥ್ ನಗರ, ಬೆಂಗಳೂರು.

ಅಶ್ಫಾಕ್ ಅಹಮದ್

ಪಿ.ಆರ್.460 ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಬೆಂಗಳೂರು (ಉತ್ತರ).

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಖ್ಯೆ: ಡಿಆರ್‌ಸಿ/ಎಲ್‌ಕ್ಯೂಡಿ/ಸಿಆರ್./2008–09, ದಿನಾಂಕ:26ನೇ ಡಿಸೆಂಬರ್, 2008

ವಿಷಯ: ಕಾರ್ಯ ನಿರ್ವಹಿಸದೆ ಸ್ಥಗಿತಗೊಂಡಿರುವ ವರವಣೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ವರವಣೆ, ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ಪತ್ರಸಂಖ್ಯೆ: ಸನಿ48 ಸಮಾಪನೆ ಸಿಆರ್/2008–09, ದಿನಾಂಕ:12.12.2008.

ಪ್ರಸ್ತಾವನೆ:

ವರವಣೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ವರವಣೆ, ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವು ಬೈಲಾ ಪ್ರಕಾರ ತನ್ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸದೆ ಸ್ಥಗಿತಗೊಂಡಿರುತ್ತದೆಂದು ಕೋಲಾರ ಹಾಲು ಒಕ್ಕೂಟ ನಿ., ಗೌರಿಬಿದನೂರು ಶಿಬಿರದ ಉಪ ವ್ಯವಸ್ಥಾಪಕರು ವರದಿ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಮಾಪನಾಧಿಕಾರಿಯನ್ನು ನೇಮಕ ಮಾಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಆದುದರಿಂದ ಸದರಿ ಸಂಘವನ್ನು ಮುಂದುವರಿಸಿಕೊಂಡು ಹೋದಲ್ಲಿ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲದಿರುವುದರಿಂದ ಈ ಸಂಘವನ್ನು ಋಣ ಸಮಾಪನೆಗೆ ಒಳಪಡಿಸುವುದು ಸೂಕ್ತವೆಂದು ಮನಗಂಡು ಹಾಗೂ ಸದರಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ಬಿ ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್‌ಎಂ/ 2001 ದಿನಾಂಕ:21.11.2001ರಂತೆ ನನಗೆ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಆರ್. ಶ್ರೀಧರ್, ಸಹಕಾರ ಸಂಘಗಳ ಉಪನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಆದ ನಾನು ವರವಣೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ವರವಣೆ, ಗೌರಿಬಿದನೂರು ತಾಲ್ಲೂಕು ಈ ಸಂಘವನ್ನು ಋಣ ಸಮಾಪನೆಗೊಳಪಡಿಸಿ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಗೌರಿಬಿದನೂರು ತಾಲ್ಲೂಕು ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ ಮತ್ತು ಜವಾಬ್ದಾರಿಯನ್ನು ವಿಲೇವಾರಿ ಮಾಡಿ 3 ತಿಂಗಳ ಒಳಗೆ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿನಾಂಕ:26.12.2008ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್.69

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಖ್ಯೆ: ಡಿಆರ್‌ಸಿ/ಎಲ್‌ಕ್ಯೂಡಿ/ಸಿಆರ್./2008–09, ದಿನಾಂಕ:26ನೇ ಡಿಸೆಂಬರ್, 2008

ವಿಷಯ: ಕಾರ್ಯ ನಿರ್ವಹಿಸದೆ ಸ್ಥಗಿತಗೊಂಡಿರುವ ದಿನ್ನೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ದಿನ್ನೇನಹಳ್ಳಿ, ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ಪತ್ರಸಂಖ್ಯೆ: ಸನಿ48 ಸಮಾಪನೆ ಸಿಆರ್/2008–09, ದಿನಾಂಕ:12.12.2008.

ಪ್ರಸ್ತಾವನೆ:

ದಿನ್ನೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ದಿನ್ನೇನಹಳ್ಳಿ, ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವು ಬೈಲಾ ಪ್ರಕಾರ ತನ್ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸದೆ ಸ್ಥಗಿತಗೊಂಡಿರುತ್ತದೆಂದು ಕೋಲಾರ ಹಾಲು ಒಕ್ಕೂಟ ನಿ., ಗೌರಿಬಿದನೂರು ಶಿಬಿರದ ಉಪ ವ್ಯವಸ್ಥಾಪಕರು ವರದಿ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಮಾಪನಾಧಿಕಾರಿಯನ್ನು ನೇಮಕ ಮಾಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಆದುದರಿಂದ ಸದರಿ ಸಂಘವನ್ನು ಮುಂದುವರಿಸಿಕೊಂಡು ಹೋದಲ್ಲಿ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲದಿರುವುದರಿಂದ ಈ ಸಂಘವನ್ನು ಋಣ ಸಮಾಪನೆಗೆ ಒಳಪಡಿಸುವುದು ಸೂಕ್ತವೆಂದು ಮನಗಂಡು ಹಾಗೂ ಸದರಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ಬಿ ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ:21.11.2001ರಂತೆ ನನಗೆ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಆರ್. ಶ್ರೀಧರ್, ಸಹಕಾರ ಸಂಘಗಳ ಉಪನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಆದ ನಾನು ದಿನ್ನೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ದಿನ್ನೇನಹಳ್ಳಿ, ಗೌರಿಬಿದನೂರು ತಾಲ್ಲೂಕು ಈ ಸಂಘವನ್ನು ಋಣ ಸಮಾಪನೆಗೊಳಪಡಿಸಿ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಗೌರಿಬಿದನೂರು ತಾಲ್ಲೂಕು ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ ಮತ್ತು ಜವಾಬ್ದಾರಿಯನ್ನು ವಿಲೇವಾರಿ ಮಾಡಿ 3 ತಿಂಗಳ ಒಳಗೆ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿನಾಂಕ:26.12.2008ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್.70

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ಸಂಖ್ಯೆ: ಡಿಆರ್‌ಸಿ/ಎಲ್‌ಕ್ಯೂಡಿ/ಸಿಆರ್./2008-09, ದಿನಾಂಕ:26ನೇ ಡಿಸೆಂಬರ್, 2008

ವಿಷಯ: ಕಾರ್ಯ ನಿರ್ವಹಿಸದೆ ಸ್ಥಗಿತಗೊಂಡಿರುವ ಗುಟ್ಟೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಗುಟ್ಟೇನಹಳ್ಳಿ, ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ಪತ್ರಸಂಖ್ಯೆ: ಸನಿ48 ಸಮಾಪನೆ ಸಿಆರ್/2008-09, ದಿನಾಂಕ:12.12.2008.

ಪ್ರಸ್ತಾವನೆ:

ಗುಟ್ಟೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಗುಟ್ಟೇನಹಳ್ಳಿ ಗೌರಿಬಿದನೂರು ತಾಲ್ಲೂಕು ಈ ಸಹಕಾರ ಸಂಘವು ಬೈಲಾ ಪ್ರಕಾರ ತನ್ನ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸದೆ ಸ್ಥಗಿತಗೊಂಡಿರುತ್ತದೆಂದು ಕೋಲಾರ ಹಾಲು ಒಕ್ಕೂಟ ನಿ., ಗೌರಿಬಿದನೂರು ಶಿಬಿರದ ಉಪ ವ್ಯವಸ್ಥಾಪಕರು ವರದಿ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಮಾಪನಾಧಿಕಾರಿಯನ್ನು ನೇಮಕ ಮಾಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಆದುದರಿಂದ ಸದರಿ ಸಂಘವನ್ನು ಮುಂದುವರಿಸಿಕೊಂಡು ಹೋದಲ್ಲಿ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಿಲ್ಲದಿರುವುದರಿಂದ ಈ ಸಂಘವನ್ನು ಋಣ ಸಮಾಪನೆಗೆ ಒಳಪಡಿಸುವುದು ಸೂಕ್ತವೆಂದು ಮನಗಂಡು ಹಾಗೂ ಸದರಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2) ಬಿ ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ:21.11.2001ರಂತೆ ನನಗೆ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಆರ್. ಶ್ರೀಧರ್, ಸಹಕಾರ ಸಂಘಗಳ ಉಪನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಆದ ನಾನು ಗುಟ್ಟೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಗುಟ್ಟೇನಹಳ್ಳಿ ಗೌರಿಬಿದನೂರು ತಾಲ್ಲೂಕು ಈ ಸಂಘವನ್ನು ಋಣ ಸಮಾಪನೆಗೊಳಪಡಿಸಿ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಗೌರಿಬಿದನೂರು ತಾಲ್ಲೂಕು ಇವರನ್ನು ಸಮಾಪನಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ ಮತ್ತು ಜವಾಬ್ದಾರಿಯನ್ನು ವಿಲೇವಾರಿ ಮಾಡಿ 3 ತಿಂಗಳ ಒಳಗೆ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಈ ಕಛೇರಿ ಮೊಹರಿನೊಂದಿಗೆ ದಿನಾಂಕ:26.12.2008ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್.71

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಶಿವಮೊಗ್ಗಜಿಲ್ಲೆ, ಶಿವಮೊಗ್ಗ

ನಂ.ಕ್ರಮಾಂಕ:ಡಿಆರ್‌ಎಸ್/ಎಲ್‌ಕ್ಯೂಡಿ/16/2007-08/1442, ದಿನಾಂಕ:23ನೇ ಡಿಸೆಂಬರ್, 2008

ವಿಷಯ: ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಶಿವಮೊಗ್ಗ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ:1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗರವರ ಪತ್ರ ಸನಿ24/ಸಮಾಪನೆ/ಸಿಆರ್91/08-09/483/ದಿನಾಂಕ:30.07.2008.

2) ಈ ಕಛೇರಿಯ ನೋಟೀಸ್ ಸಮಸಂಖ್ಯೆ ದಿನಾಂಕ:01.12.2008.

3) ಸಹಕಾರ ಸಂಘಗಳ ಸಹಾಯಕ ನಿಬಂದಕರು, ಶಿವಮೊಗ್ಗ ಉಪವಿಭಾಗ, ಶಿವಮೊಗ್ಗರವರ ಪತ್ರ ಸನಿ24/ಸಮಾಪನೆ/ಸಿಆರ್91/08-09/988, ದಿನಾಂಕ:11.12.2008.

ಪ್ರಸ್ತಾವನೆ:

31	ಕಗ್ಗಲೀಪುರ	ಬಿ.ಎಂ.ಕಾವಲ್ ಬ್ಲಾಕ್ 1 ಮತು 2 ಸರ್ವೆ ನಂ.40,61,66	35	303380/-	30338	31.03.2010
32	ಕಗ್ಗಲೀಪುರ	ಸಸಿಗಳ ನಿರ್ವಹಣೆ ಸಸ್ಯಕ್ಷೇತ್ರ ಅಳತೆ ಸೂಲಿಕೆರ 5"x8"	116160	81312/-	8131/-	31.03.2010
33	ಬೆಂಗಳೂರು ನಗರ ವಿಭಾಗ	ಮುಂಗಡ ಕಾಮಗಾರಿ ಬೆಂಗಳೂರು ನಗರ ವಿಭಾಗ	50 Ha.	664000/-	66400/-	31.03.2010
34	ಬೆಂಗಳೂರು ನಗರ ವಿಭಾಗ	ಬೆಂಗಳೂರು ನಗರ ವಿಭಾಗ	88000	176000/-	17600/-	31.03.2010

2406-01-101-2-11-Forest Conservation Development Regeneration & cultural Operation-139-Compensatory Afforestation for Regularisation of Encroachment of Forest Land

ಕ್ರಮ ಸಂಖ್ಯೆ	ವಲಯದ ಹೆಸರು	ಕಾಮಗಾರಿಯ ಹೆಸರು	ಭೌತಿಕ (ಹೆ. ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಕಾಮಗಾರಿ ಪೂರೈಸಬೇಕಾದ ದಿನಾಂಕ
1	ಬೆಂಗಳೂರು	ಒಂದನೇ ವರ್ಷದ ನೆಡುತೋಪು ನಿರ್ವಹಣೆ Jarakabande Kaval B Block	10 (4000 Trs. and 2000 Pit)	66000	6600	31.03.2010

ನಿಬಂಧನೆಗಳು

1. ಟೆಂಡರ್ ಫಾರಂಗಳನ್ನು ಫಾರಂಗೆ ರೂ.200.00 ಹಾಗೂ ತೆರಿಗೆ ಪಾವತಿ ಮಾಡಿ ದಿನಾಂಕ: 22.06.2009 ರಂದು ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1.00 ಗಂಟೆಯವರೆಗೆ ಪಡೆಯಬಹುದು ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುಳ್ಳವರು ಬೆಂಗಳೂರು ನಗರ ವಿಭಾಗದಲ್ಲಿ 2009-10ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಿಕೊಳ್ಳಬೇಕು. ತಪ್ಪಿದಲ್ಲಿ ಅಂತವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.
2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಬ್ಲಾಕ್‌ಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿ ಪ್ರತ್ಯೇಕವಾಗಿ ಇ.ಎಂ.ಡಿ.ಯೊಂದಿಗೆ ಸಲ್ಲಿಸುವುದು.
3. ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು ದಿನಾಂಕ: 22.06.2009 ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಮೇಲ್ಕಂಡ ದಿನಾಂಕದಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು, ಪುನಃ ದಿನಾಂಕ: 24.06.2009 ರಂದು ಅಪರಾಹ್ನ 4.00 ಗಂಟೆಗೆ ಟೆಂಡರ್‌ನ್ನು ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.
4. ಸದರಿ ಕಾಮಗಾರಿಗಳು ಕಾಲಬದ್ಧ ಕೆಲಸಗಳಾಗಿದ್ದು, ಒಂದು ವೇಳೆ ಯಾವುದಾದರೂ ಕಾಮಗಾರಿಯನ್ನು ಟೆಂಡರ್‌ಗೆ ಮುಂಚೆ ಕೈಗೊಂಡಿದ್ದ ಪಕ್ಷದಲ್ಲಿ ಮತ್ತು ಕೆಲವು ಕೆಲಸಗಳನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳನ್ನು ಈ ಪ್ರಕಟಣೆಯ ಟೆಂಡರಿನಿಂದ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡಲಾಗುವುದು.

5. ಪ್ರತಿ ಟೆಂಡರ್‌ದಾರರು ಈ ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಅವರೇ ಸ್ವಂತವಾಗಿ ಮಾಡಿಕೊಳ್ಳಬೇಕು.
6. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗಧಿಪಡಿಸಿರುವ ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕಾಗುತ್ತದೆ.
7. ಗುತ್ತಿಗೆದಾರರು ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹವನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ತೀರ್ಮಾನವೇ ಅಂತಿಮವಾಗಿರುತ್ತದೆ.
8. ನಿಗಧಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
9. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.
10. ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರಿಂದ ತಿಳುವಳಿಕೆ ನೀಡಿದ 7 ದಿನಗಳೊಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ಸಹಿ ಮಾಡತಕ್ಕದ್ದು ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರು ಹೊಂದಿರುತ್ತಾರೆ.
11. ಈ ಮೇಲಿನ ಕಾಮಗಾರಿಗಳ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆ ನಿಬಂಧನೆಗೆ ಒಳಪಟ್ಟಿರುತ್ತದೆ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗಳಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.
12. ಎಲ್ಲಾ ಕೆಲಸಗಳು ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಅಳತೆ ಪುಸ್ತಕದೊಂದಿಗೆ (ಎಂ.ಬಿ. / ಎಫ್. ಎನ್.ಬಿ.) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಮಾರಾಟ ತೆರಿಗೆ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿ ಹಣವನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.
13. ಕೆಲಸಗಳನ್ನು ನಿರ್ವಹಿಸುವಾಗ ಇತರೆ ನೆಡುತೋಪುಗಳನ್ನು ಹಾಳು ಮಾಡಿದಲ್ಲಿ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನಿನ ಕ್ರಮ ಜರುಗಿಸಲಾಗುವುದು.
14. ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.
15. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡಿಫಾಲ್ಟ್‌ರ್ ಆಗಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
16. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತಃ ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ಕಷ್ಟ, ಇತ್ಯಾದಿಗಳಿಗೆ ಜವಾಬ್ದಾರರಲ್ಲ.
17. ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ಪಟ್ಟಿಗಳ ಅಂದಾಜು ದರವಾಗಿರುತ್ತದೆ. (ಅಪ್ರಾಕ್ಸಿಮೇಟ್) ಹಣವನ್ನು ಪಾವತಿಸಿದಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಣ ಪಾವತಿಸಲಾಗುವುದು.
18. ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ / ಮೌಖಿಕ ಆದೇಶಕ್ಕನುಗುಣವಾಗಿ ಇರತಕ್ಕದ್ದು ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರಬೇಕಾಗಿರುತ್ತದೆ.
19. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತಿ ವಿಶೇಷ ಸಂದರ್ಭಗಳು ಬಂದಲ್ಲಿ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಗುತ್ತಿಗೆ ದರಗಳಲ್ಲಿ ಶೇ.5 ರಂತೆ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರು

ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ, ಅಂತಹ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇ.ಎಂ.ಡಿ. ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ಟೆಂಡರ್‌ನ್ನು ಕಂಪನಿಯ ವತಿಯಿಂದ / ಸಂಘ ಸಂಸ್ಥೆಗಳು ಕೊಡುವ ಪಕ್ಷದಲ್ಲಿ
   ಅ) ಕಂಪನಿಯ / ಸಂಘ ಸಂಸ್ಥೆಗಳ ನೋಂದಾಯಿತ ಸಂಸ್ಥೆಗಳಾಗಿರಬೇಕು.
   ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ಗೆ ಲಗತ್ತಿಸಬೇಕು.
21. ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಚಿಸಿದಲ್ಲಿ ಇಎಂಡಿ ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು ಹಾಗೂ ಸಂಘಗಳ ನೋಂದಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೋಂದಣಿಯಾಗಿರಬೇಕು. ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
22. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇ.ಎಂ.ಡಿ. ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ಕಲಂ 109 ಮತ್ತು 119 ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.
23. ಯಶಸ್ವಿ ಬಿಡ್ಡುದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5 ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.
24. ಕೆಲಸ ಪೂರ್ಣಗೊಂಡ ದಿನಾಂಕದಿಂದ ಒಂದು ವರ್ಷದೊಳಗಾಗಿ ಕಾಮಗಾರಿಯಲ್ಲಿ ಯಾವುದೇ ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ದೋಷ ಪರಿಹರಿಸಬೇಕಾಗುವುದು. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ಖರ್ಚನ್ನು ಭರಿಸಲಾಗುವುದು.
25. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ / ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ನಷ್ಟ ಪರಿಹಾರವನ್ನು ಗುತ್ತಿಗೆದಾರರೇ ನೀಡಬೇಕಾಗುತ್ತದೆ.
26. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.
27. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೋಂದಣಿಯನ್ನು ಮಾಡಲಾಗುವುದಿಲ್ಲ.
28. ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ ಇವರು ವಿಧಿಸುವ ಷರತ್ತಿಗೆ ಗುತ್ತಿಗೆದಾರರು ಬದ್ಧರಾಗಿರಬೇಕು.

ಪಿ.ಆರ್. 444 ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು

ಸಾಮಾಜಿಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ

ನೆಡುತೋಪು ನಿರ್ವಹಣೆ, ನೆಡುತೋಪು ನಿರ್ಮಾಣ, ಸಸಿ ನಿರ್ವಹಣೆ ಮತ್ತು ಬೆಳೆಸುವ ಬಗ್ಗೆ ಟೆಂಡರ್

ಎ2/ಬಿಯುಡಿ/ಟೆಂಡರ್/ಸಿಆರ್–13/2009–10, ದಿನಾಂಕ: 5ನೇ ಜೂನ್ 2009.

ಈ ಮೂಲಕ ಸಾರ್ವಜನಿಕರಿಗೆ ತಿಳಿಪಡಿಸುವುದೇನೆಂದರೆ 2009ರ ಮಳೆಗಾಲದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 2009–10ನೇ ಸಾಲಿಗೆ ನೆಡುತೋಪು ಬೆಳೆಸಲು ಈ ಮುಂದೆ ತಿಳಿಸಲಾಗಿರುವ ನಿಬಂಧನೆಗಳ ಮೇರೆಗೆ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ: 19–06–2009ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಈ ಕೆಳಗೆ ಸಹಿ ಮಾಡಿರುವವರು ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4 ಗಂಟೆಗೆ ತೆರೆಯುವರು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಅಥವಾ ಕಾರಣಾಂತರದಿಂದ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ 23–06–2009ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00

ಗಂಟೆಗೆ ತೆರೆಯಲಾಗುವುದು. ಕಾರಣಾಂತರಗಳಿಂದ ಈ ದಿನವೂ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 27-06-2009 ರಂದು ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಹಾಗೂ ಅದೇದಿನ ಟೆಂಡರ್ ಲಕೋಟೆಯನ್ನು ಸಂಜೆ 4.00 ಘಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

1) ವಿಶೇಷ ಅಭಿವೃದ್ಧಿ ಯೋಜನೆ

ಕ್ರ ಸಂ.	ವಲಯದ ಹೆಸರು	ಕಾಮಗಾರಿ ವಿವರ	ಮಾದರಿ	ಭೌತಿಕ ಗುರಿ (ಹೆ.ಗಳಲ್ಲಿ)	ಟೆಂಡರ್‌ನ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
(ಅ) 1ನೇ ವರ್ಷದ ನೆಡುತೋಪು ಪೋಷಣೆ							
1	ಬಂಗಾರಪೇಟೆ	ರಾಮಸಾಗರ ಕೆರೆ	ಕೆರೆ ಅಂಗಳ	20ಹೆ.	133000.00	3325.00	31-3-2010
2.	ಮಾಲೂರು	ಬರಗೂರು	"	10ಹೆ.	66500.00	1665.00	31-3-2010
		ಶಿವಾರಪಟ್ಟಣ	"	8ಹೆ.	53200.00	1330.00	31-3-2010
		ಅರಳೇರಿ	"	8ಹೆ.	53200.00	1330.00	31-3-2010
3.	ಮುಳಬಾಗಲು	ನಲ್ಲೂರು	"	10ಹೆ.	66500.00	1665.00	31-3-2010
		ಗಂಜಿಗುಂಟೆ	"	10ಹೆ	66500.00	1665.00	31-3-2010
		ಯಲವಳ್ಳಿ	"	5ಹೆ.	33250.00	835.00	31-3-2010
		ವೈ.ಗೊಲ್ಲಹಳ್ಳಿ	"	5ಹೆ.	33250.00	835.00	31-3-2010
4.	ಶ್ರೀನಿವಾಸಪುರ	ಗಾಂಡ್ಲಹಳ್ಳಿ	"	10ಹೆ.	66500.00	1665.00	31-3-2010
(ಅ) 2009ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸುವುದು (ಸಸಿಗಳ ನಿರ್ವಹಣೆ ಸೇರಿ)							
1.	ಮಾಲೂರು	ನಾಗಪುರ	ಕೆರೆ ಅಂಗಳ	5ಹೆ.	63500.00	1590.00	31-3-2010
		ತ್ಯುಣಸಿ	"	5ಹೆ.	63500.00	1590.00	31-3-2010
2.	ಮುಳಬಾಗಲು	ದುಗ್ಗಸಂದ್ರ	"	10ಹೆ.	127000.00	3175.00	31-3-2010
		ತಾವರೆಕೆರೆ	"	20ಹೆ.	254000.00	6350.00	31-3-2010
		ಯಲಗೊಂಡಹಳ್ಳಿ ಜಂಬುಕೆರೆ	"	10ಹೆ.	127000.00	3175.00	31-3-2010
		ಯಲಗೊಂಡಹಳ್ಳಿ ದೊಡ್ಡ ಕೆರೆ	"	10ಹೆ.	127000.00	3175.00	31-3-2010
		ಕವತನಹಳ್ಳಿ	"	10ಹೆ.	127000.00	3175.00	31-3-2010
ಮುಂಗಡ ಕಾಮಗಾರಿ (ಸಸಿ ಬೆಳೆಸುವುದು ಸೇರಿ)							
1.	ಬಂಗಾರಪೇಟೆ	ದೊರೆಕೆರೆ	ಕೆರೆ ಅಂಗಳ	15ಹೆ.	202245.00	5060.00	31-3-2010
2.	ಮುಳಬಾಗಲು	ಹೆಚ್.ಗೊಲ್ಲಹಳ್ಳಿ	"	12.5ಹೆ.	168540.00	4215.00	31-3-2010
3.	ಮಾಲೂರು	ಎಂ.ಹೊಸಹಳ್ಳಿ	"	5ಹೆ.	67415.00	1685.00	31-3-2010
		ಉಪ್ಪಾರಹಳ್ಳಿ	"	5ಹೆ.	67415.00	1685.00	31-3-2010
		ನಲ್ಲಂಡಹಳ್ಳಿ	"	10ಹೆ.	127000.00	3175.00	31-3-2010
		ಎಟವಗೊಳ್ಳಿ	"	5ಹೆ.	67415.00	1685.00	31-3-2010
4.	ಶ್ರೀನಿವಾಸಪುರ	ಶೇಷಪುರ	"	5ಹೆ.	67415.00	1685.00	31-3-2010
		ಪಣಸಮಾಕನಹಳ್ಳಿ	"	5ಹೆ.	67415.00	1685.00	31-3-2010

ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಲು ತಿಳಿಸಿದೆ.

ನಿಬಂಧನೆಗಳು

1) ಟೆಂಡರ್ ಫಾರಂಗಳನ್ನು ಪ್ರತಿ ಫಾರಂಗೆ ರೂ. 200.00 ಹಾಗೂ ಅನ್ವಯಿಸುವ ತೆರಿಗೆ ಪಾವತಿ ಮಾಡಿ ದಿನಾಂಕ: 19.06.09 ಮತ್ತು 23-06-09 ಹಾಗೂ 27-06-09 ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1 ಗಂಟೆಯವರೆಗೆ ಪಡೆಯಬಹುದಾದ ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ವಿಭಾಗದಲ್ಲಿ 2009-10ನೇ

ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು. ತಪ್ಪಿದಲ್ಲಿ ಅಂತಹವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಘಟಕಕ್ಕೆ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿ ಪ್ರತ್ಯೇಕ ಇ.ಎಂ.ಡಿ.ಯೊಂದಿಗೆ ಸಲ್ಲಿಸುವುದು. ಘಟಕವಾರು ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ಸರಾಸಗಟಾಗಿ ತಿರಸ್ಕರಿಸಲಾಗುವುದು.

3) ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು 19-06-2009ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಅಂದು 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು. ಒಂದು ವೇಳೆ ಅಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ನಿಬಂಧನೆಗಳಿಗೆ ಒಳಪಟ್ಟು ಪುನಃ ದಿನಾಂಕ: 23.6.09ರಂದು ಟೆಂಡರು ಸ್ವೀಕರಿಸಲಾಗುವುದು. ಮತ್ತು ಅಪರಾಹ್ನ 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು. ಇದಕ್ಕೆ ಟೆಂಡರು ಫಾರಂಗಳನ್ನು ದಿನಾಂಕ: 22-06-09ರಂದು ಕಛೇರಿ ವೇಳೆಯಲ್ಲಿ 1.00 ಗಂಟೆವರೆಗೆ ನೀಡಲಾಗುವುದು. ಈ ದಿನವೂ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 27-6-09ರಂದು ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಅದೇ ದಿನ ಟೆಂಡರ್ ಲಕೋಟೆಯನ್ನು ಸಂಜೆ 4.00 ಘಂಟೆಗೆ ಟೆಂಡರನ್ನು ತೆರಯಲಾಗುವುದು. ಇದಕ್ಕೆ ಟೆಂಡರ್ ಫಾರಂಗಳನ್ನು ದಿನಾಂಕ: 26-06-2009ರಂದು ಈ ಕಛೇರಿ ವೇಳೆಯಲ್ಲಿ ಮಧ್ಯಾಹ್ನ 1.00 ಘಂಟೆವರೆಗೆ ನೀಡಲಾಗುವುದು ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

4) ಈ ಸದರಿ ಕಾಮಗಾರಿಗಳು ಋತುಮಾನದ ಕೆಲಸಗಳಾಗಿದ್ದು ಯಾವುದಾದರೂ ಕಾಮಗಾರಿಯನ್ನು ಟೆಂಡರ್‌ಗೆ ಮುಂಚೆ ಕೈಗೊಂಡಿದ್ದಲ್ಲಿ ಮತ್ತು ಕೆಲಸಗಳನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳನ್ನು ಈ ಪ್ರಕಟಣೆಯ ಟೆಂಡರ್‌ನಿಂದ ಹೊರತುಪಡಿಸಿ ಉಳಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಕಾಮಗಾರಿ ಕೈಗೊಳ್ಳಲು ಆದೇಶ ನೀಡಲಾಗುವುದು.

5) ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಸ್ವಂತವಾಗಿ ಮಾಡಿಕೊಳ್ಳಬೇಕು.

6) ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗಧಿಪಡಿಸಿರುವ ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದು ಡಿ.ಡಿ, ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕು.

7) ಗುತ್ತಿಗೆದಾರರು ಯಾವುದೇ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಸಾಮಾಜಿಕ ಅರಣ್ಯ ವಿಭಾಗ ಕೋಲಾರರವರ ತೀರ್ಮಾನವೇ ಅಂತಿಮವಾಗಿರುತ್ತದೆ.

8) ನಿಗಧಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

9) ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

10) ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಜಿಕ ಅರಣ್ಯ ವಿಭಾಗ, ಕೋಲಾರ ಇವರಿಂದ ತಿಳುವಳಿಕೆ ನೀಡಿದ 7 ದಿವಸಗಳ ಒಳಗಾಗಿ ನಿರ್ಧಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ರೂ. 200/- ಮೌಲ್ಯದ ಛಾಪಾ ಕಾಗದದಲ್ಲಿ ಸಹಿ ಮಾಡಿ ಸಲ್ಲಿಸತಕ್ಕದ್ದು ಈ ಅವಧಿಯಲ್ಲಿ ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಇವರು ಹೊಂದಿರುತ್ತಾರೆ.

11) ಈ ಮೇಲಿನ ಕಾಮಗಾರಿ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾಯೋಜನೆ ಅನುಮೋದನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ವಿಳಂಬಿತ ಹಣ ಪಾವತಿಗಳಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

12) ಎಲ್ಲಾ ಕೆಲಸಗಳು ಸಕಾಲಕ್ಕೆ ಸರಿಯಾಗಿ ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಕ್ಷೇತ್ರ ಅಳತೆ ಪುಸ್ತಕದೊಂದಿಗೆ (ಎಂಬಿ/ಎಫ್‌ಎನ್‌ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಮಾರಾಟ ತೆರಿಗೆ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿಯನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.

13) ಕೆಲಸಗಳನ್ನು ನಿರ್ವಹಿಸುವಾಗ ಇತರೆ ನೆಡುತೋಪುಗಳಿಗೆ ಹಾನಿ ಉಂಟುಮಾಡಿದಲ್ಲಿ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

14) ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

15) ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ/ಅವಕಾಶವಿರುವುದಿಲ್ಲ. ನ್ಯಾಯಾಲಯಗಳಲ್ಲಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟಂತಹ ಯಾವುದೇ ವ್ಯಕ್ತಿಗಳು ಈ ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ.

16) ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತಃ ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ನಷ್ಟ/ಹಾನಿ ಇತ್ಯಾದಿಗಳಿಗೆ ಜವಾಬ್ದಾರರಲ್ಲ.

17) ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ಪಟ್ಟಿಗಳ ಅಂದಾಜು ಸಂಭವನೀಯ ದರವಾಗಿರುತ್ತದೆ. ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಾಗೂ ಕ್ಷೇತ್ರ ಅಳತೆಯನುಸಾರವಾಗಿ ಹಣ ಪಾವತಿಸಲಾಗುವುದು.

18) ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ / ಮೌಖಿಕ ಆದೇಶಗಳಿಗನುಗುಣವಾಗಿ ಇರತಕ್ಕದ್ದು ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರುತ್ತಾರೆ.

19) ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಮಂಜೂರಾದ ದರಗಳಲ್ಲಿ ಶೇ.5 ಕಡಿತಗೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ. ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20) ಟೆಂಡರ್‌ನ್ನು ಕಂಪನಿಯ ವತಿಯಿಂದ/ಸಂಘ ಸಂಸ್ಥೆಗಳು ಕೊಡುವ ಸಂದರ್ಭದಲ್ಲಿ

ಅ) ಕಂಪನಿಯು/ಸಂಘ ಸಂಸ್ಥೆಗಳ ನೊಂದಾಯಿತ ಸಂಸ್ಥೆಗಳಾಗಿರಬೇಕು.

ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

21) ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ. ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೊಂದಾವಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೊಂದಾವಣಿಯಾಗಿರಬೇಕು ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

22) ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ಅಥವಾ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಅಥವಾ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇಎಂಡಿ. ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963ರ ಕಾಲಂ 109 ಮತ್ತು 119ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

23) ಯಶಸ್ವಿಯಾದ ಬಿಡ್‌ದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5 ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ಮತ್ತು ಕಾಮಗಾರಿಯ ಮುಕ್ತಾಯ ವರದಿ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

24) ಕೆಲಸ ಪೂರ್ಣಗೊಂಡ ದಿನಾಂಕದಿಂದ 1-ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ಲೋಪ/ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಲೋಪ/ದೋಷ ಪರಿಹರಿಸಬೇಕಾಗುವುದು. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ವೆಚ್ಚವನ್ನು ಭರಿಸಲಾಗುವುದು.

25) ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ/ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ಅದಕ್ಕೆ ಗುತ್ತಿಗೆದಾರರೆ ಜವಾಬ್ದಾರರಾಗಿದ್ದು ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಗುತ್ತಿಗೆದಾರರೇ ನೀಡಬೇಕಾಗುತ್ತದೆ.

26) ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

27) ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೊಂದಣಿಯನ್ನು ಮಾಡಲಾಗುವುದಿಲ್ಲ.

28) ಸರ್ಕಾರದಿಂದ ಆಗಿಂದಾಗ್ಗೆ ಬರುವ ಆದೇಶಗಳನ್ವಯ ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗದವರು ವಿಧಿಸುವ ಷರತ್ತುಗಳ ಬದಲಾವಣೆಗಳಿಗೆ ಗುತ್ತಿಗೆದಾರರು ಬದ್ಧರಾಗಿರಬೇಕು.

29) ಟೆಂಡರ್ ಫಾರಂಗಳನ್ನು ಬೇರೆಯವರ ಹೆಸರಿಗೆ ಪರಭಾರೆ ಮಾಡುವಂತಿಲ್ಲ ಈ ಕಛೇರಿಯಿಂದ ನೀಡಲಾದ ಅಧಿಕೃತ ಟೆಂಡರ್ ಫಾರಂಗಳನ್ನು ಹೊರತು ಬೇರಾವ ಮುದ್ರಿತ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.

30) ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಲಸದ ಸ್ಥಳ, ಪರಿಮಾಣ ಹಾಗೂ ಅಂದಾಜು ಮೊತ್ತಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತವೆ. ಇದಕ್ಕೆ ಕಾಮಗಾರಿಗಳ ತತ್ಸಂಬಂಧಿತ ವ್ಯತ್ಯಾಸದ ಪರಿಮಾಣಕ್ಕೆ ಪ್ರತ್ಯೇಕ ಟೆಂಡರು ಕರೆಯಲಾಗುವುದಿಲ್ಲ. ಆದರೆ ಅದೇ ದರದಲ್ಲಿ ವ್ಯತ್ಯಾಸಿತ ಪರಿಮಾಣದ ಕೆಲಸಗಳನ್ನು ಕೈಗೊಳ್ಳಲು ಬದ್ಧರಾಗಬೇಕಾಗುತ್ತದೆ.

31) ಸಕ್ಷಮ ಪ್ರಾಧಿಕಾರದ ನಿರ್ಧಾರದ ಮೇರೆಗೆ ಯಾವುದೇ ಕಾಮಗಾರಿ ತೆಗೆದು ಹಾಕುವ ಹೊಸದಾಗಿ ಸೇರ್ಪಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

32) ಕಾಮಗಾರಿಗಳಿಗೆ ನಿರ್ದಿಷ್ಟಪಡಿಸಿದ ಮೊತ್ತವು ನೆಡುತೋಪು ಕಾವಲು ಕೆಲಸದ ಮೊತ್ತವನ್ನು ಒಳಗೊಂಡಿದ್ದು ಕಾಮಗಾರಿ ನಿರ್ವಹಣೆ ಬಾಬ್ತು ಪಾವತಿಯಲ್ಲಿ ಕಾವಲು ಮೊತ್ತವನ್ನು ಕಳೆದು ಪಾವತಿಸಲಾಗುವುದು.

ಪಿ.ಆರ್. 445 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ.

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-1.

ಅಧಿಸೂಚನೆ

ಸಂಖ್ಯೆ: ಇ.ಪ(1)123/2009-10/ಪಿಎಸ್‌ಸಿ, ದಿನಾಂಕ: 10ನೇ ಜೂನ್ 2009.

ವಿಷಯ: 2009ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಆಯೋಗದಿಂದ ನಡೆಸಲಾಗುವ **2009ನೇ** ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆ-'ಎ' ಅಥವಾ 'ಬಿ' ಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ **18-07-2009**. ಈ ಪರೀಕ್ಷೆಗಳನ್ನು **ಆಗಸ್ಟ್ 2009ರ** ಮಾಹೆಯಲ್ಲಿ ನಡೆಸಲಾಗುವುದು. ಪರೀಕ್ಷೆಗಳ ವಿವರವಾದ ವೇಳಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧ "ಎ" ಮತ್ತು "ಬಿ" ಗಳಲ್ಲಿ ನೀಡಿದೆ. ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಒಂದು ಅರ್ಜಿಯಲ್ಲಿ ಅನುಬಂಧ-'ಎ' ನಲ್ಲಿ ಗರಿಷ್ಠ 4 ಮತ್ತು ಅನುಬಂಧ-'ಬಿ' ನಲ್ಲಿ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು ವಿಷಯ ಸಂಕೇತಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಲು ಸೂಚಿಸಿದೆ. ಅಭ್ಯರ್ಥಿಗಳು ಪಾಸ್ ಪೋರ್ಟ್ ಅಳತೆಯ (4cm x 4cm) ಇತ್ತೀಚಿನ ಭಾವಚಿತ್ರವನ್ನು ಅರ್ಜಿಯ ನಿಗದಿತ ಸ್ಥಳದಲ್ಲಿ ಅಂಟಿಸಿ, ಭಾವಚಿತ್ರದ ಕೆಳಗೆ ನಿಗದಿಪಡಿಸಿರುವ ಬಾಕ್ಸ್‌ನಲ್ಲಿ ಸಹಿಮಾಡಿ ಅದನ್ನು ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸತಕ್ಕದ್ದು.

1. ನಮೂನೆ 'ಎ' ಯನ್ನು ಎಸ್.ಎ.ಎಸ್, ಖಜಾನೆ ಅಕೌಂಟ್ಸ್ ಮತ್ತು ಎಲೆಕ್ಟ್ರಿಸಿಟಿ ಪರೀಕ್ಷೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೆ ನಿಗದಿ ಪಡಿಸಿದೆ;
2. ನಮೂನೆ 'ಬಿ' ಯನ್ನು ಎಸ್.ಎ.ಎಸ್, ಖಜಾನೆ ಅಕೌಂಟ್ಸ್ ಮತ್ತು ಎಲೆಕ್ಟ್ರಿಸಿಟಿ ವಿಷಯಗಳ ಪರೀಕ್ಷೆಗಳಿಗೆ ಮಾತ್ರ ನಿಗದಿಪಡಿಸಿದೆ;

3. ಅಭ್ಯರ್ಥಿಗಳು ಆಯೋಗವು ನಿಗದಿಪಡಿಸಿರುವ ಒಂದೇ ಹಾಳೆಯನ್ನೊಳಗೊಂಡಂತಹ ಅರ್ಜಿ ನಮೂನೆಯನ್ನು ಮಾತ್ರ ಉಪಯೋಗಿಸತಕ್ಕದ್ದು. ಅದನ್ನು ಹೊರತುಪಡಿಸಿ ಬೇರೆ ಯಾವುದೇ ನಮೂನೆಗಳಲ್ಲಿ ಅಂದರೆ ಬೆರಳಚ್ಚು ಅಥವಾ ನೆರಳಚ್ಚು ಮಾಡಿದ, ಕೈ ಬರಹದ ಹಾಗೂ ಹಳೆಯ ನಮೂನೆಯ ಅರ್ಜಿಗಳನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. **ಈ ಹಿಂದೆ ವಿಭಾಗೀಯ ಮಟ್ಟದಲ್ಲಿ ನಡೆಸಲಾಗುತ್ತಿದ್ದ ಇಲಾಖಾ ಪರೀಕ್ಷೆಗಳನ್ನು (ಅನುಬಂಧ–'ಬಿ') ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.**

2. **ಇಲಾಖಾ ಪರೀಕ್ಷೆಗಳಲ್ಲಿ ಕೆಳಕಂಡ ವಿಷಯಗಳಿಗೆ ವಸ್ತುನಿಷ್ಠ ಬಹುಆಯ್ಕೆ ಮಾದರಿಯ (OBJECTIVE TYPE MULTIPLE CHOICE) ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು.**

1. ಅಕೌಂಟ್ಸ್ ಲೋಯರ್
2. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1
3. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2
4. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್
5. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
6. ಫಾರೆಸ್ಟ್ ಪತ್ರಿಕೆ–1
7. ಫಾರೆಸ್ಟ್ ಪತ್ರಿಕೆ–2
8. ಜನರಲ್ ಲಾ ಭಾಗ–2
9. ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್
10. ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಆಂಡ್ ಚೈಲ್ಡ್ ಡೆವೆಲಪ್‌ಮೆಂಟ್
11. ಮೋಟಾರ್ ವೆಹಿಕಲ್ಸ್
12. ಮೈನಿಂಗ್ ಭಾಗ–1
13. ಮೈನಿಂಗ್ ಭಾಗ–2
14. ಪ್ರಿಸನ್ಸ್
15. ಪೋರ್ಟ್ಸ್ ಹೈಯರ್
16. ಪೋರ್ಟ್ಸ್ ಲೋಯರ್
17. ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–1
18. ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–2
19. ಯೂಥ್ ಸರ್ವೀಸ್ ಮ್ಯಾನ್ಯುಯಲ್
20. ಎಕ್ಸೈಸ್
21. ಪೊಲೀಸ್ ಮ್ಯಾನ್ಯುಯಲ್
22. ಅಕೌಂಟ್ಸ್ ಹೈಯರ್
23. ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್)
24. ಫಾರೆಸ್ಟ್
25. ಫ್ಯಾಕ್ಟರೀಸ್ ಆಂಡ್ ಬಾಯ್ಲರ್ಸ್ ಲಾಸ್
26. ಲೇಬರ್
27. ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್
28. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–1
29. ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್
30. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1, ಪತ್ರಿಕೆ–2
31. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2
32. ಪಿ.ಡಬ್ಲ್ಯೂ.ಡಿ ಲೋಯರ್
33. ರಿಜಿಸ್ಟ್ರೇಷನ್
34. ಸಿರಿಕಲ್ಚರ್
35. ಕೋ–ಆಪರೇಷನ್

36. ಜನರಲ್ ಲಾ ಭಾಗ–1
37. ಮುನಿಸಿಪಲ್ ಆಂಡ್ ಲೋಕಲ್ ಬೋರ್ಡ್ಸ್
38. ಮಾರ್ಕೆಟಿಂಗ್
39. ರೆವಿನ್ಯೂ ಹೈಯರ್ ಭಾಗ–1
40. ರೆವಿನ್ಯೂ ಹೈಯರ್ ಭಾಗ–2
41. ರೆವಿನ್ಯೂ ಲೋಯರ್
42. ಕಮರ್ಷಿಯಲ್ ಟ್ಯಾಕ್ಸಸ್ ಭಾಗ–1 ಹೈಯರ್
43. ಕೋ–ಆಪರೇಟಿವ್ ಆಡಿಟ್
44. ಇನ್ಶೂರೆನ್ಸ್ ಅಡ್ವಾನ್ಸ್‌ಡ್
45. ಇನ್ಶೂರೆನ್ಸ್ ಹೈಯರ್, ಪತ್ರಿಕೆ–1 ಮತ್ತು 3
46. ಇನ್ಶೂರೆನ್ಸ್ ಲೋಯರ್, ಪತ್ರಿಕೆ–1 ಮತ್ತು 3
47. ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್
48. ಕರ್ನಾಟಕ ಕನ್ಸ್ಯೂಮರ್ ಪ್ರೋಟಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್
49. ಇಂಡಿಯನ್ ಕಾಂಟ್ರಕ್ಟ್ ಆಕ್ಟ್
50. ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್
51. ಕೆ.ಪಿ.ಎಸ್.ಸಿ. ರೆಕ್ರೂಟ್‌ಮೆಂಟ್ ರೂಲ್ಸ್
52. ಸೆಕ್ರೆಟೆರಿಯಟ್ ಮ್ಯಾನ್ಯುಯಲ್ ಭಾಗ–1
53. ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
54. ಎಸ್.ಎ.ಎಸ್ ಭಾಗ–1, ಪತ್ರಿಕೆ–2 ಮತ್ತು 3
55. ಎಸ್.ಎ.ಎಸ್ ಭಾಗ–2,
56. ಎಸ್.ಎ.ಎಸ್ ಭಾಗ–3
57. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–2 ಮತ್ತು 3
58. ಟ್ರೆಜರಿ ಅಕೌಂಟ್ಸ್ ಭಾಗ–2
59. ಎಲೆಕ್ಟ್ರಿಸಿಟಿ ಲಾಸ್
60. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್)ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–1
61. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಲೋಯರ್)ಎಕ್ಸಾಮಿನೇಷನ್
62. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್.

ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ **(Syllabus)**ಯಾವುದಾದರೂ ನಿಯಮಗಳು/ ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ **(Repealed)** ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಪ್ರಸಕ್ತ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ನಿಯಮ/ ಅಧಿನಿಯಮಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಈ ವಿಷಯಗಳಲ್ಲಿನ ಪಶ್ನೆಪತ್ರಿಕೆಗಳಲ್ಲಿ ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಪ್ರತಿ ಪ್ರಶ್ನೆಗೆ ನೀಡಲಾದ ನಾಲ್ಕು ಉತ್ತರಗಳ ಪೈಕಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಬೇಕಿರುತ್ತದೆ. ಪ್ರತಿ ಪ್ರಶ್ನೆಗೂ ಆಯ್ಕೆ ಮಾಡಲಾದ ಉತ್ತರವು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿರುತ್ತದೆಯೆಂದು ಅರಿತು, ತೃಪ್ತಿಹೊಂದಿದ ನಂತರವೇ ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪೆನ್ನಿನಿಂದ ಎನ್‌ಕೋಡ್ (ಸಂಕೇತ ಗುರುತು) ಮಾಡಬೇಕು, ತರುವಾಯ ತಪ್ಪು ಉತ್ತರಗಳನ್ನು ಯಾವುದೇ ಸಂದರ್ಭದಲ್ಲಿ ಅಳಿಸಲು ಸಾಧ್ಯವಿರುವುದಿಲ್ಲ.

ಮೇಲ್ಕಂಡ ವಿಷಯಗಳ ಪರೀಕ್ಷೆಯಲ್ಲಿ ನಿಯಮದಂತೆ ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದು. ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪರೀಕ್ಷೆಗೆ ನೀಡಲಾಗುವ ಉತ್ತರಪತ್ರಿಕೆಯ (OMR SHEET) ಮಾದರಿ ಪ್ರತಿಯನ್ನು ಕೊನೆಪುಟದಲ್ಲಿ ನೋಡಬಹುದು. ಈ ಕೆಳಕಂಡ ವಿಷಯಗಳಿಗೆ ಎಂದಿನಂತೆ ವಿವರಣಾತ್ಮಕ ಮಾದರಿಯಲ್ಲಿ (Descriptive Type) ಪರೀಕ್ಷೆ ನಡೆಸಲಾಗುವುದು.

1. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–2,ಪತ್ರಿಕೆ–1
2. ಎಸ್.ಎ. ಎಸ್. ಭಾಗ–1, ಪತ್ರಿಕೆ–1
3. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–1
4. ಇನ್ಶೂರೆನ್ಸ್ ಹೈಯರ್, ಪತ್ರಿಕೆ–2

5. ಇನ್ಸೂರೆನ್ಸ್ ಲೋಯರ್, ಪತ್ರಿಕೆ–2
6. ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ–1, ಪತ್ರಿಕೆ–1
7. ಸೆಕ್ರೆಟರಿಯಟ್ ಮ್ಯಾನ್ಯುಯಲ್ ಭಾಗ–2
8. ಕನ್ನಡಭಾಷೆ, ಪತ್ರಿಕೆ–1 ಮತ್ತು 2
9. ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)ಪತ್ರಿಕೆ–1 ಮತ್ತು2.
10. ಟ್ರಾನ್ಸ್‌ಲೇಷನ್ ಟೆಸ್ಟ್
11. ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–2

3. <u>ಅರ್ಜಿ ನಮೂನೆಗಳು:</u>

ಎ) ಇಲಾಖಾ ಪರೀಕ್ಷೆಗಳ ಅರ್ಜಿ ನಮೂನೆಗಳು ಸರ್ಕಾರಿ ಕೇಂದ್ರ ಪುಸ್ತಕಮಳಿಗೆ ಬೆಂಗಳೂರು, ಸರ್ಕಾರಿ ವಿಭಾಗೀಯ, ಜಿಲ್ಲಾ ಪುಸ್ತಕಮಳಿಗೆ ಮತ್ತು ಸರ್ಕಾರದ ಅಂಗೀಕೃತ ಪುಸ್ತಕ ವ್ಯಾಪಾರಿಗಳಲ್ಲಿ ಕ್ರಯಕ್ಕೆ ದೊರೆಯುತ್ತವೆ.

ಬಿ) ಅರ್ಜಿ ನಮೂನೆಯ ಕಾಲಂ 6 ರಲ್ಲಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ಅವರ ಸೇವಾ ಪುಸ್ತಕದಲ್ಲಿ ಇರುವಂತೆ ಮಾತ್ರ ಬರೆಯಬೇಕು.

ಅಭ್ಯರ್ಥಿಗಳು ಪ್ರಸ್ತುತ ಅರ್ಜಿಸಲ್ಲಿಸಿರುವ ವಿಷಯಗಳಲ್ಲಿ ಹಿಂದಿನ ಎರಡು ವರ್ಷಗಳ ಅವಧಿಯೊಳಗಿನ ಅಧಿವೇಶನಗಳಲ್ಲಿ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿದ್ದಲ್ಲಿ ಅದರ ವಿವರಗಳನ್ನು ಅಂದರೆ ವಿನಾಯಿತಿ ಪಡೆದ ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ ಮತ್ತು ಪರೀಕ್ಷಾಕೇಂದ್ರ ಇತ್ಯಾದಿಗಳನ್ನು ಅರ್ಜಿಯ ಕಾಲಂ (13)ರ ಅಂಕಣದಲ್ಲಿ ನಿರ್ದಿಷ್ಟವಾಗಿ ನಮೂದಿಸಬೇಕು. ಇಲ್ಲವಾದಲ್ಲಿ ಫಲಿತಾಂಶವನ್ನು ಸಿದ್ಧಪಡಿಸುವಾಗ ಹಿಂದೆ ಪಡೆದ ವಿನಾಯಿತಿಯನ್ನು ಪರಿಗಣಿಸಲಾಗುವುದಿಲ್ಲ. ಕನ್ನಡಭಾಷಾ ಪರೀಕ್ಷೆ ಪತ್ರಿಕೆ–1 ಮತ್ತು ಪತ್ರಿಕೆ–2 ರಲ್ಲಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು ವಿನಾಯಿತಿ ಪಡೆದ ವಿವರಗಳೊಂದಿಗೆ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ವಿನಾಯಿತಿಯನ್ನು ಪರಿಗಣಿಸುವುದಿಲ್ಲ.

ವಿಶೇಷ ಸೂಚನೆ:– (1) ಅಭ್ಯರ್ಥಿಗಳು ತಮ್ಮ ಅರ್ಜಿಯ ಮುಖಪುಟದಲ್ಲಿ ಹೆಸರು, ಮತ್ತು ವಿಳಾಸಗಳನ್ನು ಗಣಕಯಂತ್ರದಲ್ಲಿ ಮುದ್ರಿಸಲು ಅನುಕೂಲವಾಗಬೇಕಿರುವುದರಿಂದ ಕನ್ನಡಭಾಷೆಯಲ್ಲಿಯೇ ಭರ್ತಿಮಾಡತಕ್ಕದು.

ಆಯೋಗವು ನಡೆಸುವ ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೊದಲ ಪ್ರಯತ್ನದಿಂದಲೇ **<u>ಕಡ್ಡಾಯವಾಗಿ</u>** ಈ ಕೆಳಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಅರ್ಜಿಯೊಂದಿಗೆ ಡಿ.ಡಿ. ಮೂಲಕವೇ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ **<u>ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.</u>**

4. <u>ಶುಲ್ಕ:</u> (ಎ) ವಿವಿಧ ಇಲಾಖಾ ಪರೀಕ್ಷೆಗಳಿಗೆ ನಿಗದಿಪಡಿಸಲಾದ ಶುಲ್ಕದ ವಿವರ:–

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	<u>ವಿ ಷ ಯ</u>	ನಿಗದಿ ಪಡಿಸಲಾದ ಶುಲ್ಕ ರೂ.
1.	ಅಕೌಂಟ್ಸ್ ಲೋಯರ್	25–00
2.	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1	25–00
3.	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2	25–00
4.	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್	25–00
5.	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್	25–00
6.	ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	25–00
7.	ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	25–00
8.	ಜನರಲ್ ಲಾ ಭಾಗ–2	25–00
9.	ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್	25–00
10.	ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಆಂಡ್ ಚೈಲ್ಡ್ ಡೆವಲಪ್‌ಮೆಂಟ್	25–00
11.	ಮೋಟಾರ್ ವೆಹಿಕಲ್ಸ್	25–00
12.	ಮೈನಿಂಗ್ ಭಾಗ–1	25–00

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	ವಿ ಷ ಯ	ನಿಗದಿ ಪಡಿಸಲಾದ ಶುಲ್ಕ ರೂ.
13.	ಮೈನಿಂಗ್ ಭಾಗ–2	25–00
14.	ಪ್ರಿಸನ್ಸ್	25–00
15.	ಪೋರ್ಟ್ಸ್ ಹೈಯರ್	25–00
16.	ಪೋರ್ಟ್ಸ್ ಲೋಯರ್	25–00
17.	ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1	25–00
18.	ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2	25–00
19.	ಯೂಥ್ ಸರ್ವೀಸ್ ಮ್ಯಾನುಯಲ್	25–00
20.	ಎಕ್ಸೈಸ್	25–00
21.	ಪೋಲೀಸ್ ಮ್ಯಾನ್ಯುಯಲ್	25–00
22.	ಅಕೌಂಟ್ಸ್ ಹೈಯರ್	50–00
23.	ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್)	50–00
24.	ಫಾರೆಸ್ಟ್	50–00
25.	ಫ್ಯಾಕ್ಟರೀಸ್ ಆಂಡ್ ಬಾಯ್ಲರ್ಸ್ ಲಾಸ್	50–00
26.	ಲೇಬರ್	50–00
27.	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್	50–00
28.	ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್	50–00
29.	ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್	50–00
30.	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1	50–00
31.	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2	50–00
32.	ಪಿ.ಡಬ್ಲ್ಯೂ.ಡಿ ಲೋಯರ್	50–00
33.	ರಿಜಿಸ್ಟ್ರೇಷನ್	50–00
34.	ಸಿರಿಕಲ್ಚರ್	50–00
35.	ಕೋ–ಆಪರೇಷನ್	50–00
36.	ಜನರಲ್ ಲಾ ಭಾಗ–1	50–00
37.	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್	50–00
38.	ಮಾರ್ಕೆಟಿಂಗ್	50–00
39.	ರೆವಿನ್ಯೂ ಹೈಯರ್ ಭಾಗ–1	50–00
40.	ರೆವಿನ್ಯೂ ಹೈಯರ್ ಭಾಗ–2	50–00
41.	ರೆವಿನ್ಯೂ ಲೋಯರ್	50–00
42.	ಕಮರ್ಷಿಯಲ್ ಟ್ಯಾಕ್ಸಸ್ ಭಾಗ–1 ಹೈಯರ್	50–00
43.	ಕೋ–ಆಪರೇಟಿವ್ ಆಡಿಟ್	50–00
44.	ಇನ್ಸೂರೆನ್ಸ್ ಅಡ್ವಾನ್ಸ್‌ಡ್	50–00
45.	ಇನ್ಸೂರೆನ್ಸ್ ಹೈಯರ್	50–00
46.	ಇನ್ಸೂರೆನ್ಸ್ ಲೋಯರ್	50–00
47.	ಕನ್ನಡ	50–00
48.	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್	50–00

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	ವಿ ಷ ಯ	ನಿಗದಿ ಪಡಿಸಲಾದ ಶುಲ್ಕ ರೂ.
49.	ಕರ್ನಾಟಕ ಕನ್ಸ್ಯೂಮರ್ ಪ್ರೋಟಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್	50–00
51.	ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್	25–00
52.	ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್	25–00
53.	ಕೆ.ಪಿ.ಎಸ್.ಸಿ. ರೆಕ್ರೂಟ್‌ಮೆಂಟ್ ರೂಲ್ಸ್	25–00
54.	ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–1	50–00
55.	ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–2	25–00
56.	ಸ್ಪೆಷಲ್ ಲಾಸ್ ಆಂಡ್ ಸರ್ವಿಸ್ ರೂಲ್ಸ್	25–00
58.	ಟ್ರಾನ್ಸ್‌ಲೇಷನ್ ಟೆಸ್ಟ್	25–00
61.	ಎಸ್.ಎ.ಎಸ್ ಭಾಗ–1	50–00
62.	ಎಸ್.ಎ.ಎಸ್ ಭಾಗ–2	50–00
63.	ಎಸ್.ಎ.ಎಸ್ ಭಾಗ–3	50–00
64.	ಟ್ರೆಜರಿ ಅಕೌಂಟ್ಸ್ ಭಾಗ–1	50–00
65.	ಟ್ರೆಜರಿ ಅಕೌಂಟ್ಸ್ ಭಾಗ–2	50–00
66.	ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್	50–00
67.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1	25–00
68.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್) ಭಾಗ–2	25–00
70.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್	25–00
71.	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್	25–00
72.	ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)	50–00
73.	ಕನ್ನಡ ಭಾಷಾ ಮೌಖಿಕ ಪರೀಕ್ಷೆ	--

ಬಿ) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಕಾನೂನು ಮೇರೆಗೆ ರಚಿಸಲಾದ ನಿಗಮಗಳಲ್ಲಿ ಸೇವೆಸಲ್ಲಿಸುತ್ತಿರುವ ಅಭ್ಯರ್ಥಿಗಳು ನಿಗದಿತ ಶುಲ್ಕಗಳನ್ನು ಸಂದಾಯ ಮಾಡಿದಲ್ಲಿ ಮಾತ್ರ ಅವರಿಗೆ ಅನ್ವಯವಾಗುವ ಸೇವೆಯ ನೇಮಕಾತಿ ಷರತ್ತುಗಳನ್ನೊಳಗೊಂಡಂತೆ ಅವರು ತೇರ್ಗಡೆಯಾಗಬೇಕಾಗಿರುವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

ಸಿ) ಕೇಂದ್ರ ಪರಿಹಾರ ಸಮಿತಿಯು ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾಗಿರುವ ಕಾರಣ ಅಲ್ಲಿಯ ಸಿಬ್ಬಂದಿಗೆ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಅಕೌಂಟ್ಸ್ ಲೋಯರ್, ಜನರಲ್ ಲಾ ವಿಷಯಗಳು ಅಲ್ಲದೆ ಅವರುಗಳೂ ನಿಗದಿಪಡಿಸಿರುವ ವಿಷಯಗಳಲ್ಲಿ ತೇರ್ಗಡೆಯಾಗಬೇಕಿರುವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

ಡಿ) ಸ್ಥಳೀಯ ಅಭ್ಯರ್ಥಿಗಳು, ಸ್ಟೈಪೆಂಡರಿ ಪದವೀಧರರು, ದೈನಿಕ ಮುಜರಾಯಿ ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಮತ್ತು ಕರಾರು ಆಧಾರದಲ್ಲಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

ಇ) ಸೇವಾ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಜಿಯನ್ನು ಅಭ್ಯರ್ಥಿಯು ಸೇವೆಸಲ್ಲಿಸುತ್ತಿರುವ ಕಛೇರಿ ಮುಖ್ಯಸ್ಥರು ಸತ್ಯಾಪನೆ ಮಾಡಿ ದೃಢೀಕರಿಸತಕ್ಕದ್ದು.

ಈ) ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ "ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯ ನವದೆಹಲಿ ಇವರು ಪ್ರಕಟಿಸಿರುವ **ಎಂಪ್ಲಾಯ್‌ಮೆಂಟ್ ಸರ್ವೀಸ್ ಮ್ಯಾನ್ಯುಯಲ್**" ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

ಎಫ್) ಸರ್ಕಾರವು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಎಸ್‌ಆರ್ 2007 ದಿನಾಂಕ: 20-04-2008ರಲ್ಲಿ ಕರ್ನಾಟಕ ನಾಗರೀಕ ಸೇವಾ (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅನುಸೂಚಿ-I ಮತ್ತು IIರಲ್ಲಿ ನಿಗದಿಪಡಿಸಿರುವ ವಿವಿಧ ವಿಷಯಗಳ ಪಠ್ಯ ಕ್ರಮಕ್ಕೆ ತಿದ್ದುಪಡಿ ಮಾಡಿರುವ ವಿವರಗಳನ್ನು ಈ ಕೆಳಗೆ ನೀಡಿದೆ.

1. Title and commencement:- (1) These rules may be called the Karnataka Civil Services (Service and Kannada Language Examinations) (First Amendment) Rules, 2008.

2. They shall come into force from the date of their publication in the Official Gazette.

2. Amendment of SCHEDULE- I.- In the Karnataka Civil Services (Service and Kannada Language Examinations) Rules, 1974, (hereinafter referred to as the said rules) in **SCHEDULE-I,** under the heading " II service examination ", in the " Note" specifying syllabi for various examinations",-

(1) Under the heading,-" 3. Revenue (Higher) Examination-Part-I" under the sub-heading Paper-II, under " Minor Acts and Rules" items (vii), and (ix) and (x) and entries relating thereto shall be omitted.

(2) Under the heading " 4. Revenue (Lower)" under sub-heading ' Paper-II' , under " Minor Acts and Rules" items (vii), (ix) and (x) and entries relating thereto shall be omitted.

(3) Under the heading "5. General Law Part-I" under sub-heading "Paper-II" ,-

(a) for serial number 3 and entries relating thereto, the following shall be substituted, namely:-

"3. Motor Vehicles Act, 1988 (Central Act 59 of 1988)."

(b) for serial number 6 and entries relating thereto, the following shall be substituted, namely:-

"6. Prevention of corruption Act, 1988 (Central Act 49 of 1988)"

(c) after serial number 8 and entries relating thereto, the following shall be inserted, namely:-

"9. The Right to Information Act, 2005 (Central Act 22 of 2005) and the rules made thereunder."

(4) Under the heading "Community Development Examination Part-II", Note (1) and (2) shall be Omitted.

(5) for the entries under the heading " 19, Marketing Examination" Under the sub-heading " Paper-II', the following shall be substituted namely:-

"The Weights and Measures (Enforcement) Act,1985 and Rules".

(6) Under the heading "22. Motor Vehicles Examination" , for Serial number 1 and the entries relating thereto the following shall be substituted, namely:-

" 1. Motor Vehicles Act, 1988 (Central Act 59 of 1988) and the Rules made thereunder".

(7) Under the heading "23. Karnataka Police Manual Examination" in chapter XLVIII,-

(a) for item (i) and entries relating thereto the following shall be substituted, namely:-

"(i) Karnataka State Police including Ministerial Services (Recruitment) Rules, 2004"

(b) item (iii) and entries relating thereto shall be omitted;

(8) The heading " 24. Stores Purchase Department Manual Examination" and the entries relating thereto shall be omitted.

(9) Under the heading "26. Departmental Examination in Mining" under sub-heading "Part-II," for item (e) and entries relating thereto, the following shall be substituted, namely:-

"(e) Karnataka Minor Mineral Concession Rules, 1994".

(10) Under the heading "36. Public Works Departmental (Higher) Examination Part-I", under the sub-heading " Paper-II" for the words, figures and brackets "Karnataka Irrigation Act, 1959 (Edition) as amended form time to time" the words, figures and brackets " Karnataka Irrigation Act, 1965 (16 of 1965)" shall be substituted.

(11) Uner the heading " 44. Examination in Recruitment Rules" for item (d) an the entries relating thereto the following shall be substituted, namely:-

"(d) The Karnataka Civil Services (Direct Recruitment by Competitive Examinations and Selection) (General) Rules, 2006."

(12) Under the heading "49. Food and Civil Supplies Examinations" under the sub-heading " Paper-II'. for Serial number 2 and the entries relating thereto the following shall be substituted namely:-

"The Weights and Measures (Enforcement) Act, 1985 and Rules".

3. Amendment of Schedule II.- In schedule II to the said rules, in the **TABLE,** Serial number 33 and the entries relating thereto shall be omitted.

5. <u>ಪರೀಕ್ಷಾ ಕೇಂದ್ರಗಳು:</u> ಪ್ರತಿಯೊಬ್ಬ ಅಭ್ಯರ್ಥಿಯು ಪ್ರಸ್ತುತ ಆತನು ಕೆಲಸ ಮಾಡುತ್ತಿರುವ ಜಿಲ್ಲಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು. ಆದರೆ, ಯಾವುದೇ ಒಬ್ಬ ಅಭ್ಯರ್ಥಿಯು ಅನಂತರ ಇತರ ಕೇಂದ್ರಕ್ಕೆ ವರ್ಗಾವಣೆಯಾದಲ್ಲಿ ಅಥವಾ ಅವನು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಗಳಿಕೆ ರಜೆಯ ಮೇಲಿರುವುದು ಮುಂತಾದ ನಿರ್ದಿಷ್ಟ ವಿಶೇಷ ಕಾರಣಗಳಿದ್ದಲ್ಲಿ ಆಯೋಗವು ಅಂತಹ ಅಭ್ಯರ್ಥಿಗಳಿಗೆ ಬೇರೆ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗುವುದಕ್ಕೆ ಕ್ರಮತೆಗೆದುಕೊಳ್ಳಲಾಗುವುದು. ಆಯೋಗದ ನಿರ್ದಿಷ್ಟ ಅನುಮತಿ ಇಲ್ಲದೆ ಅಭ್ಯರ್ಥಿಗಳು ಬೇರೆ ಕೇಂದ್ರದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಂತಿಲ್ಲ. ಆ ರೀತಿ ಮಾಡಿದ ಅಭ್ಯರ್ಥಿಗಳು ಆಯೋಗ ತೆಗೆದುಕೊಳ್ಳುವ ಕ್ರಮಕ್ಕೆ ಹೊಣೆಯಾಗುವರು.

ಎ(1) ಖಜಾನೆ ಅಕೌಂಟ್ಸ್ ಮತ್ತು ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸ್ ಪರೀಕ್ಷೆಗಳನ್ನು ಹಾಗೂ ಇಲೆಕ್ಟ್ರಿಸಿಟಿ, ಐಎಎಸ್, ಐಪಿಎಸ್ ಮತ್ತು ಐಎಫ್ಎಸ್ ಅಧಿಕಾರಿಗಳಿಗೆ ಕನ್ನಡ ಭಾಷಾ ಪರೀಕ್ಷೆಗಳನ್ನು <u>ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.</u>

(2) ಸಬಾರ್ಡಿನೇಟ್ ಅಕೌಂಟ್ಸ್ ಸೇವಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾದ ನೌಕರರು ಅವರ ನೇಮಕದ ದಿನಾಂಕದಿಂದ ಪ್ರಥಮ ದರ್ಜೆ ಸಹಾಯಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇರದ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿ ಆರು ವರ್ಷಗಳಿಗಿಂತ ಕಡಿಮೆ ಇರದ ಅವಧಿಯ ಸೇವೆ ಸಲ್ಲಿಸಿದ್ದು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ.

ಬಿ) ಸಚಿವಾಲಯದ ಕೈಪಿಡಿ ಪರೀಕ್ಷೆ, ಭಾಷಾಂತರ ಇಲಾಖೆಯ ಭಾಷಾಂತರ ಪರೀಕ್ಷೆ ಭಾರತದ ಕರಾರು ಅಧಿನಿಯಮ, ವಿಶೇಷ ಕಾನೂನು ಮತ್ತು ಸೇವಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ, ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ನಿಯಮಗಳ ಪರೀಕ್ಷೆಗಳು ಮತ್ತು ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಪರೀಕ್ಷೆಗಳು ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.

ಸಿ) ಮುದ್ರಣಾಲಯ ಕೈಪಿಡಿಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳು ಬೆಂಗಳೂರು, ಮೈಸೂರು, ಧಾರವಾಡ, ಮಡಿಕೇರಿ ಮತ್ತು ಗುಲ್ಬರ್ಗಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಡಿ) ಬಂದರುಗಳ ಇಲಾಖೆಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳು ಮಂಗಳೂರು ಮತ್ತು ಕಾರವಾರ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಇ) ಉಳಿದಂತೆ ಇತರೆ ಪರೀಕ್ಷೆಗಳು ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದ್ದು, ಜಿಲ್ಲಾ ಸಂಕೇತ ಸಂಖ್ಯೆಗಳನ್ನು ಅವುಗಳ ಎದುರಿಗೆ ನೀಡಿದೆ. ಈ ಸಂಕೇತ ಸಂಖ್ಯೆಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು:-

ಜಿಲ್ಲೆ	ಸಂಕೇತ	ಜಿಲ್ಲೆ	ಸಂಕೇತ
ಬೆಂಗಳೂರು	01	ಹಾವೇರಿ	16
ಬೆಳಗಾವಿ	02	ಕಾರವಾರ	17
ಬಳ್ಳಾರಿ	03	ಕೋಲಾರ	18
ಬೀದರ್	04	ಕೊಪ್ಪಳ	19
ಬಿಜಾಪುರ	05	ಮಂಡ್ಯ	20
ಬಾಗಲಕೋಟೆ	06	ಮಂಗಳೂರು	21
ಚಾಮರಾಜನಗರ	07	ಮಡಿಕೇರಿ	22
ಚಿಕ್ಕಬಳ್ಳಾಪುರ	08	ಮೈಸೂರು	23
ಚಿಕ್ಕಮಗಳೂರು	09	ರಾಮನಗರ	24
ಚಿತ್ರದುರ್ಗ	10	ರಾಯಚೂರು	25
ಧಾರವಾಡ	11	ಶಿವಮೊಗ್ಗ	26
ದಾವಣಗೆರೆ	12	ತುಮಕೂರು	27
ಗುಲ್ಬರ್ಗಾ	13	ಉಡುಪಿ	28
ಗದಗ್	14	ನವದೆಹಲಿ	29
ಹಾಸನ	15	ಮಸ್ಸೂರಿ	30

6. ಕೇಂದ್ರದ ಬದಲಾವಣೆ: ಪರೀಕ್ಷಾ ಕೇಂದ್ರದ ಬದಲಾವಣೆಗೆ ಸಲ್ಲಿಸುವ ಕೋರಿಕೆಗಳನ್ನು ಪರೀಕ್ಷೆ ಪ್ರಾರಂಭವಾಗುವ ಕನಿಷ್ಠ 15 ದಿನಗಳ ಮೊದಲು ಸಲ್ಲಿಸತಕ್ಕದ್ದು. ಆ ದಿನಾಂಕದ ತರುವಾಯ ಸಲ್ಲಿಸಲ್ಪಡುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಧಿಕೃತ ಕಾರಣಗಳ ಮೇಲೆ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸುವ ನೌಕರರು ವರ್ಗಾವಣೆಯ ಅಥವಾ ಸ್ಥಳ ನಿಯುಕ್ತಿಯ ಆದೇಶಗಳ ದೃಢೀಕೃತ ನಕಲನ್ನು ಅಥವಾ ಸಂದರ್ಭಾನುಸಾರ ಗಳಿಕೆರಜೆ ಮಂಜೂರು ಮಾಡಲಾದ ಅಧಿಕೃತ ಜ್ಞಾಪನಪತ್ರದ ದೃಢೀಕೃತ ನಕಲಿನೊಂದಿಗೆ ಆ ಬಗ್ಗೆ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು. ಸ್ವವಿಳಾಸ ಬರೆದ ಹಾಗೂ ಅವಶ್ಯಕ ಅಂಚೆಚೀಟಿ ಹಚ್ಚಲಾದ ಲಕೋಟೆಯನ್ನು ಪತ್ರ ವ್ಯವಹಾರಕ್ಕಾಗಿ ಲಗತ್ತಿಸತಕ್ಕದ್ದು. (ರಿಜಿಸ್ಟರ್ಡ್ ಅಂಚೆಯಲ್ಲಿ ಕಳುಹಿಸಬೇಕಾದರೆ ಅದಕ್ಕೆ ತಗಲುವ ಸಾಕಷ್ಟು ಅಂಚೆಚೀಟಿ ಹಚ್ಚಿರಬೇಕು).

ಎ) ಅಭ್ಯರ್ಥಿಗಳು ಸೇವಾ ಪರೀಕ್ಷೆಗಳನ್ನು ಆಂಗ್ಲಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಉತ್ತರಿಸಲು ಅನುಮತಿಸಲಾಗುವುದು.

ಬಿ) ಅಭ್ಯರ್ಥಿಯು ಉತ್ತರಗಳನ್ನು ಬರೆಯಲು ಆಂಗ್ಲ ಅಥವಾ ಕನ್ನಡದ ಯಾವುದೇ ಒಂದು ಮಾಧ್ಯಮವನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು. ಅರ್ಧ ಆಂಗ್ಲಭಾಷೆಯಲ್ಲಿ ಮತ್ತು ಅರ್ಧ ಕನ್ನಡದಲ್ಲಿ ಉತ್ತರಿಸಿದಲ್ಲಿ ಅಂತಹ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

ಸಿ) ಓಎಂಆರ್ ಉತ್ತರ ಹಾಳೆಯಲ್ಲಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿ ನೋಂದಣಿ ಸಂಖ್ಯೆ ಮತ್ತು ವರ್ಷನ್ ಕೋಡನ್ನು ಸರಿಯಾಗಿ ನಮೂದಿಸಿ ಗುರುತಿಸಬೇಕು. ಇಲ್ಲವಾದಲ್ಲಿ ಅಂತಹ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

6. ಎ) ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ., ಅಥವಾ ಬಿ.ಎಲ್ ಪದವಿ ಪಡೆದಂತಹ ಕಾನೂನು ಪದವೀಧರರಿಗೆ ಜನರಲ್ ಲಾ ಭಾಗ-1ರ ಪತ್ರಿಕೆ-(1) ಕ್ಕೂ ಮತ್ತು ಜನರಲ್ ಲಾ ಭಾಗ-2 ಕ್ಕೂ ಹಾಗೂ ಬಿ.ಕಾಂ. ಅಥವಾ ಐ.ಕಾಂ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ವಿಷಯದಲ್ಲಿ ತೇರ್ಗಡೆಯಾದವರಿಗೆ ಕಮರ್ಷಿಯಲ್ ಟ್ಯಾಕ್ಸ್ ಹೈಯರ್ ವಿಷಯದ ಪತ್ರಿಕೆ-3ಕ್ಕೂ, ಕೋ-ಆಪರೇಷನ್ ವಿಷಯದ ಪತ್ರಿಕೆ-2ಕ್ಕೂ ಹಾಗೂ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ಓದಿ ಬಿ.ಕಾಂ., ಬಿ.ಬಿ.ಎಂ. ಅಥವಾ ತತ್ಸಮಾನ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕೋ-ಆಪರೇಟಿವ್ ಆಡಿಟ್ ಪರೀಕ್ಷೆಯ 2ನೇ ಪತ್ರಿಕೆಗೆ ವಿನಾಯಿತಿ ಇದೆ. ಹಾಗೆಯೇ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಸಿಷಿಯಲ್ ಅಕೌಂಟೆನ್ಸಿ ವಿಷಯವನ್ನು ಓದಿರುವ ಬಿ.ಕಾಂ. ಪದವೀಧರರಿಗೆ ಎಸ್.ಎ.ಎಸ್. ಭಾಗ-3ರ ಪತ್ರಿಕೆ-1 ಕ್ಕೂ ಹಾಗೂ ಟ್ರೆಜರಿ ಅಕೌಂಟ್ಸ್ ಭಾಗ-2ರ ಪತ್ರಿಕೆ-1ಕ್ಕೂ ವಿನಾಯಿತಿ ಇರುತ್ತದೆ. ವಿನಾಯಿತಿ ಕೋರುವ ಅಭ್ಯರ್ಥಿಗಳು ಈ ತತ್ಸಂಬಂಧ ವಿಷಯಗಳನ್ನು ಅಭ್ಯಸಿಸಿದ್ದ ಬಗ್ಗೆ ತಮ್ಮ ಅರ್ಜಿಯೊಂದಿಗೆ ಬಿ.ಕಾಂ., ಎಲ್.ಎಲ್.ಬಿ. ಅಥವಾ ತತ್ಸಮಾನ ಪದವಿಯ ದೃಢೀಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು ಮತ್ತು ಅರ್ಜಿ ನಮೂನೆಯ ಅಂಕಣ 14ರಲ್ಲಿ ಖಡ್ಡಾಯವಾಗಿ ನಮೂದಿಸತಕ್ಕದ್ದು. ತಪ್ಪಿದಲ್ಲಿ ಅಂತಹ ವಿನಾಯಿತಿಗಳನ್ನು ಪರಿಗಣಿಸಲಾಗುವುದಿಲ್ಲ.

7. ಪ್ರವೇಶ ಪತ್ರ: ವೇಳಾಪಟ್ಟಿಯನ್ನೊಳಗೊಂಡ ಪ್ರವೇಶ ಪತ್ರವನ್ನು ಪರೀಕ್ಷೆಗೆ ಮೊದಲು ಕಳುಹಿಸಲಾಗುವುದು. ಅಭ್ಯರ್ಥಿಗಳು ಆಯೋಗದಿಂದ ನೀಡಲಾದ ಪ್ರವೇಶ ಪತ್ರಗಳನ್ನು ಜೋಪಾನವಾಗಿಟ್ಟಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದನೆಗಳನ್ನು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಯಾವುದೇ ಸಂಧರ್ಭದಲ್ಲಿ ಪರೀಕ್ಷೆಗಳು ಮುಗಿದನಂತರ ಪ್ರವೇಶ ಪತ್ರದ ನಕಲನ್ನು ನೀಡಲಾಗುವುದಿಲ್ಲ.

8. ಪಠ್ಯಪುಸ್ತಕಗಳು: ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೆ ಯಾವುದೇ ಖಾಸಗಿ ಪ್ರಕಾಶಕರ ಪಠ್ಯ ಪುಸ್ತಕಗಳನ್ನು ನಿಷೇಧಿಸಲಾಗಿದೆ.

9. ತೇರ್ಗಡೆಗೆ ಗಳಿಸಬೇಕಾದ ಅಂಕಗಳು:

ಎ) ಯಾವುದೇ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಒಂದು ಪತ್ರಿಕೆಯ ಪರೀಕ್ಷೆಗೆ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಬಿ.ಕಾಂ. ಹಾಗೂ ಕಾನೂನು ಪದವೀಧರರು, ಹಾಗೂ ಲೋಕಸೇವಾ ಆಯೋಗವು ನಡೆಸುವ ವಿಷಯದ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು.

ಬಿ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳನ್ನು ಪ್ರಥಮ ದರ್ಜೆ ಯಲ್ಲಿ ಉತ್ತೀರ್ಣರಾಗಿರುವುದಾಗಿ ಫಲಿತಾಂಶ ಘೋಷಿಸಲಾಗುವುದು.

ಸಿ) ಯಾವುದೇ ಪರೀಕ್ಷೆಯು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದು ಅಭ್ಯರ್ಥಿಯು ಆ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೂ ಅದೇ ವಿಷಯದ ಇತರ ಪತ್ರಿಕೆಗಳಲ್ಲಿ ಆ ಪತ್ರಿಕೆಗೆ ನಿರ್ದಿಷ್ಟಪಡಿಸಲಾದ ಗರಿಷ್ಠ ಅಂಕಗಳಲ್ಲಿ ಶೇಕಡಾ ಅರವತ್ತಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದಿದ್ದಲ್ಲಿ ಅಂತಹವರನ್ನು ಆ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿರುವರೆಂದು ಪರಿಗಣಿಸಲಾಗುವುದು. ಅಂತಹವರು ಪರೀಕ್ಷೆಗಳ ಫಲಿತಾಂಶ ಘೋಷಿಸಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ಪರೀಕ್ಷೆಯ ಉಳಿದ ಪತ್ರಿಕೆಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದು. ಇಲ್ಲದಿದ್ದಲ್ಲಿ ಅಂತಹ ವಿನಾಯ್ತಿಯು ರದ್ದಾಗುವುದು.

10. <u>ಹಾಜರಿ ಪ್ರಮಾಣ ಪತ್ರಗಳು:</u> ಪರೀಕ್ಷೆಗೆ ಹಾಜರಾದ ಬಗ್ಗೆ 'ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ನೀಡಲಾಗುವುದಿಲ್ಲ.

11. <u>ಕನ್ನಡಭಾಷಾ ಲಿಖಿತ ಪರೀಕ್ಷೆಗೆ ಮೌಖಿಕ ಪರೀಕ್ಷೆ:</u>

(1) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರಕಛೇರಿ, ಪಾರ್ಕ್‌ಹೌಸ್, ಬೆಂಗಳೂರು–560001 ಇಲ್ಲಿ ಹಾಗೂ ಆಯೋಗದಿಂದ ನಿರ್ಧರಿಸಲಾಗುವ ಇತರ ಯಾವುದೇ ಕೇಂದ್ರದಲ್ಲಿ ನಡೆಸಲಾಗುವುದು.

<u>ಸೂಚನೆ:</u> (1) ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

(2) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 81 ಎಸ್‌ಎಸ್‌ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ, ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

3) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

12. ಆಯೋಗದ ಆದೇಶ ಸಂಖ್ಯೆ ಇ.ಪ(2) 3774/94–95/ಪಿಎಸ್‌ಸಿ ದಿನಾಂಕ 18ನೇ ಫೆಬ್ರವರಿ 1995ರ ಮೇರೆಗೆ ಬ್ಯಾಟರಿ ಚಾಲಿತ ಪ್ರೋಗ್ರಾಮ್ ಮಾಡದೆ ಇರುವಂತಹ ಕ್ಯಾಲುಕ್ಯುಲೇಟರ್‌ಗಳನ್ನು ಎಸ್.ಎ.ಎಸ್ ಪರೀಕ್ಷೆಗಳಲ್ಲಿ ಉಪಯೋಗಿಸಲು ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ.

13. <u>ತೇರ್ಗಡೆ ಪ್ರಮಾಣ ಪತ್ರಗಳು</u>: ಪ್ರತಿಯೊಂದು ವಿಷಯಕ್ಕೆ ತೇರ್ಗಡೆ ಪ್ರಮಾಣಪತ್ರವನ್ನು ಆಯೋಗದಿಂದ ಫಲಿತಾಂಶವು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾದ ನಂತರ ದೃಢೀಕೃತ ಅಂಚೆಯ ಮೂಲಕ ಕಳುಹಿಸಲಾಗುವುದು. ಪ್ರಮಾಣ ಪತ್ರದಲ್ಲಿ ಮುದ್ರಿತವಾದ ಹೆಸರು ಅಥವಾ ಇನ್ನಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅಭ್ಯರ್ಥಿಗಳು ಕೂಡಲೇ ತಿದ್ದುಪಡಿಗಾಗಿ ಸೂಕ್ತ ದಾಖಲೆಗಳೊಂದಿಗೆ ಆಯೋಗದ ಕಛೇರಿಯನ್ನು ಸಂಪರ್ಕಿಸುವುದು.

(ಸೂಚನೆ: ಪರೀಕ್ಷೆಯ ಪ್ರತಿಭಾಗವನ್ನು ಈ ಉದ್ದೇಶಕ್ಕೆ ಒಂದು ಪ್ರತ್ಯೇಕ ಪರೀಕ್ಷೆ ಎಂದು ಪರಿಗಣಿಸಲಾಗುವುದು)

<u>ಅಂಕಪಟ್ಟಿಗಳು:</u> ಇಲಾಖಾ ಪರೀಕ್ಷೆಯ ಎಲ್ಲಾ ಅಭ್ಯರ್ಥಿಗಳ ಅಂಕಗಳನ್ನು ಆಯೋಗದ ವೆಬ್ ಸೈಟ್ **"http://kpsc.kar.nic.in``** ನಲ್ಲಿ ಫಲಿತಾಂಶ ಪ್ರಕಟವಾದ ದಿನಾಂಕದಂದೇ ಪ್ರಕಟಿಸಲಾಗುವುದು ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ನೀಡಲಾಗುವುದಿಲ್ಲ.

14. <u>ಅಂಕಗಳ ಮರು ಎಣಿಕೆ:</u>

ಎ) ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ಪತ್ರಿಕೆಯ ಅಂಕಗಳ ಮರು ಎಣಿಕೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು, ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು

ಶೇವಣಿಯಾಗಿ ಪ್ರತಿ ಪತ್ರಿಕೆಗೆ 50–00 ರೂ.ಗಳನ್ನು ಕಾರ್ಯದರ್ಶಿ ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಅಂತಹ ಮೊತ್ತವನ್ನು ಸಂದಾಯ ಮಾಡಿದ ಪುರಾವೆಯನ್ನು ತನ್ನ ಹೆಸರು, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯದ ವಿವರಗಳನ್ನು ಅರ್ಜಿಯೊಂದಿಗೆ ಒದಗಿಸತಕ್ಕದ್ದು.

ಬಿ) ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ.

15. <u>ದುರ್ವರ್ತನೆ:</u> ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ ಅನುಚಿತ ಮಾರ್ಗವನ್ನನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ (ಎ) ಅಭ್ಯರ್ಥಿಯ ಆಯ್ಕೆಗಾಗಿ ಆಯೋಗದಿಂದ ನಡೆಸಲಾಗುವ ಯಾವುದೇ ಪರೀಕ್ಷೆಗೆ ಪ್ರವೇಶ ನೀಡುವುದಕ್ಕೆ ಅಥವಾ ಯಾವುದೇ ಸಂದರ್ಶನಕ್ಕೆ ಹಾಜರಾಗುವುದಕ್ಕೆ ಖಾಯಂ ಆಗಿ ಅಥವಾ ಒಂದು ನಿರ್ದಿಷ್ಟ ಅವಧಿಗೆ ಅನರ್ಹಗೊಳಿಸಲಾಗುವುದು ಮತ್ತು (ಬಿ) ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಪರೀಕ್ಷಾ ಕೇಂದ್ರದಲ್ಲಿ ಮೇಲ್ವಿಚಾರಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸದಿದ್ದಲ್ಲಿ, ಅದನ್ನು ದುರ್ವರ್ತನೆಯನ್ನಾಗಿ ಪರಿಗಣಿಸಲಾಗುವುದು ಮತ್ತು ಆ ಕುರಿತು ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

16. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 76, ದಿನಾಂಕ 10ನೇ ಜನವರಿ 1987ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ 649 ಇಎನ್ ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅರಣ್ಯ ಪರೀಕ್ಷೆಯ ಪತ್ರಿಕೆ–2 ರಲ್ಲಿ ತೇರ್ಗಡೆಯಾಗು ವುದರಿಂದ ವಿನಾಯಿತಿ ನೀಡಲಾಗಿದೆ.

17. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 69 ಎಸ್‌ಎಸ್‌ಆರ್ 76, ದಿನಾಂಕ 16ನೇ ಜುಲೈ 1977ರ ಅನುಸಾರವಾಗಿ ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗದಿಂದ ಉಪನಿವಾಸ ಆಯುಕ್ತರು, ಕರ್ನಾಟಕ ಭವನದ ನಿವಾಸ ಆಯುಕ್ತರ ಕಛೇರಿ, ನವದೆಹಲಿ ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

18. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಸಿ 83, ದಿನಾಂಕ 12ನೇ ಅಕ್ಟೋಬರ್ 1983 ಇದರ ಅನುಸಾರವಾಗಿ ಮುಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿರುವ ಕರ್ನಾಟಕ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಮತ್ತು ಐ.ಎಫ್.ಎಸ್ ಪ್ರೊಬೇಷನರುಗಳಿಗೆ ಇಲಾಖಾ ಪರೀಕ್ಷೆಗಳನ್ನು <u>**ಆಯೋಗವು**</u> ಪರೀಕ್ಷೆಗಳ ನಿಯಂತ್ರಣಾಧಿಕಾರಿ, ಲಾಲ್‌ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಾಸನ ಅಕಾಡೆಮಿ, ಮುಸ್ಸೂರಿ, ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

19. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ **ಈ ಮುಂದಿನ ಷರತ್ತುಗಳಿಗೊಳಪಟ್ಟು ಒಬ್ಬ ಅನುಲೇಖಕನ ಸಹಾಯವನ್ನು ಪಡೆಯುವುದಕ್ಕೆ ಅನುಮತಿಸಲಾಗಿದೆ:**

